# ವಿಪ್ರನುಡಿ

ಸ್ವಾವಲಂಬನೆ-ಸಂಘಟನೆ-ಸಂಸ್ಕಾರ

ಸಂಪುಟ-34, ಶ್ರೀ ಶುಭಕೃತ್‌ನಾಮ ಸಂವತ್ಸರ, ಆಷಾಢ ಮಾಸ ಜುಲೈ-2022, ಸಂಚಿಕೆ-4, ಪುಟಗಳು-36, ಬೆಲೆ ರೂ.-15/-

## ಶಿವಗಂಗೆಯ ಶ್ರೀ ಶಾರದಾ ಮಠದಲ್ಲಿ ಶ್ರೀ ಶಂಕರ ಭಗವತ್ಪಾದರ ನೂತನ ದೇವಾಲಯದ ಪ್ರತಿಷ್ಠಾಪನೆ ಹಾಗೂ ಕುಂಭಾಭಿಷೇಕ






ಶೃಂಗೇರಿ ಶ್ರೀ ಶಾರದಾ ಪೀಠದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮಿಗಳು ಹಾಗೂ
ಶಿವಗಂಗೆ ಶಾರದಾ ಪೀಠದ ಶ್ರೀ ಶ್ರೀ ಪುರುಷೋತ್ತಮ ಭಾರತೀ ಸ್ವಾಮೀಜಿಗಳು,




ಶಿವಮೊಗ್ಗ ಜಿಲ್ಲಾ ಬ್ರಾಹ್ಮಣ ಸಂಘದಿಂದ
ಮಹಾಸಭಾ ಅಧ್ಯಕ್ಷರಿಗೆ ಅಭಿನಂದನಾ
ಕಾರ್ಯಕ್ರಮ



ಮಹಾಸಭಾ ಹಾಗೂ
ಮೈಸೂರು ಜಿಲ್ಲಾ ಬ್ರಾಹ್ಮಣ ಸಂಘದ ವತಿಯಿಂದ
ಮೈಸೂರಿನ ಮಹಾರಾಜ ಸನ್ಮಾನ್ಯ ಯದುವೀರ
ಕೃಷ್ಣದತ್ತ ಚಾಮರಾಜ ಒಡೆಯರ್ ರವರಿಗೆ ಸನ್ಮಾನ








ಶಿವಗಂಗೆಯಲ್ಲಿ ಶ್ರೀ ಶಂಕರ ಭಗವತ್ಪಾದರ ನೂತನ ದೇವಾಲಯದ ಪ್ರತಿಷ್ಠಾಪನೆ ಹಾಗೂ ಕುಂಭಾಭಿಷೇಕ



ಜಗದ್ಗುರುಗಳಿಗೆ ಡಾ॥ ಸೂರ್ಯಪ್ರಸಾದ್ ಅವರಿಂದ ಭಿನ್ನವತ್ತಳೆ ಸಮರ್ಪಣೆ



ಹಾಸನ ಜಿಲ್ಲಾ ನಾಗರಿಕ ವೇದಿಕೆಯಿಂದ ಮಹಾಸಭಾ ಅಧ್ಯಕ್ಷರಿಗೆ
ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರ ಸಮ್ಮುಖದಲ್ಲಿ ಸನ್ಮಾನ



ಮೈಸೂರು ಜಿಲ್ಲಾ ಬ್ರಾಹ್ಮಣ ಸಂಘದಿಂದ ಮಹಾಸಭಾ ಅಧ್ಯಕ್ಷರಿಗೆ ಅಭಿನಂದನೆ



ಶ್ರೀ ನಟರಾಜ್ ಜೋಯಿಸ್ ರವರಿಗೆ ಸನ್ಮಾನ



ಶಿವಮೊಗ್ಗ ವಿಪ್ರ ಸಮಾವೇಶದಲ್ಲಿ ಕಿಕ್ಕಿರಿದ ವಿಪ್ರ ಸಮೂಹ



ಬೀದರ್ ಬ್ರಾಹ್ಮಣ ಸಂಘದ ಸಾಮೂಹಿಕ ಉಪನಯನದಲ್ಲಿ ವಟುಗಳು

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**
ಗಾಯತ್ರೀ ಭವನ, ನಂ.3070, (14ನೇ ಅಡ್ಡರಸ್ತೆ), 9ನೇ ಮುಖ್ಯರಸ್ತೆ,
ಗಾಯತ್ರೀ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-70
ದೂರವಾಣಿ : 26771695, 26770066
E-mail : info@akbms.com
Website : www.akbms.com

ಅಧ್ಯಕ್ಷರು
**ಅಶೋಕ ಹಾರನಹಳ್ಳಿ**
ಪ್ರಧಾನ ಕಾರ್ಯದರ್ಶಿ
**ಶ್ರೀಧರಮೂರ್ತಿ ಎಸ್.**

ಖಜಾಂಚಿ
**ವೆಂಕಟೇಶ ಎಸ್. ನಾಯಕ್**

ಸಂಘಟನಾ ಕಾರ್ಯದರ್ಶಿ
**ಡಾ|| ಬಿ.ಎಸ್. ರಾಘವೇಂದ್ರ ಭಟ್**

ವಿಪ್ರನುಡಿ ಪ್ರಕಟಣಾ ಸಮಿತಿ

ಪ್ರಧಾನ ಸಂಪಾದಕರು
**ಡಾ|| ಎಂ.ಕೆ. ಶ್ರೀಧರ್**

ಗೌರವ ಸಲಹೆಗಾರರು
**ಎಂ.ಕೆ. ಭಾಸ್ಕರರಾವ್**
**ಡಾ|| ಎಂ. ಸೂರ್ಯಪ್ರಸಾದ್**

ಸಮಿತಿ ಸದಸ್ಯರು
**ಜ್ಯೋತಿಷಿ ವಿ|| ಡಾ| ಮುದ್ರಾಡಿ ವಾಸುದೇವ ಭಟ್**
**ನಾರಾಯಣ ಭಟ್ ಹುಳೇಗಾರು**
**ಪ್ರಭಾಕರ ಕೆ.ಸಿ**
**ಕಾರ್ತಿಕ್ ಬಾಪಟ್**
**ಹೆಚ್.ವಿ. ಸುಬ್ಬರಾವ್**

ಕಛೇರಿ ಸಮಯ : ಮಂಗಳವಾರದಿಂದ ಶನಿವಾರ
ಬೆಳಿಗ್ಗೆ 10.00 ರಿಂದ 2.00
ಸಂಜೆ 4.00 ರಿಂದ 8.00
ಭಾನುವಾರ ಬೆಳಿಗ್ಗೆ 10.00 ರಿಂದ 2.00
ವಾರದ ರಜಾ : ಸೋಮವಾರ

ಮುದ್ರಕರು : ಪರಿಮಳ ಮುದ್ರಣಾಲಯ
ನಂ 184, 14ನೇ ಮುಖ್ಯರಸ್ತೆ, ಹನುಮಂತನಗರ
ಬೆಂಗಳೂರು-560 050. ದೂ. : 26606061.

# ನಲ್ನುಡಿ

**ಕ್ಷೇತ್ರಂ ಧನಂ ಪುತ್ರಪೌತ್ರಾದಿ ಸರ್ವಂ ಗೃಹಂ ಬಾಂಧವಾಃ ಸರ್ವಮೇತದ್ಧಿ ಜಾತಮ್ ।**
**ಮನಶ್ಚೇನ್ನ ಲಗ್ನಂ ಗುರೋರಂಘ್ರಿಪದ್ಮೇ ತತಃ ಕಿಂ ತತಃ ಕಿಂ ತತಃ ಕಿಂ ತತಃ ಕಿಮ್ ॥**
**ಷಡಂಗಾದಿವೇದೋ ಮುಖೇ ಶಾಸ್ತ್ರವಿದ್ಯಾ ಕವಿತ್ವಾದಿ ಗದ್ಯಂ ಸುಪದ್ಯಂ ಕರೋತಿ ।**
**ಮನಶ್ಚೇನ್ನ ಲಗ್ನಂ ಗುರೋರಂಘ್ರಿ ಪದ್ಮೇ ತತಃ ಕಿಂ ತತಃ ಕಿಂ ತತಃ ಕಿಂ ತತಃ ಕಿಮ್ ॥**

'ಮನುಷ್ಯನಿಗೆ ಹೆಂಡತಿ, ಹಣ, ಮಕ್ಕಳು, ಮೊಮ್ಮಕ್ಕಳು, ಮನೆ, ನೆಂಟರು ಎಲ್ಲವೂ ಉಂಟು. ಆದರೇನು? ಸದ್ಗುರುವಿಗೆ ಪಾದಕಮಲಗಳಲ್ಲಿ ಮನಸ್ಸನ್ನು ತೊಡಗಿಸಿದೇ ಇದ್ದರೆ ಫಲವೇನು? ಫಲವೇನು? ಫಲವೇನು ಫಲವೇನು?

'ಶಿಕ್ಷಾ ಮುಂತಾದ ಆರು ವೇದಾಂಗಗಳಿಂದ ಕೂಡಿದ ವೇದಗಳನ್ನು ಮೀಮಾಂಸಾ ಮುಂತಾದ ಎಲ್ಲ ಶಾಸ್ತ್ರಗಳನ್ನು ಅಧ್ಯಯನ ಮಾಡಿರಬಹುದು. ಗದ್ಯ-ಪದ್ಯ ಕಾವ್ಯಗಳನ್ನು ಚೆನ್ನಾಗಿ ರಚಿಸಿರಬಹುದು. ಆದರೇನು? ಸದ್ಗುರುವಿನ ಪಾದಕಮಲಗಳಲ್ಲಿ ಮನಸ್ಸನ್ನ ನೆಡದಿದ್ದರೆ ಫಲವೇನು? ಫಲವೇನು? ಫಲವೇನು? ಫಲವೇನು?

ಮೇಲ್ಕಂಡ ಶ್ಲೋಕಗಳಲ್ಲಿ ಶ್ರೀ ಶಂಕರಭಗವತ್ಪಾದರು ಗುರುವಿನ ಮಹತ್ವವನ್ನು ತಿಳಿಸಿ, ನಾವೆಲ್ಲರೂ ಅಂತಿಮವಾಗಿ ಎಲ್ಲ ರೀತಿಯ ಏಳಿಗೆಗೆ ಗುರುಗಳನ್ನು ಆಶ್ರಯಿಸಬೇಕೆಂದು ಕರೆ ನೀಡುತ್ತಾರೆ. ಮನುಷ್ಯರು ಹುಟ್ಟಿದಾರಭ್ಯ ಒಂದಲ್ಲಾ ಒಂದು ರೀತಿಯಲ್ಲಿ ಕಾರ್ಯಪ್ರವೃತ್ತ ರಾಗಿರುತ್ತಾರೆ. ಸಂಸಾರವೆಂಬ ಸಮುದ್ರದಲ್ಲಿ ತೊಡಗಿ ಜೀವನಪರ್ಯಂತ ಗಂಡ, ಹೆಂಡತಿ, ಮಕ್ಕಳು, ಮೊಮ್ಮಕ್ಕಳು, ಬಂಧು-ಭಗಿನಿಯರ ಲಾಲನೆ-ಪಾಲನೆಯಲ್ಲಿ, ಐಹಿಕ ಭೋಗ-ಭಾಗ್ಯಗಳನ್ನು ಅನುಭವಿಸುವುದರಲ್ಲಿ, ಭೌತಿಕ ವಸ್ತುಗಳ ಸಂಗ್ರಹಣೆಯಲ್ಲಿ ನಿರತರಾಗಿರುತ್ತಾರೆ. ಈ ಹಂತವನ್ನು ದಾಟಿದ ಇನ್ನೂ ಕೆಲವರು ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ್ಯ, ಕಲ್ಪಗಳಿಂದ ಕೂಡಿದ ವೇದಗಳನ್ನು, ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವ ಮೀಮಾಂಸಾ, ಉತ್ತರ ಮೀಮಾಂಸಾ ಅಥವಾ ವೇದಾಂತ ಗ್ರಂಥಗಳ ಅಧ್ಯಯನದಲ್ಲಿ ತೊಡಗಿ ಜ್ಞಾನಾರ್ಜನೆ ಹೊಂದುತ್ತಾರೆ. ಇನ್ನು ಹಲವರು ಜನ್ಮಜಾತ ಪ್ರತಿಭೆಯಿಂದಾಗಿ, ನೂರಾರು ಕಾವ್ಯಗಳನ್ನು, ಗದ್ಯ-ಪದ್ಯ-ನಾಟಕಾದಿ ಕಾವ್ಯಗಳನ್ನು ರಚಿಸಿರುತ್ತಾರೆ. ಇದರಲ್ಲೇ ಆಯಸ್ಸು ಪೂರೈಸುತ್ತದೆ. ಕಾಲವು ನಮ್ಮೊಂದಿಗೆ ಆಟವಾಡುತ್ತದೆ. (ಕಾಲಃ ಕ್ರೀಡತಿ ಗಚ್ಛತಿ ಆಯುಃ|). ಈ ಮೂರೂ ರೀತಿಯ ಜನರು ಸದ್ಗುರುವಿನ ಬಗ್ಗೆ ಯೋಚಿಸುವುದಿಲ್ಲ. ಮೋಕ್ಷ ಹೊಂದಲು ಶ್ರೇಷ್ಠ ಗುರುವಿನ ಆಶ್ರಯ ಪಡೆಯುವುದಿಲ್ಲ. ದಾಸವರೇಣ್ಯರು ತಿಳಿಸಿದಂತೆ, 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂಬ ಮಹತ್ತ್ವವನ್ನು ಅರ್ಥ ಮಾಡಿಕೊಳ್ಳುವುದಿಲ್ಲ. ಆದ್ದರಿಂದ ನಾವು ಯಾವ ಪ್ರಾಪಂಚಿಕ ಕೆಲಸಗಳಲ್ಲಿ ತೊಡಗಿದರೂ, ಸದ್ಗುರುವಿನ ಚರಣಕಮಲಗಳಲ್ಲಿ ಸದಾ ನಮ್ಮ ದೃಷ್ಟಿ ಇಡಬೇಕೆಂದು ಆಚಾರ್ಯರ ಕಿವಿಮಾತು.

## ವಿಪ್ರನುಡಿಯಲ್ಲಿ ಜಾಹೀರಾತಿಗಾಗಿ ಮನವಿ

**ಪ್ರತಿ ತಿಂಗಳ ಜಾಹೀರಾತಿನ ದರ ಹೀಗಿದೆ.**

| | | | | |
|---|---|---|---|---|
| 1. | ಹೊರ ರಕ್ಷಾ ಪುಟ (ವರ್ಣ) | .. | ರೂ. | 30,000/= |
| 2. | ಒಳ ರಕ್ಷಾ ಪುಟ (ವರ್ಣ) | .. | ರೂ. | 20,000/= |
| 3. | ಒಳ ಪುಟ (ವರ್ಣ) | .. | ರೂ. | 15,000/= |
| 4. | ಒಳ ಪುಟ (ಕಪ್ಪು ಬಿಳುಪು) | .. | ರೂ. | 10,000/= |
| 5. | ಒಳ ಅರ್ಧ ಪುಟ (ಕಪ್ಪು ಬಿಳುಪು) | .. | ರೂ. | 5,000/= |
| 6. | ಒಳ ಕಾಲು ಪುಟ (ಕಪ್ಪು ಬಿಳುಪು) | .. | ರೂ. | 2,500/= |
| 7. | ಎರಡು ಸಾಲಿನ ಪ್ರಕಟಣೆ | .. | ರೂ. | 1,000/= |
| 8. | ಒಂದು ಪುಟ ಪ್ರಾಯೋಜಕತ್ವ | .. | ರೂ. | 2,000/= |

# ತತ್ತ್ವಬೋಧಃ

ಸ್ವಾಮಿ ಶಿವಪ್ರಕಾಶಾನಂದ ಸರಸ್ವತಿ

## ಮುನ್ನುಡಿ :

ಸನಾತನ ಧರ್ಮದ ಆಧಾರವಾದಂತಹ ಶಾಸ್ತ್ರವು ವೇದ. ವೇದಶಾಸ್ತ್ರದಲ್ಲಿ ಕರ್ಮಕಾಂಡ ಹಾಗೂ ಜ್ಞಾನಕಾಂಡ ಎಂಬ ಎರಡು ಕಾಂಡಗಳಿವೆ. ಅವುಗಳಲ್ಲಿ ಕರ್ಮಕಾಂಡವು ಅಗ್ನಿಹೋತ್ರಾದಿ ಕರ್ಮಗಳನ್ನು ತಿಳಿಸಿದರೆ ಜ್ಞಾನಕಾಂಡವು ಪಾರಮಾರ್ಥಿಕ ಸತ್ಯವಾದಂತಹ ಪರಬ್ರಹ್ಮನ ತತ್ತ್ವವನ್ನು ಪ್ರತಿಪಾದಿಸುತ್ತದೆ. ವೇದಗಳ ಅಂತ್ಯಭಾಗದಲ್ಲಿರುವ ಈ ಜ್ಞಾನಕಾಂಡವು ವೇದಾಂತ ಹಾಗೂ ಉಪನಿಷತ್ತು ಎಂದು ಪ್ರಖ್ಯಾತವಾಗಿದೆ.

ಆತ್ಮನ ಯಥಾರ್ಥವನ್ನು ತಿಳಿಯಲು ಉಪನಿಷತ್ತಿನ ವಾಕ್ಯಗಳೇ ಪ್ರಮಾಣ. ಮಹಾಭಾರತದ ಭಾಗವಾದ ಭಗವದ್ಗೀತೆ ಹಾಗೂ ಬಾದರಾಯಣ ಮಹರ್ಷಿ ರಚಿಸಿದ ಬ್ರಹ್ಮಸೂತ್ರಗಳು ಈ ವೇದಾಂತದ ಪ್ರಮೇಯಗಳನ್ನು ಇನ್ನಷ್ಟು ಸ್ಪಷ್ಟಪಡಿಸುತ್ತದೆ. ಉಪನಿಷತ್ತು, ಭಗವದ್ಗೀತೆ ಹಾಗೂ ಬ್ರಹ್ಮಸೂತ್ರ ಈ ಮೂರು ಗ್ರಂಥಗಳ ಸಮೂಹವನ್ನು ಪ್ರಸ್ಥಾನತ್ರಯ ಎಂದು ಕರೆಯುವುದು ರೂಢಿ. ಪ್ರಸ್ಥಾನತ್ರಯದ ಆಶಯವನ್ನು ವಿಶದವಾಗಿ ತಿಳಿಸಲೆಂದು ಶ್ರೀ ಶಂಕರಾಚಾರ್ಯರು ಭಾಷ್ಯಗಳನ್ನು ರಚಿಸಿದ್ದಾರೆ.

ಈ ಮೇಲಿನ ಗ್ರಂಥಗಳನ್ನು ನೇರವಾಗಿ ಅಧ್ಯಯನ ಮಾಡುವುದು ಆರಂಭಿಕರಿಗೆ ಅಷ್ಟು ಸುಲಭವಲ್ಲ. ಹಾಗಾಗಿ ಶಂಕರಾಚಾರ್ಯರು ಹಾಗೂ ಇತರ ಆಚಾರ್ಯರು ವೇದಾಂತದ ತಿರುಳನ್ನು ಸರಳ ಹಾಗೂ ಸಂಕ್ಷಿಪ್ತ ರೀತಿಯಲ್ಲಿ ತಿಳಿಸುವಂತಹ ಪ್ರಕರಣ ಗ್ರಂಥಗಳನ್ನು ಬರೆದಿದ್ದಾರೆ. ತತ್ತ್ವಬೋಧ ಎನ್ನುವ ಪ್ರಸ್ತುತ ಗ್ರಂಥವು ಇಂಥವುಗಳಲ್ಲಿ ಒಂದು.

ತತ್ತ್ವಬೋಧವನ್ನು ರಚಿಸಿದವರು ಯಾರೆಂಬುದು ತಿಳಿದಿಲ್ಲ. ಇದನ್ನು ಆದಿ ಶಂಕರಾಚಾರ್ಯರೇ ರಚಿಸಿದ್ದಾರೆ ಎಂದು ಕೆಲವರ ನಂಬಿಕೆಗೆ ಯಾವ ಆಧಾರವೂ ಕಂಡುಬರುವುದಿಲ್ಲ. ಗ್ರಂಥದ ಆದಿಯಲ್ಲಿ ಲೇಖಕರು ತಮ್ಮ ಗುರುಗಳನ್ನು ಸ್ಮರಿಸುತ್ತಾ 'ವಾಸುದೇವೇಂದ್ರಯೋಗಿದ್ರಂ' ಎಂದಿದ್ದಾರೆ. ಇದರಿಂದ ಅವರ ಗುರುಗಳ ಹೆಸರು ವಾಸುದೇವೇಂದ್ರಯೋಗೀಂದ್ರ ಎಂಬುದನ್ನು ತಿಳಿಯಬಹುದು. ವೇದಾಂತದ ಈ ಗ್ರಂಥವು ವೇದಾಂತದಲ್ಲಿ ಉಪದೇಶಿಸಲ್ಪಡುವ ಜೀವ-ಬ್ರಹ್ಮ-ಐಕ್ಯವನ್ನು ಅತ್ಯಂತ ಸಂಕ್ಷಿಪ್ತವಾಗಿ ತಿಳಿಸುತ್ತದೆ. ಅಷ್ಟೇ ಅಲ್ಲದೆ ವೇದಾಂತದಲ್ಲಿ ಸಾಮಾನ್ಯವಾಗಿ ಉಪಯೋಗಿಸಲ್ಪಡುವ ಹಲವಾರು ಪಾರಿಭಾಷಿಕ ಶಬ್ದಗಳನ್ನು ಈ ಗ್ರಂಥವು ಪರಿಚಯಿಸುತ್ತದೆ. ವೇದಾಂತದ ಅಧ್ಯಯನಕ್ಕೆ ಅಧಿಕಾರಿ, ಆತ್ಮ ಹಾಗೂ ಅನಾತ್ಮಗಳ ವಿವೇಕ, ಬ್ರಹ್ಮ, ಮಾಯೆ, ತತ್ತ್ವಮಸಿ ಎಂಬ ಮಹಾವಾಕ್ಯದ ಅರ್ಥ ಹಾಗೂ ಬ್ರಹ್ಮಜ್ಞಾನದ ಫಲ ಈ ವಿಷಯಗಳನ್ನು ಕ್ರಮಬದ್ಧವಾಗಿ ತಿಳಿಸಲಾಗಿದೆ. ವೇದಾಂತದಲ್ಲಿ ಪ್ರವೇಶವನ್ನು ಬಯಸುವ ಜಿಜ್ಞಾಸುಗಳಿಗೆ ಈ ಗ್ರಂಥವು ವರದಾನದಂತಿದೆ.

**ಮಂಗಳ:**

**ವಾಸುದೇವೇಂದ್ರಯೋಗೀಂದ್ರಂ ನತ್ವಾ ಜ್ಞಾನಪ್ರದಂ ಗುರುಮ್।**

**ಮುಮುಕ್ಷೂಣಾಂ ಹಿತಾರ್ಥಾಯತತ್ತ್ವಬೋಧೋಽಭಿಧೀಯತೇ॥**

ಅನುವಾದ: ಜ್ಞಾನವನ್ನು ಕರುಣಿಸಿದ ಗುರುಗಳಾದ ವಾಸುದೇವೇಂದ್ರಯೋಗೀಂದ್ರರಿಗೆ ನಮಸ್ಕರಿಸಿ ಮುಮುಕ್ಷುಗಳ ಹಿತಕ್ಕಾಗಿ ತತ್ತ್ವಬೋಧವು ಹೇಳಲ್ಪಡುತ್ತದೆ.

**ವಿವರಣೆ:** ಗ್ರಂಥದ ಆದಿಯಲ್ಲಿ ಮಂಗಳಾಚರಣೆಯನ್ನು ಮಾಡುವುದರಿಂದ ಗ್ರಂಥದ ರಚನೆಯುಲ್ಲಿ ಬರುವ ವಿಘ್ನಗಳು ನಿವಾರಿಸಲ್ಪಡುತ್ತದೆ ಹಾಗೂ ಗ್ರಂಥವು ಸರಿಯಾದ ಓದುಗರನ್ನು ತಲುಪುತ್ತದೆ ಎಂಬುದು ಪರಂಪರಾಗತವಾದ ವಿಶ್ವಾಸ. ಗ್ರಂಥವನ್ನು ರಚಿಸಿದ ಆಚಾರ್ಯಪ್ರವರರು ತಮ್ಮ ಗುರುಗಳಿಗೆ ನಮಸ್ಕರಿಸುವ ಮೂಲಕ ಮಂಗಳಾಚರಣೆಯನ್ನು ಮಾಡಿದ್ದಾರೆ.

ತತ್ತ್ವಬೋಧ ಎನ್ನುವ ಗ್ರಂಥದ ಹೆಸರಿನಿಂದಲೇ ಇದರ ವಿಷಯ ವೇನೆಂದು ತಿಳಿಯಬಹುದು. ತತ್ತ್ವ ಎಂದರೆ ಪಾರಮಾರ್ಥಿಕವಾದ ವಸ್ತು. ಅದುವೇ ವೇದಾಂತದಲ್ಲಿ ಬ್ರಹ್ಮ, ಪರಮಾತ್ಮಾ ಇತ್ಯಾದಿ ಶಬ್ದಗಳಿಂದ ಕರೆಯಲ್ಪಡುತ್ತದೆ. ಅದರ ಬೋಧ ಎಂದರೆ ಜ್ಞಾನ. ಈ ಗ್ರಂಥವು ಮುಮುಕ್ಷುಗಳ ಹಿತಕ್ಕಾಗಿ ರಚಿಸಲ್ಪಟ್ಟಿದೆ. ಹಾಗಾಗಿ ಮುಮುಕ್ಷುಗಳೇ ಈ ಗ್ರಂಥದ ಅಧ್ಯಯನಕ್ಕೆ ಅಧಿಕಾರಿಗಳು ಹಾಗೂ ಮುಮುಕ್ಷುಗಳು ಬಯಸುವ ಮೋಕ್ಷವೇ ಈ ಗ್ರಂಥದ ಪ್ರಯೋಜನ ಎಂಬುದು ಸೂಚಿಸಿದಂತಾಗುತ್ತದೆ. ಗ್ರಂಥ ಹಾಗೂ ಪ್ರಮೇಯ ವಾದ ವಸ್ತು ಇವುಗಳ ನಡುವಿನ ಪ್ರತಿಪಾದ್ಯ-ಪ್ರತಿಪಾದಕ-ಸಂಬಂಧವಂತೂ ಸ್ಪಷ್ಟವೇ ಆಗಿದೆ.

**ಮುಂದುವರೆಯುವುದು**


### ವಿಪ್ರನುಡಿಗೆ ಚಂದಾದಾರರಾಗಲು ಮನವಿ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಮುಖವಾಣಿಯಾದ 'ವಿಪ್ರನುಡಿ' ಹೊಸ ವಿನ್ಯಾಸದೊಂದಿಗೆ ಪ್ರಕಟವಾಗುತ್ತಿದೆ. ಸಂಚಿಕೆ ಇನ್ನಷ್ಟು ಚೆನ್ನಾಗಿ ಮೂಡಿಬರಲು ತಮ್ಮ ಸಲಹೆಗೆ ಸ್ವಾಗತ. ಮುದ್ರಣ ದುಬಾರಿಯಾಗಿರುವ ಈ ಕಾಲದಲ್ಲಿ ಪತ್ರಿಕೆಯನ್ನು ಎಲ್ಲರಿಗೂ ಉಚಿತವಾಗಿ ತಲುಪಿಸಲು ಕಷ್ಟಸಾಧ್ಯ. ಆದ್ದರಿಂದ ತಾವು 'ವಿಪ್ರನುಡಿ'ಗೆ ಚಂದಾದಾರರಾಗಬೇಕೆಂದು ಸಂಪಾದಕ ಮಂಡಳಿಯ ವಿನಂತಿ. ಮೂರು ವರ್ಷಕ್ಕೆ 500/= ರೂ.ಗಳನ್ನು ನೀಡಿ ವಿಪ್ರನುಡಿ ಚಂದಾದಾರರಾಗಲು ವಿನಂತಿಸುತ್ತೇವೆ. ಈ ವಿಪ್ರನುಡಿ ಚಂದಾ ಹಣವನ್ನು ಪ್ರತ್ಯೇಕವಾಗಿ ತೆಗೆದಿಡಲಾಗುತ್ತದೆ. ದಯವಿಟ್ಟು ತಾವು ಹಾಗೂ ತಮ್ಮ ಬಂಧುಗಳು ಶೀಘ್ರವೇ ಚಂದಾದಾರರಾಗಬೇಕೆಂದು ಸಂಪಾದಕ ಮಂಡಲಿ ವಿನಂತಿಸುತ್ತದೆ.

# ಅಧ್ಯಕ್ಷರ ನುಡಿ



**ಆತ್ಮೀಯ ವಿಪ್ರಬಂಧುಗಳಿಗೆ ನಮಸ್ಕಾರಗಳು.**

ಕೇಂದ್ರ ಸರ್ಕಾರ ಸಂವಿಧಾನದ ಅಡಿಯಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಶೇ.10% ಮೀಸಲಾತಿ ಕಲ್ಪಿಸಿದೆ. ಆದರೆ ಅದು ರಾಜ್ಯದಲ್ಲಿ ಸಮರ್ಪಕವಾಗಿ ಜಾರಿಯಾಗಬೇಕಷ್ಟೆ. ಹೀಗೆ ಇದು ಸಮರ್ಪಕವಾಗಿ ಜಾರಿಯಾದರೆ ಬ್ರಾಹ್ಮಣ ಸಮಾಜದಲ್ಲಿ ಆರ್ಥಿಕವಾಗಿ ದುರ್ಬಲರಾದವರಿಗೂ ಸಹಾಯವಾದೀತು ಎಂಬ ಚರ್ಚೆ ಆಗಾಗ್ಗೆ ಹಲವು ವೇದಿಕೆಗಳಲ್ಲಿ ನಡೆದದ್ದುಂಟು. ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲನೆ ನಡೆಸಿ ಆದಷ್ಟು ಬೇಗ ಅನುಷ್ಠಾನಗೊಳಿಸಬೇಕೆಂದು ಸರ್ಕಾರಕ್ಕೆ ಕೇಳಿಕೊಂಡಿರುತ್ತೇವೆ.

ಹೀಗೆ ಇವೆಲ್ಲವೂ ಏನೇ ಆದರೂ ಸರ್ಕಾರದ ಇತಿಮಿತಿ ಯಲ್ಲಿ ನಡೆಯುವಂತಹದು. ಬ್ರಾಹ್ಮಣ ಮಹಾಸಭಾ ಈ ಸವಾಲುಗಳನೆಲ್ಲ ಮನಗೊಂಡು ದುರ್ಬಲರಾದ ವಿಪ್ರ ವರ್ಗಕ್ಕೆ ಅನುಕೂಲವಾಗುವಂತೆ ಎರಡು ಮಹತ್ವಾಕಾಂಕ್ಷೆ ಯೋಜನೆಗೆ ಚಾಲನೆ ನೀಡಿದೆ. ಅವುಗಳೆಂದರೆ ಮಾಸಾಶನ ಹಾಗೂ ವಿದ್ಯಾರ್ಥಿವೇತನ. ಈ ಯೋಜನೆಗಳು ಮಹಾಸಭಾಗೆ ಆರ್ಥಿಕ ಹೊರೆಯಾದರೂ ಸದೃಢ ಸಮಾಜವನ್ನು ನಿರ್ಮಿಸುವಲ್ಲಿ ಇಡಲೇಬೇಕಾದ ಮಹತ್ವದ ಹೆಜ್ಜೆ ಎಂದು ಸಮಸ್ತ ಕಾರ್ಯಕಾರಿಣಿ ಸದಸ್ಯರು ಹಾಗೂ ಪದಾಧಿಕಾರಿಗಳೆಲ್ಲರೂ ಸೇರಿ ನಿಶ್ಚಯಿಸಿದ್ದೇವೆ.

ಈ ರೀತಿಯ ಸಹಾಯ ಬಯಸಿ ಬರುವ ಅರ್ಜಿಯನ್ನು ಕೂಲಂಕಷವಾಗಿ ಪರಿಶೀಲಿಸಿ ಮಹಾಸಭಾ ಸಿದ್ಧಪಡಿಸಿದ ಮಾನದಂಡದ ಆಧಾರದ ಮೇಲೆ ಫಲಾನುಭವಿಗಳನ್ನು ಗುರುತಿಸುವ ಕಾರ್ಯವನ್ನು ಮಹಾಸಭಾ ಮಾಡಲಿದೆ. ಮುಂಬರುವ ದಿನಗಳಲ್ಲಿ ಈ ಯೋಜನೆಗಳಿಗಾಗಿಯೇ ಶಾಶ್ವತವಾದ ನಿಧಿಯನ್ನು ಹಾಗೂ ಶಾಶ್ವತವಾದ ಆದಾಯದ ಮೂಲವನ್ನು ಹಾಗೂ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಹಲವು ಯೋಜನೆಗಳನ್ನು ಸಿದ್ಧಪಡಿಸುತ್ತಿದೆ. ಹಾಗೂ ಇದರ ಸಂಪೂರ್ಣ ವಿವರಗಳೊಂದಿಗೆ ಮಹಾಸಭೆಯು ನಿಮ್ಮನ್ನು ಕೆಲವೇ ದಿನಗಳಲ್ಲಿ ಸಂಪರ್ಕಿಸುತ್ತದೆ. ಆ ಸಂದರ್ಭದಲ್ಲಿ ತಾವುಗಳೆಲ್ಲರೂ ತನು, ಮನ, ಧನಗಳೊಂದಿಗೆ ಮಹಾಸಭೆಯ ಬೆಂಬಲಕ್ಕೆ ನಿಲ್ಲಲಿದ್ದೀರಿ ಎಂದು ಭಾವಿಸಿದ್ದೇನೆ. ಇಂತಹ ಮಹತ್ವಾಕಾಂಕ್ಷೆ ಯೋಜನೆಗೆ ಸರ್ಕಾರದ ಸಹಾಯವನ್ನೂ ಬಯಸಿ ನಮ್ಮ ಮನವಿಯನ್ನು ಸಲ್ಲಿಸಿದ್ದೇವೆ.

ಇದೇ ಸಂದರ್ಭದಲ್ಲಿ ಕೆಲವು ನಿರ್ದಿಷ್ಟ ಮಠಗಳಿಗೆ ಹಾಗೂ ಮಠಗಳಲ್ಲಿರುವ ಗುಡಿ ಗೋಪುರಗಳ ಜೀರ್ಣೋದ್ಧಾರಕ್ಕೆ ಸರ್ಕಾರದ ನೆರವನ್ನು ನೀಡಬೇಕೆಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ನಿಯೋಗ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದೆ. ಹಾಗೂ ಸರ್ಕಾರ ಈ ಬಗ್ಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದಾಗಿ ಭರವಸೆ ನೀಡಿದೆ ಎಂದು ತಿಳಿಸಲು ಹರ್ಷಿಸುತ್ತೇನೆ.

ಇದಲ್ಲದೆ ಮುಂದಿನ ದಿನಗಳಲ್ಲಿ ರಾಜ್ಯಮಟ್ಟದ ಯುವ ಸಮಾವೇಶ ಹಾಗೂ ಮಹಿಳಾ ಸಮಾವೇಶವನ್ನು ಮಹಾಸಭಾ ಹಮ್ಮಿಕೊಳ್ಳಲಿದೆ. ಈಗಾಗಲೇ ಯುವ ಘಟಕದ ಹಾಗೂ ಮಹಿಳಾ ಘಟಕದ ಸಂಚಾಲಕರು ಈ ವಿಷಯದ ಬಗ್ಗೆ ಕಾರ್ಯಪ್ರವೃತ್ತರಾಗಿದ್ದಾರೆ.

ಇತ್ತೀಚೆಗೆ ಮಹಾಸಭೆಯ ಕಾರ್ಯ ವೈಖರಿಯನ್ನು ಗಮನಿಸಿ ಹಾಗೂ ಮಹಾಸಭೆಯ ಪದಾಧಿಕಾರಿಗಳ ಅತ್ಯುತ್ಸಾಹದ ಫಲವಾಗಿ ಹಲವಾರು ಸಂಘ ಸಂಸ್ಥೆಗಳು ಮಹಾಸಭೆಯೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡು ರಿಯಾಯಿತಿ ದರದಲ್ಲಿ ತಮ್ಮ ಸೇವೆಯನ್ನು ಒದಗಿಸಲು ಮುಂದೆ ಬಂದಿವೆ. ಅವುಗಳಲ್ಲಿ ಹೆಸರಾಂತ ವಿದ್ಯಾಸಂಸ್ಥೆಗಳಾದ ಬೇಸ್, ಯಶಸ್ ಅಕಾಡೆಮಿ, ಅನಲಾಗ್ ಐಎಎಸ್ ಅಕಾಡೆಮಿ ಮತ್ತು ಅಡೆನ್ ವಿದ್ಯಾಸಂಸ್ಥೆಗಳು ಸೇರಿವೆ ಎಂದು ತಿಳಿಸಲು ಹರ್ಷಿಸುತ್ತೇನೆ.

ಇದಲ್ಲದೆ ಹಲವು ದಿವಸಗಳಿಂದ ನೆನೆಗುದಿಗೆ ಬಿದ್ದಿದ್ದ ಕಟ್ಟಡ ನವೀಕರಣಕ್ಕೂ ಚಾಲನೆ ನೀಡಲಾಗಿದೆ. ಹೀಗೆ ನಿಮ್ಮೆಲ್ಲರ ಸಹಕಾರದಿಂದ ಮಹಾಸಭಾಗೊಂದು ಹೊಸ ದಿಕ್ಕು ದೆಸೆ ಒದಗಿಬಂದಿದೆ ಎಂದರೆ ತಪ್ಪಾಗಲಾರದು. ಇದೆಲ್ಲ ಅಭಿವೃದ್ಧಿ ಕಾರ್ಯಕ್ರಮದ ನಡುವೆ ಮನೆಮನಗಳಿಗೆ ಮುದ ನೀಡುವ ಸಾಂಸ್ಕೃತಿಕ ಕಾರ್ಯಕ್ರಮಗಳೂ ಕೂಡ ಮಹಾಸಭೆಯ ನೇತೃತ್ವದಲ್ಲಿ ಮೂಡಿ ಬರಬೇಕೆಂಬ ಮಹದಾಸೆಯೊಂದಿಗೆ ಮಹಾಸಭೆಯು ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರತ್ಯೇಕವಾದ ಸಮಿತಿಯನ್ನು ರಚಿಸಿ ಅದರ ಅಧಿಕೃತ ಉದ್ಘಾಟನೆಯನ್ನು ಇದೇ ಬರುವ ಜುಲೈ 30ರಂದು ಭಾರತೀಯ ವಿದ್ಯಾಭವನದಲ್ಲಿ ನಡೆಸಲು ನಿಶ್ಚಯಿಸಲಾಗಿದೆ. ನೀವೆಲ್ಲರೂ ಈ ಕಾರ್ಯಕ್ರಮದಲ್ಲಿ ತಪ್ಪದೇ ಭಾಗವಹಿಸಬೇಕೆಂದು ತಮ್ಮೆಲ್ಲರಿಗೂ ಕಳಕಳಿಯ ವಿನಂತಿ. ಕಾರ್ಯಕ್ರಮದ ವಿವರಗಳನ್ನು ಅತೀ ಶೀಘ್ರದಲ್ಲಿ ಮಹಾಸಭೆಯ ಡಿಜಿಟಲ್ ವೇದಿಕೆಯ ಮೂಲಕ ತಮ್ಮೊಂದಿಗೆ ಹಂಚಿಕೊಳ್ಳಲಾಗುವುದು.

**॥ ಸರ್ವೇಜನಾಃ ಸುಖಿನೋಭವಂತು ॥**

**ಅಶೋಕ ಹಾರನಹಳ್ಳಿ**

**ಮಹಾಸಭಾಧ್ಯಕ್ಷರು.**

# ಸಂಪಾದಕೀಯ

**ಆತ್ಮೀಯ ವಿಪ್ರಬಂಧುಗಳೇ,**

ನಮಸ್ಕಾರ. ನಮ್ಮೆಲ್ಲರ ಬಾಳಿನಲ್ಲಿ ಮಹತ್ವದ ಪಾತ್ರ ವಹಿಸಿದವರು ನಮ್ಮ ತಾಯಿ–ತಂದೆಯವರು. ನಮ್ಮ ಸಂಪೂರ್ಣ ಬೆಳವಣಿಗೆಗೆ ಬೆಂಬಲವಾಗಿ ನಿಂತು, ನಮ್ಮ ಆಶೋತ್ತರಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿ, ಸೇವಾ–ತ್ಯಾಗಗಳ ಮೂಲಕ ನಮ್ಮನ್ನು ರೂಪಿಸಿದ ಅವರಿಗೆ ಈ ಗುರುಪೂರ್ಣಿಮೆ ಸಂದರ್ಭದಲ್ಲಿ ಸಾಷ್ಟಾಂಗ ಪ್ರಣಾಮಗಳು. ನಮ್ಮ ಭಾರತೀಯ ಸಂಪ್ರದಾಯದಲ್ಲಿ ತಾಯಿ–ತಂದೆಯರಿಗೆ, ಗುರುಗಳಿಗೆ ಮೊದಲ ಪ್ರಾಶಸ್ತ್ಯ ನೀಡಿರುವುದು ಹೊಸದೇನಲ್ಲ. ತೈತ್ತಿರೀಯೋಪನಿಷತ್ ನಲ್ಲಿ ಮೊದಲು ತಾಯಿ, ನಂತರ ತಂದೆ, ಗುರುಗಳಿಗೆ ನಮಸ್ಕಾರ ಸಲ್ಲಿಸಿ, ಅವರನ್ನು ಪ್ರತ್ಯಕ್ಷ ದೇವರೆಂದು ಭಾವಿಸಿ ಎಂಬ ಋಷಿಗಳ ಆದೇಶವಿದೆ. (**ಮಾತೃ ದೇವೋಭವ । ಪಿತೃದೇವೋ ಭವ । ಆಚಾರ್ಯ ದೇವೋಭವ** ।) ಗುರು, ಆಚಾರ್ಯ ಎಂಬ ಪದಗಳೇ ಅರ್ಥಗರ್ಭಿತವಾದವು. **'ಗು'** ಎಂದರೆ ಕತ್ತಲೆ, ಅಜ್ಞಾನ; **'ರು'** ಎಂದರೆ ನಿವಾರಣೆ. ಗುರು ಎಂದರೆ ಕತ್ತಲೆ, ಅಜ್ಞಾನ, ಅವಿದ್ಯೆಯನ್ನು ನಿವಾರಣೆ ಮಾಡುವವನು ಎಂದರ್ಥ. ಗಾಢಾಂಧಕಾರದಿಂದ ಕೂಡಿದ ಜಗತ್ತನ್ನು ತನ್ನ ಪ್ರಖರ ಕಾರಣ ಗಳಿಂದ ಹೇಗೆ ಸೂರ್ಯನು ಬೆಳಗಿಸುತ್ತಾನೋ, ಅ ತರಹ ಗುರುವು ನಮ್ಮ ಅಜ್ಞಾನವನ್ನು ದೂರಮಾಡಿ, ಸುಜ್ಞಾನವನ್ನು, ಪ್ರಜ್ಞಾನವನ್ನು, ನೀಡುವವನು (**ಗುಕಾರೋ ಅಂಧಕಾರಸ್ಯ ರುಕಾರಸ್ತನ್ನಿರೋಧಕಃ** ।) ಇನ್ನೊಂದು ಅರ್ಥದಲ್ಲಿ 'ಗು' ಎಂದರೆ ಗುಣಗಳಿಗೆ ನಿಲುಕದವನು (**ಗುಣಾತೀತಃ** ।), ರು ಎಂದರೆ ಎಲ್ಲ ರೀತಿಯ ರೂಪಗಳಿಂದ ಮುಕ್ತನಾದವನು (**ರೂಪವರ್ಜಿತಃ** ।), ಸತ್ವ, ರಜಸ್, ತಮೋಗುಣಗಳಿಂದ ಮುಕ್ತನಾಗಿ ನಮ್ಮನ್ನು ಮುನ್ನಡೆಸುವವರು ಗುರುಗಳು. ಹಾಗೆಯೇ 'ಆಚಾರ್ಯ' ಎಂಬ ಪದವೂ ವಿಶಿಷ್ಟವಾದದ್ದು. **'ಆಚಿನೋತಿ ಶಾಸ್ತ್ರಾಣಿ ಇತಿ ಆಚಾರ್ಯಃ'** ಎಂದು ಶಬ್ದ ನಿಷ್ಪತ್ತಿ. ನಾಲ್ಕು ವೇದಗಳು, ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪ ಇವು ಆರು ವೇದಾಂಗಗಳು ವೇದಗಳನ್ನು ಅಭ್ಯಾಸ ಮಾಡಬೇಕಾದರೆ ಈ ವೇದಾಂಗಗಳು ಅತ್ಯಾವಶ್ಯಕ. ಧರ್ಮಶಾಸ್ತ್ರ, ಸಂಗೀತ ಶಾಸ್ತ್ರ, ಧನುಶ್ಯಾಸ್ತ್ರ, ಆಯುರ್ವೇದ ಸೇರಿ ಒಟ್ಟು ಹದಿನಾಲ್ಕು ಶಾಸ್ತ್ರಗಳು ಅಥವಾ ವಿದ್ಯಾಸ್ಥಾನಗಳು. ಶಾಸ್ತ್ರಗಳನ್ನು ಹೇಳಿಕೊಡುವವನು ಆಚಾರ್ಯ.

ಆಷಾಢ ಶುಕ್ಲ ಹುಣ್ಣಿಮೆಯಂದು ವ್ಯಾಸಪೂರ್ಣಿಮೆ, ಗುರುಪೂರ್ಣಿಮೆ. ವ್ಯಾಸರು ಗುರು–ಶಿಷ್ಯ ಸಂಪ್ರದಾಯದ ಸಂಕೇತ. ಅವರು ಆಷಾಢ ಶುದ್ಧ ಪ್ರತಿಪತ್ ಶುಭದಿನದಂದು ಬ್ರಹ್ಮಸೂತ್ರಗಳನ್ನು ಬರೆಯಲು ಆರಂಭಿಸಿ ಪೂರ್ಣಿಮೆ ಯಂದು ಪೂರೈಸಿದರು. ಅಂದು ಭಾರತೀಯ ಸನ್ಯಾಸಿಗಳು ತಮ್ಮ ಗುರುಗಳಿಗೆ ಪೂಜೆ ಹಾಗೂ ಕೃತಜ್ಞತೆ ಸಲ್ಲಿಸುವವರು. ಆಷಾಢ ಶುಕ್ಲ ದಶಮಿಯಿಂದ ಪ್ರಾರಂಭಿಸಿ ಕಾರ್ತಿಕ ಶುದ್ಧ ದ್ವಾದಶಿ ಯವರೆಗೆ ಚಾತುರ್ಮಾಸ್ಯವಿದ್ದು ಗುರುಪೂಜೆ, ವ್ರತ, ಧಾರ್ಮಿಕ, ಆಧ್ಯಾತ್ಮಿಕ ಚಟುವಟಿಕೆಗಳು ನಡೆಯುವುವು. ಆ ದಿನದಂದು ಸಂಗೀತ, ನೃತ್ಯ ಕಲಾವಿದರು. ವಿದ್ಯಾರ್ಥಿಗಳು ತಮ್ಮ ಗುರುಗಳಿಗೆ, ಅ ಪರಂಪರೆಗೆ ವಂದನೆ ಸಲ್ಲಿಸುವ ಪರಿಪಾಠವಿದೆ. ಯೋಗದಲ್ಲಿ ಶಿವನೇ ಮೊದಲ ಗುರುವಾಗಿದ್ದು ಅವನು ಹಿಮಾಲಯದಲ್ಲಿ ಧ್ಯಾನಸ್ಥನಾಗಿದ್ದು, ಗುರುಪೂರ್ಣಿಮೆಯಂದು ಏಳು ಋಷಿಗಳ ಸಮ್ಮುಖದಲ್ಲಿ ಕಣ್ತೆರೆದು, ಯೋಗದ ಮೊದಲ ಪಾಠವನ್ನು ಬೋಧಿಸಿದನು. ಪ್ರತ್ಯಕ್ಷ, ಆನಂದಾಶ್ರು ಮುಂತಾದ ಏಳು ಋಷಿಗಳು, ಏಳು ವಿಧದ ಯೋಗಗಳನ್ನು ಅರಿತು, ಮನುಷ್ಯ ನಲ್ಲಿರುವ ಏಳು ಕಾಲ್ಪನಿಕ ಚಕ್ರಗಳಾದ ಮೂಲಾಧಾರ, ಸ್ವಾಧಿಷ್ಠಾನ, ವಿಶುದ್ಧ, ಮಣಿಪೂರ, ಅನಾಹತ, ಆಜ್ಞಾ ಸಹಸ್ರಾರಗಳನ್ನು ಉದ್ದೀಪಿಸಿ ಆನಂದ ಹೊಂದವರು. ಅವನ್ನು ನಾವು ಸಹ ಉಪಾಸಿಸಬಹುದು ಎಂಬ ಮಾಹಿತಿ ಇದೆ. ಅವೈದಿಕ ಮತಗಳಾದ ಬೌದ್ಧ, ಜೈನ ಸಂಪ್ರದಾಯದಲ್ಲಿ ಗುರು ಪೂರ್ಣಿಮೆಗೆ ಅತಿಶಯವಾದ ಮಹತ್ವ ನೀಡಲಾಗಿದೆ. ನಮ್ಮ ಋಷಿ–ಮುನಿಗಳೂ, ಆಚಾರ್ಯತ್ರಯರು ಸನಾತನ ವೈದಿಕ ಸಂಸ್ಕೃತಿಯನ್ನು ಜೀವಂತವಾಗಿಸಿ ರಾಷ್ಟ್ರೀಯ ಸುಧಾರಕರಾಗಿದ್ದಾರೆ.

ಗುರುಗಳಿಗೆ ಯೋಗ್ಯರಾದ ಶಿಷ್ಯರು ದೊರಕಬೇಕು. ವೇದಕಾಲದಲ್ಲಿ ಶಿಷ್ಯನು ಸಮಿತ್ತನ್ನು ಕೈಗಳಲ್ಲಿ ಹಿಡಿದು ವಿನಯಶಾಲಿಯಾಗಿ, ಗುರುವನ್ನು ಸಮೀಪಿಸಿ, ಗುರುಸೇವೆ ಮಾಡಿ, ವಾತ್ಸಲ್ಯಕ್ಕೆ ಪಾತ್ರನಾಗಿ ಜ್ಞಾನವನ್ನು ಸಂಪಾದಿಸಬೇಕು. ನಮ್ಮ ಪರಂಪರೆಯಲ್ಲಿ ಸಾವಿರಾರು ಶ್ರೇಷ್ಠ ಗುರು–ಶಿಷ್ಯರ, ಅವರ ಅವಿನಾಭಾವ ಸಂಬಂಧದ ಬಗ್ಗೆ ವಿಸ್ತಾರ ಮಾಹಿತಿ ಇದೆ. ತಾಯಿ ಮತ್ತು ತಾಯಿನಾಡು ಸ್ವರ್ಗಕ್ಕಿಂತಲೂ ಮಿಗಿಲು ಎಂಬ ಉಕ್ತಿ ಇದೆ. (**ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ**।). ತಾಯಿ–ತಂದೆ, ಗುರು, ನಮ್ಮ ದೇಶದ ಋಣವನ್ನು ತೀರಿಸಲು ಸಾಧ್ಯವಿಲ್ಲ. ಗುರುವು ಅರಿವು, ಆತ್ಮ ನಿಯಂತ್ರಣ, ಶ್ರದ್ಧೆ, ಸಹನೆ, ವಿಶ್ವಾಸ, ಶಾಂತಿಯ ಪ್ರತೀಕ. ಅಂತಹ ಗುರುಗಳೆಲ್ಲರಿಗೆ ನಮ್ಮೆಲ್ಲರ ತ್ರಿಕರಣಪೂರ್ವಕ ನಮನ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಪ್ರೊ. ॥ಎಂ.ಕೆ. ಶ್ರೀಧರ್

# ಶಿವಗಂಗೆಯಲ್ಲಿ ಶ್ರೀ ಶಂಕರ ಭಗವತ್ಪಾದರ ನೂತನ ದೇವಾಲಯದ ಪ್ರತಿಷ್ಠಾಪನೆ ಹಾಗೂ ಕುಂಭಾಭಿಷೇಕ



ಮನುಷ್ಯನಾಗಿರುವವನಿಗೆ ಕೃತಜ್ಞತೆ ಅವಶ್ಯಕತೆಯಿದೆ. ಕೃತಜ್ಞತೆ ಇಲ್ಲದವನು ಬದುಕಿದ್ದು ವ್ಯರ್ಥ. ನಾವು ತೆಂಗಿನಮರದ ರೀತಿ ಬಾಳಬೇಕು ಜೀವನದ ಪ್ರತಿಕ್ಷಣವೂ ಉಪಯೋಗವಾಗುವಂತೆ ಬದುಕಬೇಕೆಂದು ಶೃಂಗೇರಿ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ತಿಳಿಸಿದರು.

ನೆಲಮಂಗಲ ತಾಲ್ಲೂಕಿನ ಸೋಂಪುರ ಹೋಬಳಿಯ ಶಿವಗಂಗೆಯ ಶ್ರೀ ಶಿವಗಂಗಾ ಶಾರದಾ ಮಠದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಶಂಕರ ಭಗವತ್ಪಾದರ ನೂತನ ಶಿಲಾಮಯ ದೇವಾಲಯದ ಪ್ರತಿಷ್ಠಾಪನೆ ಹಾಗೂ ಕುಂಭಾಭಿಷೇಕ ಮಹೋತ್ಸವದ ಕಾರ್ಯಕ್ರಮದಲ್ಲಿ ಭಾಗವಹಿಸಿ ನಂತರ ಭಕ್ತರಿಗೆ ಆಶೀರ್ವಚನ ನೀಡಿ ಮಾತನಾಡಿದರು. ನಾವುಗಳಿಸುವ ಯಾವುದೇ ಆಸ್ತಿ ಹಾಗೂ ಸಂಪತ್ತುಗಳು ಎಂದಿಗೂ ನಮ್ಮ ಜೊತೆ ಬರುವುದಿಲ್ಲ.



ಮಣ್ಣಿನಲ್ಲಿ ಮಣ್ಣಾಗಿ ಹೋಗುವ ದೇಹವು ನಶಿಸುವ ಮುನ್ನ ದೈವತ್ವಕ್ಕೆ ಶರಣಾಗಿ ಸಂಕಲ್ಪ ಮಾಡಿದಲ್ಲಿ ಮಾಡಿದ ಪಾಪಗಳಾದರೂ ದೂರಗೊಳ್ಳುತ್ತವೆ. ಶಂಕರಾಚಾರ್ಯರು ಜ್ಞಾನದಿಂದ ಜಗತ್ತಿಗೆ ಶಾಂತಿ ನೀಡಿದರು ಎಂದರು. ಶಿವಗಂಗಾ ಶಾರದಾ ಮಠದ ಮಠಾಧೀಶರಾದ ಶ್ರೀ ಪುರುಷೋತ್ತಮ ಭಾರತೀ ಸ್ವಾಮೀಜಿಗಳು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಅಶೋಕ ಹಾರನಹಳ್ಳಿ, ಶಿವಮೊಗ್ಗ ಮಾಜಿ ಶಾಸಕರಾದ ಪ್ರಸನ್ನಕುಮಾರ್, ಚರಣ್ ಬ್ಯಾಂಕ್‌ನ ದ್ವಾರಕನಾಥ್, ಭಾನುಪ್ರಕಾಶ್‌ರವರಿಗೆ ಸನ್ಮಾನವನ್ನು ಮಾಡಿದರು.

ನೆಲಮಂಗಲ ತಹಶೀಲ್ದಾರ್ ಕೆ. ಮಂಜುನಾಥ್, ಕಾರ್ಯ ನಿರ್ವಹಣಾಧಿಕಾರಿ ಎಲ್ ಮೋಹನ್‌ಕುಮಾರ್, ನೆಲಮಂಗಲ ತಾಲ್ಲೂಕಿನ ಬ್ರಾಹ್ಮಣ ಸಭಾದ ಡಿ.ಎಸ್. ಗಣೇಶ್, ವೇದಪಂಡಿತ ರಾದ ವಿನಯ್‌ಶರ್ಮ, ಶ್ರೀನಿವಾಸಶರ್ಮ, ಸೂರ್ಯಪ್ರಕಾಶ್ ಶರ್ಮ ಇತರರಿದ್ದರು.

## ಅಂತಾರಾಷ್ಟ್ರೀಯ ತತ್ವಜ್ಞಾನಿಗಳ ದಿನಾಚರಣೆ



ಮಲ್ಲೇಶ್ವರಂ ಬ್ರಾಹ್ಮಣ ಸಭಾ ಟ್ರಸ್ಟ್ ಹಾಗೂ ಅದ್ವೈತ ಮಹಾ ಮಂಡಲದ ಟ್ರಸ್ಟ್ ಆಯೋಜಿಸಿದ್ದ ಅಂತಾರಾಷ್ಟ್ರೀಯ ತತ್ವಜ್ಞಾನಿಗಳ ದಿನಾಚರಣೆ ಎಂದರೆ ಶ್ರೀ ಶಂಕರಾಚಾರ್ಯರ ಜಯಂತಿಯನ್ನು ಒಂದು ಲಕ್ಷ ದೀಪಗಳನ್ನು ಬೆಳಗಿಸುವುದರೊಂದಿಗೆ ಅದ್ದೂರಿಯಾಗಿ, ಮಲ್ಲೇಶ್ವರಂ ಹಿಮಾಂಶು ಜ್ಯೋತಿ ಕಲಾ ಪೀಠದಲ್ಲಿ ನಡೆಸಲಾಯಿತು. ಹೆಚ್ಚಿನ ಸಂಖ್ಯೆಯಲ್ಲಿ ಮಳೆಯನ್ನು ಲೆಕ್ಕಿಸದೆ ಜನ ಭಾಗವಹಿಸಿದ್ದರು. ಶ್ರೀ ಶಂಕರಾಚಾರ್ಯರ ಜಯಂತ್ಯುತ್ಸವವನ್ನು ಕರ್ನಾಟಕದ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾದ ಶ್ರೀ ಕೃಷ್ಣ ದೀಕ್ಷಿತ್ ರವರು ಉದ್ಘಾಟನೆ ಮಾಡಿದರು. ವಿಶೇಷ ಆಮಂತ್ರಿತರಾಗಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಅಶೋಕ್‌ಹಾರನಹಳ್ಳಿರವರು ಭಾಗವಹಿಸಿದ್ದರು.

ಸಭಾದ ಅಧ್ಯಕ್ಷರಾಗಿ ಕ್ಷೇತ್ರದ ಶಾಸಕರು ಹಾಗೂ ಉನ್ನತ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನದ ಸಚಿವರಾದ ಡಾ.ಸಿ.ಎನ್.ಅಶ್ವತ್ಥನಾರಾಯಣ್ ರವರು ಭಾಗವಹಿಸಿದ್ದರು.

ಸಭೆಯಲ್ಲಿ ಭಗವತ್ಪಾದರ ಅಪೂರ್ವ ಕೊಡುಗೆ ಬಗ್ಗೆ ಉಪನ್ಯಾಸವನ್ನು ಮ.ಬಾ.ಸ ಹಾಗೂ ಅ.ಮ.ಮ ದ ಅಧ್ಯಕ್ಷರು, ಅದ್ವೈತ ವಾಚಸ್ಪತಿ ಡಾ.ಪಾವಗಡ ಪ್ರಕಾಶ್ ರಾವ್‌ರವರು ನೀಡಿದರು. ಕಾರ್ಯಕ್ರಮದಲ್ಲಿ ಮ.ಬಾ.ಸ ಟ್ರಸ್ಟ್‌ನ ಕಾರ್ಯದರ್ಶಿ ಹಾಗೂ ಮಹಾಸಭಾ ಕಾರ್ಯಕಾರಿಣಿ ಸದಸ್ಯ ಎಸ್.ಕೆ.ಕೌಶಿಕ್ ಮತ್ತು ಎರಡೂ ಸಂಸ್ಥೆಗಳ ಟ್ರಸ್ಟಿಗಳು ಹಾಜರಿದ್ದರು.

# ಶಿವಮೊಗ್ಗದಲ್ಲಿ ಮಹಾಸಭಾ ಅಧ್ಯಕ್ಷರಿಗೆ ಅಭೂತಪೂರ್ವ ಸನ್ಮಾನ




ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ನೂತನ ಅಧ್ಯಕ್ಷರಾಗಿ ಸಾರಥ್ಯ ವಹಿಸಿಕೊಂಡಿರುವ ಶ್ರೀಯುತ ಅಶೋಕ್ ಹಾರನಹಳ್ಳಿಯವರಿಗೆ ಶಿವಮೊಗ್ಗ ಜಿಲ್ಲೆಯ ಬ್ರಾಹ್ಮಣ ಸಂಘಟನೆಗಳಿಂದ ದಿನಾಂಕ 11–06–2022 ರ ಶನಿವಾರದಂದು ನಗರದ ಶ್ರೀ ಗಾಯತ್ರಿ ಮಾಂಗಲ್ಯ ಮಂದಿರದಲ್ಲಿ "ನ ಭೂತೋ" ಎಂಬಂತೆ ಅಭಿನಂದಿಸಿ ಸನ್ಮಾನಿಸಲಾಯಿತು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಶಿವಮೊಗ್ಗ ಜಿಲ್ಲಾ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಶ್ರೀ ಕೆ.ಸಿ. ನಟರಾಜ ಭಾಗವತ್ ಮಲೆನಾಡಿನಲ್ಲಿ ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಪ್ರಾಬಲ್ಯ ಹೊಂದಿದ್ದ ಬ್ರಾಹ್ಮಣ ಸಮಾಜ ಇಂದು ಅನೇಕ ಸಾಮಾಜಿಕ ಸಮಸ್ಯೆಗಳನ್ನು ಎದಿರಿಸುತ್ತಿದೆ. ಉದ್ಯೋಗಕ್ಕಾಗಿ ಗ್ರಾಮಾಂತರ ಪ್ರದೇಶಗಳಿಂದ ಯುವಕರ ವಲಸೆ, ಕೃಷಿ ಹಿನ್ನಡೆ, ವಧು– ವರರ ಸಮಸ್ಯೆ, ಸಮಾಜ ಹಣದ ಹಿಂದೆ ಹೋಗುತ್ತಿರುವುದು ವಯೋ ವೃದ್ಧರ ಸಮಸ್ಯೆ ಹೀಗೆ ನಾನಾ ಸಮಸ್ಯೆಗಳಿದ್ದು ರಾಜ್ಯ ಮಹಾಸಭಾದ ಅಧ್ಯಕ್ಷರು ಈ ದಿಸೆಯಲ್ಲಿ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯುವಲ್ಲಿ ಸಫಲರಾಗಲಿ ಎಂದು ನುಡಿದರು. ಅವರ ಯಶಸ್ಸಿನ ಯಾತ್ರೆಯಲ್ಲಿ ನಾವು ಬೆಂಬಲವಾಗಿ ನಿಂತಿರುತ್ತೇವೆ ಎಂಬ ನುಡಿಗಳನ್ನಾಡಿದರು.

ನಗರದ ಹಿರಿಯ ವೈದ್ಯರು ಶ್ರೀ ಶೃಂಗೇರಿ ಶಂಕರ ಮಠದ ಧರ್ಮದರ್ಶಿಗಳಾದ ಡಾ|| ಪಿ. ನಾರಾಯಣ್ ರವರು ಶ್ರೀಯುತ ಹಾರನಹಳ್ಳಿಯವರನ್ನು ಕುರಿತು ಅಭಿನಂದನಾ ನುಡಿಗಳನ್ನಾಡುತ್ತಾ ಸಾಮಾನ್ಯ ಹಳ್ಳಿಯಿಂದ ಮೂಡಿಬಂದ ಶ್ರೀಯುತರು ತಮ್ಮ ಸ್ವಪ್ರತಿಭೆಯಿಂದ ಬೆಳೆದು ವಕೀಲಿ ವೃತ್ತಿಯಿಂದ ವೃತ್ತಿಯ ಘನತೆಯನ್ನು ಎತ್ತಿ ಹಿಡಿದು ತಾವು ಒಬ್ಬ ಶ್ರೇಷ್ಠನ್ಯಾಯವಾದಿ ಎನಿಸಿಕೊಂಡವರು ಎಂದು ತಿಳಿಸಿದರು. ಶಿಕ್ಷಣ, ಉದ್ಯಮ, ಆಧ್ಯಾತ್ಮ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ. ಇವರ ನೇತೃತ್ವದಲ್ಲಿ ಸಮಾಜದ ಸಂಘಟನೆಗೆ ಹೊಸ ಆಯಾಮ ದೊರೆಯಲಿ ಎಂದು ಆಶಿಸಿ ತಮ್ಮ ಅಭಿನಂದನಾ ನುಡಿಗಳನ್ನು ಸಂಪನ್ನಗೊಳಿಸಿದರು.

ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದ ಶ್ರೀ ಹಾರನಹಳ್ಳಿಯವರು ಬ್ರಾಹ್ಮಣ ಸಮಾಜದಲ್ಲಿ ಮದುವೆ ಹಾಗೂ ವೈವಾಹಿಕ ಸಮಸ್ಯೆಗಳಿದ್ದು ಈ ಸಮಸ್ಯೆ ನೀಗಿಸಲು ಕೌನ್ಸೆಲಿಂಗ್ ತೆರೆಯಲು ಮಹಾಸಭೆಯೇ ನಿರ್ಧರಿಸಿದೆ ಎಂದು ಹೇಳಿದರು. ಮಹಾಸಭೆ ಸ್ಥಾಪನೆಗೊಂಡು 50 ವರ್ಷ ಕಳೆದರೂ ಬಾಲ್ಯಾ ವ್ಯವಸ್ಥೆಯಲ್ಲಿದೆ. ಬ್ರಾಹ್ಮಣರು ಒಗ್ಗೂಡಿಲ್ಲ ಎನ್ನುವುದಕ್ಕೆ ಇದೇ ಸಾಕ್ಷಿ ಎಂದು ಕಳವಳ ವ್ಯಕ್ತಪಡಿಸಿದರು. ಬೇರೆ ಸಮಾಜಗಳು ಮೆಡಿಕಲ್ ಕಾಲೇಜು ಸ್ಥಾಪಿಸುವ ಹಂತಕ್ಕೆ ಬೆಳೆದಿವೆ. ಆದರೆ ಬ್ರಾಹ್ಮಣ ಸಮಾಜ ಇನ್ನೂ ನೆಲೆ ಕಂಡುಕೊಳ್ಳುವುಕ್ಕೂ ಆಗುತ್ತಿಲ್ಲ. ಇದು ನಮ್ಮ ದೌರ್ಭಾಗ್ಯ ಜಾತಿ ಆಧಾರದ ಮೇಲಿನ ಅಭಿವೃದ್ಧಿ ಮಂಡಳಿಯೇ ಮಾರಕವೆಂಬ ಆಪಾದನೆ ಇದ್ದು, ಬ್ರಾಹ್ಮಣರಿಗೆ ಮೀಸಲಾತಿ ಬೇಡ. ಆರ್ಥಿಕವಾಗಿ ದುರ್ಬಲರಿಗೆ ಶೇ.10 ಮೀಸಲಾತಿ ಕೊಡಬೇಕಿದೆ. ಆದರೆ ಕೇಂದ್ರ ಸರ್ಕಾರದ ಈ ಮೀಸಲಾತಿ ರಾಜ್ಯದಲ್ಲಿ ಯಾಕೆ ಜಾರಿಯಾಗುವುದಿಲ್ಲ ಎಂದು ಪ್ರಶ್ನಿಸಿದರು. ಶಿಕ್ಷಣ ಕ್ಷೇತ್ರದಲ್ಲಿ ಆರ್ಥಿಕವಾಗಿ ಹಿಂದುಳಿದ ಜಾತಿಗಳಿಗೆ ಶೇ.10 ಮೀಸಲಾತಿ ನೀಡಬೇಕಿದೆ. ಈ ಹಿನ್ನೆಲೆಯಲ್ಲಿ ಮಹಾಸಭಾ ರಾಜ್ಯ ಸರ್ಕಾರಕ್ಕೆ ಮನವಿ ನೀಡಿದೆ. ನಮ್ಮೊಬ್ಬರಿಗೇ ಅಲ್ಲ. ಹಿಂದುಳಿದ ಎಲ್ಲರಿಗೂ ಶೇ.10 ರಷ್ಟು ಮೀಸಲಾತಿ ಕೊಡಿ ಎಂಬುದು ನಮ್ಮ ನಿಲುವು ಎಂದು ಸ್ಪಷ್ಟಪಡಿಸಿದರು.





ಶ್ರೀಯುತರು ಬ್ರಾಹ್ಮಣರು ಎಚ್ಚೆತ್ತುಕೊಳ್ಳಬೇಕು, ಕೈಗಾರಿಕೆ ಮತ್ತು ಉದ್ಯಮಗಳಲ್ಲಿ ಬ್ರಾಹ್ಮಣರು, ಬ್ರಾಹ್ಮಣರಿಗೆ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗ ನೀಡುವುದು ಉತ್ತಮ ಎಂದು ಅಭಿಪ್ರಾಯಪಟ್ಟರು. ಸಾಂಸ್ಕೃತಿಕ ಸಮಿತಿ ಉದ್ಘಾಟನೆ, ವೃದ್ಧರಿಗೆ, ದಿವ್ಯಾಂಗಚೇತನರಿಗೆ ಮಾಸಾಶನ, ವಯೋವೃದ್ದರಿಗೆ ಚಿಕಿತ್ಸೆ ಯೋಜನೆ, ವೈವಾಹಿಕ ಸಮಸ್ಯೆಗಳಿಗೆ ಕೌನ್ಸಿಲಿಂಗ್ ಕೇಂದ್ರ, ಡಿಜಿಟಲೀಕರಣದ ಮೂಲಕ ಎಲ್ಲಾ ಯೋಜನೆಗಳನ್ನು ಎಲ್ಲರಿಗೂ ತಲುಪುವಂತೆ ಮಾಡಲಾಗುವುದು ಎಂದು ತಮ್ಮ ಉದ್ದೇಶಿತ ಯೋಜನೆಗಳ ಮಾಹಿತಿ ನಿಡಿದರು.

ಇದೇ ಸಂದರ್ಭದಲ್ಲಿ ಜಿಲ್ಲೆಯ ವಿವಿಧ ರಂಗಗಳಲ್ಲಿ ಸಾಧನೆಗೈದ ಈ ಕೆಳಕಂಡ ಮಹನೀಯರನ್ನು ಅಭಿನಂದಿಸಿ ಗೌರವಿಸಲಾಯಿತು.

ಶ್ರೀ ವಸಂತ್ ದಿವೇಕರ್, ನಿರ್ದೇಶಕರು, ವಿಶ್ವೇಶ್ವರಯ್ಯ ರಾಷ್ಟ್ರೀಯ ತಾಂತ್ರಿಕ ವಿದ್ಯಾಲಯ, ನಾಗಪುರ, ಶ್ರೀ ಜಿ.ಎಸ್. ನಾರಾಯಣರಾವ್, ಅಧ್ಯಕ್ಷರು, ರಾಷ್ಟ್ರೀಯ ಶಿಕ್ಷಣ ಸಮಿತಿ, ಶಿವಮೊಗ್ಗ, ಶ್ರೀ ಮಹೇಶ್ ಹುಲ್ಕುಳಿ, ಉಪಾಧ್ಯಕ್ಷರು, ಮ್ಯಾಮ್ ಕೋಸ್, ಶಿವಮೊಗ್ಗ. ಶ್ರೀ ಎಸ್.ಎನ್. ನಾಗರಾಜ್, ಕಾರ್ಯದರ್ಶಿಗಳು, ರಾಷ್ಟ್ರೀಯ ಶಿಕ್ಷಣ ಸಮಿತಿ, ಶಿವಮೊಗ್ಗ. ಶ್ರೀ ಗೋಪಾಲ್ ಯಡಗೆರೆ, ಪತ್ರಕರ್ತರು, ಶ್ರೀ ಶ್ರೀನಿವಾಸಮೂರ್ತಿ, ಆಡಳಿತ ನಿರ್ದೇಶಕರು, ವ್ಯಾಲ್ಯೂ ಪ್ರಾಡಕ್ಟ್ ಪ್ರೈವೇಟ್ ಲಿಮಿಟೆಡ್, ಶಿವಮೊಗ್ಗ, ಶ್ರೀ ಎ.ವಿ. ಶ್ಯಾಮ್ ಪ್ರಸಾದ್, ಅಧ್ಯಕ್ಷರು, ವಿಪ್ರಟ್ರಸ್ಟ್, ಶಿವಮೊಗ್ಗ

ಕಾರ್ಯಕ್ರಮದಲ್ಲಿ ಸುಮಾರು 1500 ಕ್ಕೂ ಹೆಚ್ಚು ಅಭಿಮಾನಿ ವಿಪ್ರ–ಸುಹಾಸಿನಿಯರು ಭಾಗವಹಿಸಿದ್ದು ವಿಶೇಷವಾಗಿತ್ತು. ಎಲ್ಲರಿಗೂ ಭೋಜನದ ವ್ಯವಸ್ಥೆ ಮಾಡಲಾಗಿತ್ತು.

ಶ್ರೀ ಎಂ.ಎಸ್. ಸೂರ್ಯನಾರಾಯಣ ನಿದೇಶಕರು, ಜಿಲ್ಲಾ ಬ್ರಾಹ್ಮಣ ಮಹಾಸಭಾ, ಶಿವಮೊಗ್ಗ ಇವರು ನಿರೂಪಣೆ ಮಾಡಿದರು, ಶ್ರೀಮತಿ ಸುರೇಖಾ ಮುರಳೀಧರ್ ವಿಶೇಷ ಆಹ್ವಾನಿತರು, ಶ್ರೀ ಗಾಯತ್ರಿ ಪ್ರತಿಷ್ಠಾನ ಇವರು ಎಲ್ಲರನ್ನೂ ಸ್ವಾಗತಿಸಿದರು. ಶ್ರೀಯುತ ಸ್ವರೂಪ್ ಹೊಸನಗರ ಕಾರ್ಯಕಾರಿಣಿ ಸದಸ್ಯರು ಇವರು ಎಲ್ಲರನ್ನು ವಂದಿಸಿದರು.

# ವಿಪ್ರ ಯುವಜನ ಸಮಾವೇಶ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರ ಸನ್ಮಾನ ಸ್ವಾವಲಂಬನೆಕ್ಕೆ ಪೂರಕವಾಗಿ ಅಧ್ಯಕ್ಷರ ಸಲಹೆ ಮತ್ತು ಮಾರ್ಗದರ್ಶನ ದಲ್ಲಿ ದಿನಾಂಕ 11–06–2022 ರ ಶನಿವಾರದಂದು ಶ್ರೀಮಾತಾ ಮಾಂಗಲ್ಯ ಮಂದಿರ, ಬಿ.ಹೆಚ್. ರಸ್ತೆ, ಶಿವಮೊಗ್ಗದಲ್ಲಿ "ವಿಪ್ರ ಯುವಜನ ಸಮಾವೇಶ", ವನ್ನು ಆಯೋಜಿಸಲಾಗಿತ್ತು.

ಈ ಸಮಾವೇಶದ ಮುಖ್ಯ ಅತಿಥಿಗಳಾಗಿ ಶ್ರೀ ಸಂದೀಪ್ ರವಿ, ರಾಜ್ಯ ಸಂಚಾಲಕರು, ಯುವ ವಿಭಾಗ, ಎ.ಕೆ.ಬಿ.ಎಂ.ಎಸ್, ಬೆಂಗಳೂರು. ಇವರು ಉಪಸ್ಥಿತರಿದ್ದು ತಮ್ಮ ಭಾಷಣದಲ್ಲಿ ಯುವ ಶಕ್ತಿಯ ಮಹತ್ವ ಮತ್ತು ಸದೃಢವಾದ ಸಮಾಜದ ನಿರ್ಮಾಣದಲ್ಲಿ ಯುವಕರು ಯಾವ ದಿಶೆಯಲ್ಲಿ ಮುಂದುವರೆಯಬೇಕು ಮತ್ತು ಅವರ ಪಾತ್ರವೇನು ಎಂಬುದರ ಬಗ್ಗೆ ದಿಕ್ಸೂಚಿ ಮಾತುಗಳನ್ನಾಡಿದರು.

ಸರ್ಕಾರಗಳಿಂದ ಸೌಲಭ್ಯ ಪಡೆಯಲು ಸಂಘಟನೆ ಬಲಯುತವಾಗ ಬೇಕಿದೆ. ಈ ನಿಟ್ಟಿನಲ್ಲಿ ಮುಂಬರುವ ಅಕ್ಟೋಬರ್‌ನಲ್ಲಿ ಬೆಂಗಳೂರಿನಲ್ಲಿ ವಿಶ್ವ ಯುವ ಸಮಾವೇಶ ಆಯೋಜಿಸಲು ನಿರ್ಧರಿಸ ಲಾಗಿದೆ ಎಂದು ಮಹಾಸಭಾ ಯುವ ವಿಭಾಗದ ರಾಜ್ಯ ಸಂಚಾಲಕ ಸಂದೀಪ್ ರವಿ ಹೇಳಿದರು.

ವಿಪ್ರ ಯುವಜನ ಸಮಾವೇಶ ಉದ್ಘಾಟಿಸಿ ಮಾತನಾಡಿ, ದೂರದೃಷ್ಟಿ ಪರಿಕಲ್ಪನೆ ಇಟ್ಟುಕೊಂಡು ಯುವ ಮತ್ತು ಮಹಿಳಾ ಘಟಕಗಳನ್ನು ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಅವರು ಆರಂಭಿಸಿದ್ದಾರೆ. ಭವಿಷ್ಯದ ದೃಷ್ಟಿಯಿಂದ ಯುವಕರನ್ನು ಸೆಳೆಯಲು ಯೋಜಿಸಲಾಗಿದೆ. ಜಿಲ್ಲಾಮಟ್ಟದಲ್ಲಿ ಯುವ ವಿಪ್ರರಿಗಾಗಿ ಉದ್ಯೋಗ ಮೇಳ ಆಯೋಜಿಸಲಾಗುವುದು ಎಂದರು.

ಸಂಘಟನೆ, ಸ್ವಾವಲಂಬನೆ ಮತ್ತು ಸಂಸ್ಕಾರ ಪ್ರಮುಖ ಯೋಜನೆ ಗಳಾಗಿದ್ದು ಇಂದಿನ ಕೆಲವರಿಗೆ ಬ್ರಾಹ್ಮಣ ಎಂದು ಹೇಳಿಕೊಳ್ಳಲೂ ಹಿಂಜರಿಕೆ ಇದೆ. ಅದನ್ನು ಹೋಗಲಾಡಿಸಬೇಕು. ಕೆಲವರಿಗೆ ಒಂದು ಹೊತ್ತಿನ ಸಂಧ್ಯಾವಂದನೆ ಮಾಡಲಾಗದ ಸ್ಥಿತಿಯೂ ಇದೆ. ನಮ್ಮ ಸಂಸ್ಕಾರವನ್ನು ನಾವೇ ಕಲಿತಿಲ್ಲವಾದರೆ ಮುಂದಿನ ಪೀಳಿಗೆಗೆ ಹೇಳಿಕೊಡುವವರು ಯಾರು ಎಂದು ಪ್ರಶ್ನಿಸಿದರು.

ಮಾಜಿ ಶಾಸಕ ಕೆ.ಬಿ.ಪ್ರಸನ್ನಕುಮಾರ್ ಮಾತನಾಡಿ, ಸಂಸ್ಕಾರ ದೊಂದಿಗೆ ಸಂಘಟನೆ ಮಾಡಬೇಕಾಗಿದೆ ಎಂದರು. ಶ್ರೀ ಎಸ್. ದತ್ತಾತ್ರಿ, ರಾಜ್ಯ ಉಪಾಧ್ಯಕ್ಷರು, ಕೆ.ಎಸ್.ಐ.ಡಿ.ಸಿ ಬೆಂಗಳೂರು,, ಡಾ. ಬಿ.ಎಸ್. ರಾಘವೇಂದ್ರ ಭಟ್, ರಾಜ್ಯ ಸಂಘಟನಾ ಕಾರ್ಯದರ್ಶಿ, ಎ.ಕೆ.ಬಿ.ಎಂ.ಎಸ್. ಬೆಂಗಳೂರು, ಶ್ರೀ ರಾಘವೇಂದ್ರ, ವಕೀಲರು, ಸಾಗರ, ಕಾರ್ಯಕಾರಿಣಿ ಸದಸ್ಯರು, ಎ.ಕೆ.ಬಿ.ಎಂ.ಎಸ್. ಇವರುಗಳು ಉಪಸ್ಥಿತರಿದ್ದರು.

ಶ್ರೀ ರವಿಕುಮಾರ್ ನುಗ್ಗೆಮಕ್ಕಿ, ಕಾರ್ಯಕಾರಿಣಿ ಸದಸ್ಯರು, ಇವರು ಅಧ್ಯಕ್ಷತೆ ವಹಿಸಿದ್ದರು.

ಡಾ॥. ರವಿಕಿರಣ್, ಕಾರ್ಯದರ್ಶಿ, ಶ್ರೀ ಗಾಯತ್ರಿ ಪ್ರತಿಷ್ಠಾನ, ಶಿವಮೊಗ್ಗ, ಇವರು ಕಾರ್ಯಕ್ರಮ ನಿರೂಪಿಸಿದರು. ಜಿಲ್ಲಾ ಬ್ರಾಹ್ಮಣ ಮಹಾಸಭಾದ ಎಲ್ಲಾ ನಿರ್ದೇಶಕರು ಸಕ್ರಿಯವಾಗಿ ಪಾಲ್ಗೊಂಡಿದ್ದರು.

### ವಿಪ್ರ ಮಹಿಳಾ ಸಮಾವೇಶ

# ಬ್ರಾಹ್ಮಣ ಮಹಾಸಭಾ ಮತ್ತಷ್ಟು ಗಟ್ಟಿಗೊಳಿಸಿ–ಡಾ.ಶುಭಮಂಗಳಾ ಸುನೀಲ್



**ಶಿವಮೊಗ್ಗ** : ದೇಶದಲ್ಲಿ ಬ್ರಾಹ್ಮಣರು ಅಲ್ಪಸಂಖ್ಯಾತರೇ ವಿನಃ ಅಶಕ್ತರಲ್ಲ. ಹಾಗಾಗಿ ನಮ್ಮ ಸಂಸ್ಕಾರ, ಸಂಸ್ಕೃತಿ ಸಂಪ್ರದಾಯದ ಬಗ್ಗೆ ಯುವಪೀಳಿಗೆಗೆ ಹೇಳಿಕೊಡುವ ಮೂಲಕ ಮಹಾಸಭಾವನ್ನು ಮತ್ತಷ್ಟು ಗಟ್ಟಿಗೊಳಿಸಬೇಕಿದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮಹಿಳಾ ವಿಭಾಗದ ರಾಜ್ಯ ಸಂಚಾಲಕಿ ಡಾ. ಶುಭಮಂಗಳಾ ಹೇಳಿದರು.

ಶ್ರೀ ಮಾತಾ ಮಾಂಗಲ್ಯ ಮಂದಿರದಲ್ಲಿ ವಿಪ್ರ ಮಹಿಳಾ ಉದ್ಘಾಟಿಸಿ, ಮಾತನಾಡಿ, ಮಹಿಳೆಯರು ಒಗ್ಗಟ್ಟಾದಾಗ ಮಾತ್ರ ಸಮಾಜ ಬಲಗೊಳ್ಳುತ್ತದೆ. ಸಂಪ್ರದಾಯ, ಸಂಸ್ಕೃತಿಯನ್ನು ಹಂಚಿಕೊಳ್ಳಲು ಉತ್ತಮ ವೇದಿಕೆ ಇದಾಗಿದ್ದು, ಮೂಢನಂಬಿಕೆ ಬಿಟ್ಟು ನಮ್ಮ ಸಂಸ್ಕೃತಿಯನ್ನು ಬೆಳೆಸಬೇಕಿದೆ. ಕ್ರಿಯಾಶೀಲಾ ಮಹಿಳೆಯನ್ನು ಸೇರಿಸಿಕೊಳ್ಳಬೇಕಿದೆ. ಸದಸ್ಯತ್ವ ನೋಂದಣಿ ಮಾಡಬೇಕಿದೆ ಎಂದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸಂಘಟನಾ ಕಾರ್ಯದರ್ಶಿ ಡಾ.ಬಿ.ಎಸ್. ರಾಘವೇಂದ್ರ ಭಟ್ ಮಾತನಾಡಿ ರಾಜಕೀಯ ಪ್ರಾತಿನಿಧ್ಯ ಪಡೆಯಲು ವಿಪ್ರ ಮಹಿಳೆಯರು ಸಂಘಟಿತರಾಗಬೇಕಿದೆ. ರಾಜ್ಯದಲ್ಲಿ 16 ಲಕ್ಷ ಜನಸಂಖ್ಯೆಯಿದ್ದರೂ ಮಹಾಸಭಾದಲ್ಲಿ ಕೇವಲ 40 ಸಾವಿರ ಸದಸ್ಯರಿದ್ದಾರೆ ಎಂದರು. ಸ್ವಾವಲಂಬನೆ, ಸಂಘಟನೆ ಮತ್ತು ಉದ್ಯೋಗ ಸೃಷ್ಟಿ ಮಹಾಸಭಾದ ಧ್ಯೇಯವಾಕ್ಯವಾಗಿ ಇದ್ದು, ಸನಾತನ ಹಿಂದು ಧರ್ಮಕ್ಕೆ ಬ್ರಾಹ್ಮಣ ಮಹಾಸಭಾ ಕೊಡುಗೆ ದೊಡ್ಡ ಮಟ್ಟದಲ್ಲಿದೆ. ಪ್ರಸ್ತುತ ಸಂಪ್ರದಾಯ ವೈವಿಧ್ಯಮಯವಾಗಿದ್ದು ಶಾಸ್ತ್ರ ಬದಲಾದರೂ ಸಂಪ್ರದಾಯ ಒಂದೇ ಆಗಿರುತ್ತದೆ. ಹಿಂದು ಧರ್ಮ ಮತ್ತು ಸಂಪ್ರದಾಯ ಒಂದಾಗಿರಲು ಬ್ರಾಹ್ಮಣ ಕಾರಣ. ಬ್ರಾಹ್ಮಣ ಸಂಪ್ರದಾಯಗಳ ಬಗ್ಗೆ ತಿಳಿಯಲು ಕಾರ್ಯಾಗಾರ ಮಾಡಬೇಕಿದೆ ಎಂದರು.

ಪ್ರಾಸ್ತಾವಿಕ ಮಾತನಾಡಿದ ಮಹಾಸಭಾ ಜಿಲ್ಲಾ ಸಂಚಾಲಕಿ ಪವಿತ್ರಾ ಆದರ್ಶ, ಬ್ರಾಹ್ಮಣ ಸಂಸ್ಕೃತಿ ಉಳಿಸಿ ಬೆಳೆಸಿಕೊಂಡು ಹೋಗುವುದು ಮತ್ತು ವಿಪ್ರ ಮಹಿಳೆಯರ ಸಬಲೀಕರಣಕ್ಕಾಗಿ ಸಮಾವೇಶ ಆಯೋಜನೆ ಮಾಡಲಾಗಿದೆ. ತಂತ್ರಜ್ಞಾನ ಎಷ್ಟೇ ಮುಂದುವರೆದಿದ್ದರೂ ವಿಪ್ರ ಮಹಿಳೆಯರು, ಮಕ್ಕಳಲ್ಲಿ ಸಂಸ್ಕೃತಿ, ಸಂಸ್ಕಾರ ಬೇರೂರುವಂತೆ ಮಾಡಬೇಕಿದೆ. ಮಂತ್ರಪಠಣ, ಭಜನೆ ಹೇಳಿಕೊಡಬೇಕು. ಸಂಸ್ಕೃತಿ ನಶಿಸಿ ಹೋಗದಂತೆ ನೋಡಿಕೊಳ್ಳ ಬೇಕಿದೆ ಎಂದರು.

ಗೌರವ ಉಪಸ್ಥಿತಿ: ಶ್ರೀ ಎಂ.ಬಿ. ಭಾನುಪ್ರಕಾಶ್ ಮತ್ತೂರು, ಮಾಜಿ ಶಾಸಕರು, ಶಿವಮೊಗ್ಗ. ಇವರು ಮಹಿಳಾ ಸಬಲೀಕರಣ, ಮಹಿಳೆಯರ ಆರ್ಥಿಕ ಸ್ವಾವಲಂಬನೆ ಹಾಗೂ ಸಾಮರಸ್ಯ ಕುಟುಂಬದ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ ಹೇಗಿರಬೇಕು ಮುಂತಾದ ವಿಚಾರಗಳ ಬಗ್ಗೆ ಸೂಕ್ತ ಮಾರ್ಗದರ್ಶಿ ನುಡಿಗಳನ್ನು ಆಡಿದರು.

ಶ್ರೀ ರಾಘವೇಂದ್ರ, ವಕೀಲರು, ಸಾಗರ, ಕಾರ್ಯಕಾರಿಣಿ ಸದಸ್ಯರು, ಎ.ಕೆ.ಬಿ.ಎಂ.ಎಸ್. ಶ್ರೀಮತಿ ಪವಿತ್ರ ಆದರ್ಶ, ಜಿಲ್ಲಾ ಸಂಚಾಲಕರು, ಶ್ರೀಮತಿ ವಿನುತಾ ಮುರಳೀಧರ್, ಜಿಲ್ಲಾ ಸಂಚಾಲಕರು ಇವರುಗಳು ಉಪಸ್ಥಿತರಿದ್ದರು.

ಶ್ರೀ ಸ್ವರೂಪ್ ಹೊಸನಗರ, ಕಾರ್ಯಕಾರಿಣಿ ಸದಸ್ಯರು, ಎ.ಕೆ.ಬಿ.ಎಂ.ಎಸ್ ಇವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ಬ್ರಾಹ್ಮಣ ಮಹಾಸಭಾದ ಸಹ ಕಾರ್ಯದರ್ಶಿಗಳಾದ ಶ್ರೀಮತಿ ಡಾ. ಎಸ್ ನಾಗಮಣಿ, ಹಾಗೂ ನಿರ್ದೇಶಕರುಗಳಾದ ಶ್ರೀಮತಿ ಸರಳಾ ಹೆಗಡೆ ಮತ್ತು ಡಾ॥ ಚಿತ್ರಲೇಖ ವಿ. ಕೃಷ್ಣ ಇವರುಗಳು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ರೂಪಿಸಿ ಉತ್ತಮ ಸಂದೇಶಗಳನ್ನು ಕೊಡಿಸುವುದರ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಹೊ.ನಾ.ಹಿರಿಯಣ್ಣ ಸ್ವಾಮಿ, ವಿನುತಾ ಮುರಳೀಧರ್ ಭಾಗವಹಿಸಿದ್ದರು.



# ಮಹಾಸಭೆಯ ಕಾರ್ಯಕ್ರಮಗಳು ಸಮಾಜ ಮುಖಿಯಾಗಿರಲಿ ಶ್ರೀ ಯದುವೀರ ಕೃಷ್ಣದತ್ತಚಾಮರಾಜ ಒಡೆಯರ್





**ದಿನಾಂಕ.5/6/2022ರಂದು ಮೈಸೂರು ಜಿಲ್ಲಾ ಬ್ರಾಹ್ಮಣ ಮಹಾಸಭಾ ಹಮ್ಮಿಕೊಂಡಿದ್ದ ಬ್ರಾಹ್ಮಣ ಅಂಗವಿಕಲ ಮಕ್ಕಳಿಗೆ ಗೌರವಧನ. ಬ್ರಾಹ್ಮಣ ಸಂಘಟನೆಯ ಮೈಸೂರು ಜಿಲ್ಲಾ ವಲಯ ಪದಾಧಿಕಾರಿಗಳ ನೇಮಕ** ಹಾಗೂ ಸದಸ್ಯತ್ವ ಅಭಿಯಾನದ ಕಾರ್ಯಕ್ರಮದಲ್ಲಿ ಮೈಸೂರಿನ ಮಹಾರಾಜರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ರವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತ ಒಂದೇ ವೇದಿಕೆಯಲ್ಲಿ ಇಷ್ಟು ಜನ ಬ್ರಾಹ್ಮಣರು ನನಗೆ ವೇದೋಕ್ತ ಆಶೀರ್ವದಿಸಿದ್ದು ನನ್ನ ಪೂರ್ವಜನ್ಮದ ಪುಣ್ಯ ಇದಕ್ಕಾಗಿ ನಾನು ಎ.ಕೆ.ಬಿ.ಎಂ.ಎಸ್ ನ ಅಧ್ಯಕ್ಷರಾದ ಅಶೋಕ್ ಹಾರನಹಳ್ಳಿ ಹಾಗೂ ಜಿಲ್ಲಾ ಬ್ರಾಹ್ಮಣ ಮಹಾಸಭ ಅಧ್ಯಕ್ಷರಾದ ನಟರಾಜ್ ಜೋಯಿಸ್‌ರವರನ್ನು ತುಂಬು ಹೃದಯದಿಂದ ಶ್ಲಾಘಿಸುತ್ತೇನೆ ಮತ್ತು ಜಿಲ್ಲಾ ಬ್ರಾಹ್ಮಣ ಮಹಾಸಭ ಹಮ್ಮಿಕೊಳ್ಳುವ ಎಲ್ಲಾ ಕಾರ್ಯಕ್ರಮಗಳು ಸಮಾಜಮುಖಿಯಾಗಿರಲಿ ಎಂದರು. ಕಾರ್ಯಕ್ರಮಕ್ಕೆ ಕಿಕ್ಕಿರಿದು ಸೇರಿದ್ದ ಬ್ರಾಹ್ಮಣ ಬಂಧುಗಳಿಗೆ ನಮ್ಮ ನಮಸ್ಕಾರಗಳು ಹಾಗೂ ಇಷ್ಟೊಂದು ಪ್ರೀತಿ ತೋರಿದ ನಿಮ್ಮೆಲ್ಲರಿಗೂ ಆಭಾರಿಯಾಗಿದ್ದೇನೆಂದು ನುಡಿದರು.

ಕಾರ್ಯಕ್ರಮದಲ್ಲಿ ಮಹಾಸಭೆಯ ಶ್ರೀ ಅಶೋಕಹಾರನಹಳ್ಳಿ ಯವರಿಗೆ ಮೈಸೂರಿನ ಮಹಾರಾಜರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ರವರು ಸನ್ಮಾನವನ್ನು ನೆರವೇರಿಸಿದರು. ಸಮಾರಂಭದಲ್ಲಿ ಡಾ॥ ಭಾಷ್ಯಂ ಸ್ವಾಮೀಜಿಯವರು, ಮಾಜಿ ಸಚಿವರಾದ ಶ್ರೀ ಎಸ್.ಎ. ರಾಮದಾಸ್, ಮೇದಿನಿ ಗರುಡಾಚಾರ್, ಹೆಚ್.ಚಿ. ರಾಜೀವ್, ಶ್ರೀ ಶ್ರೀವತ್ಸ, ಶ್ರೀ ನವೀನ್ ಕುಮಾರ್, ಹಾಗೂ ವೇ॥ಬ್ರ॥ಡಾ॥ ಭಾನುಪ್ರಕಾಶ್‌ರವರು ಭಾಗವಹಿಸಿದ್ದರು.

## ಪ್ರೊ: ಕೆ.ಇ. ರಾಧಾಕೃಷ್ಣ ರವರಿಗೆ ಡಿಲಿಟ್ ಪದವಿ



ತುಮಕೂರು ವಿಶ್ವವಿದ್ಯಾನಿಲಯದಿಂದ ಶಿಕ್ಷಣ ತಜ್ಞ ಪ್ರೊ॥ ಕೆ.ಇ. ರಾಧಾಕೃಷ್ಣರವರಿಗೆ "ಡಿಲಿಟ್" ಗೌರವವನ್ನು ನೀಡಿರುತ್ತಾರೆ. ಶ್ರೀಯುತರು ಬರೆದ "ವಾಲ್ಮಿಕೀಯ ಶ್ರೀಮದ್ರಾಮಾಯಣ ಪ್ರಭುತ್ವಲೋಕ ಕಥನ ಗ್ರಂಥಕ್ಕೆ" ಈ ಗೌರವ ದೊರೆತಿದೆ. ಈ ಪ್ರಬಂಧ ಮೂಲಭೂತವಾಗಿ ವಿಶ್ಲೇಷಿಸುತ್ತದೆ. ವಾಲ್ಮೀಕಿ ವಿರಚಿತ ಮೂಲ ರಾಮಾಯಣ ಚಿತ್ರಿಸುವ ಆಡಳಿತಾತ್ಮಕ ಲೋಕಗಳನ್ನು ಆಧುನಿಕ ಜಗತ್ತಿನ ವಿಚಾರಗಳಿಗೆ ಮತ್ತು ಪಾರಂಪರಿಕ ನಡಾವಳಿಗಳಿಗೆ ಸಮನ್ವಯವಾಗುವಂತೆ ಸಂಶೋಧಿಸಿದ ಈ ಮಹಾಸಂಪ್ರಬಂಧ ವಿದ್ವತ್ ಲೋಕದಲ್ಲಿ ಮಹತ್ವಪೂರ್ಣದ್ದು ಎಂದು ವಿದ್ವಾಂಸರುಗಳಿಂದ ಅನುಮೋದಿಸಲ್ಪಟ್ಟಿದೆ. ಮಹಾಸಭೆಯು ಶ್ರೀಯುತರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತದೆ.

## ಚಿನ್ನದ ಪದಕ ವಿಜೇತೆ ಕುಮಾರಿ ಇಶಾನಿ ಕಿರಣ್



ಚಿಂತಾಮಣಿ ತಾಲ್ಲೂಕು, ಕೈವಾರ ಗ್ರಾಮದಲ್ಲಿ ವಾಸವಾಗಿರುವ ಮಹಾಸಭೆಯ ಸದಸ್ಯರಾದ ದಿ॥ ಗಿರಿಜಮ್ಮ ಮತ್ತು ಶ್ರೀ ಜಿ.ಆರ್. ನಾರಾಯಣ ಸ್ವಾಮಿರವರ ಮೊಮ್ಮಗಳಾದ ಕುಮಾರಿ ಇಶಾನಿಕಿರಣ್ ಇವರು ದಿನಾಂಕ 08.06.2022 ರಂದು ಬೆಂಗಳೂರು ನಗರದಲ್ಲಿ ನಡೆದ ರಾಜ್ಯಮಟ್ಟದ ವಾಟರ್ ಪೋಲೋ ಈಜು ಸ್ಪರ್ಧೆಯಲ್ಲಿ ಚಿನ್ನದ ಪದಕವನ್ನು ಗೆದ್ದಿರುತ್ತಾರೆ ಎಂದು ತಿಳಿಸಲು ಬಹಳ ಸಂತೋಷವಾಗುತ್ತದೆ. ಇವರು ರಾಷ್ಟ್ರೀಯ ಮಟ್ಟದ ಈಜು ಸ್ಪರ್ಧೆಗೆ ಆಯ್ಕೆಯಾಗಲೆಂದು ಮತ್ತು ಇವರಿಗೆ ಉತ್ತಮ ಯಶಸ್ಸು ಸಿಗಲೆಂದು ಹಾರೈಸುತ್ತೇವೆ.

# ಹಿರಿಯ ಮುತ್ಸುದ್ಧಿ ಎಲ್.ಟಿ. ಹೆಗಡೆಯವರ "ನಾನು" ಆತ್ಮಕಥನ ಲೋಕಾರ್ಪಣೆ




ಸಾಗರ: ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದಾಕ್ಷಣ ಗೌರವ ಸಿಗಲಿದೆ ಎನ್ನುವ ಭ್ರಮೆ ಬೇಡ. ಬದಲಾಗಿ ಜಾತಿಗೆ ಗೌರವ ತರುವ ರೀತಿ ಜೀವನ ನಡೆಸಿ. ಆ ಮೂಲಕ ಗೌರವ ಪಡೆದುಕೊಳ್ಳಬೇಕು ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ಹೇಳಿದರು.

ಮಡಸೂರು ಲಿಂಗದಹಳ್ಳಿಯ ಸಾವಿತ್ರಮ್ಮ ಮತ್ತು ಎಲ್.ಟಿ. ತಿಮ್ಮಪ್ಪ ಹೆಗಡೆ ಪ್ರತಿಷ್ಠಾನದಿಂದ ಎಲ್.ಟಿ. ತಿಮ್ಮಪ್ಪ ಹೆಗಡೆ ಆತ್ಮಕಥನ **'ನಾನು'** ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿ ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಧಾರ್ಮಿಕ ಕ್ಷೇತ್ರದಲ್ಲಿ ಅತ್ಯಂತ ಪ್ರಾಮಾಣಿಕವಾಗಿ ಕೆಲಸ ಮಾಡಿದ ಅಪರೂಪದ ವ್ಯಕ್ತಿಗಳಲ್ಲಿ ಎಲ್.ಟಿ.ತಿಮ್ಮಪ್ಪ ಹೆಗಡೆಯವರೂ ಒಬ್ಬರು. ಅವರ ಆತ್ಮ ಕಥನದಲ್ಲಿ ಈ ಎಲ್ಲವೂ ಒಳಗೊಂಡಿಲ್ಲ. ಮುಂದೆ ವಿಸ್ತೃತವಾಗಿ ಬರಬಹುದಾದ ಆತ್ಮಕಥನದಲ್ಲಿ ಅವರು ಎಲ್ಲ ಕ್ಷೇತ್ರದಲ್ಲಿಯೂ ಕಾರ್ಯ ಮಾಡಿರುವುದರ ಕುರಿತು ಬರಬಹುದು ಎಂದರು.

ರಾಜಕೀಯದಲ್ಲಿ ಸಜ್ಜನರು, ಸುಸಂಸ್ಕೃತರು ಮತ್ತು ದೇಶದ ಕುರಿತು ಒಂದಾಗಿ ಚಿಂತನೆ ಮಾಡುವವರು ವಿರಳವಾಗಿದ್ದಾರೆ. ಇದಕ್ಕೆ ಉದಾಹರಣೆ ಪ್ರಸ್ತುತ ದಿನದಲ್ಲಿ ದೇಶದ ಹಿತವಿರಬಹುದಾದ ಅಗ್ನಿಪಥ. ಈ ವಿಚಾರವಾಗಿ ವಿರೋಧಕ್ಕಾಗಿ ಟೀಕೆ ಮಾಡುವವರು ಒಂದು ಕಡೆಯಾದರೆ ಇದನ್ನು ಸಮರ್ಥಿಸುವವರು ಇನ್ನೊಂದು ಕಡೆ. ಒಟ್ಟಾರೆ ದೇಶದ ವಿಚಾರದಲ್ಲಿ ಒಮ್ಮತ ಇಲ್ಲದಿರುವುದು ಈಗಿನ ರಾಜಕೀಯಕ್ಕೆ ಹಿಡಿದ ಕನ್ನಡಿ. ತಿಮ್ಮಪ್ಪ ಹೆಗಡೆಯವರ ಕಾಲದ ರಾಜಕೀಯದಲ್ಲಿ ದೇಶದ ಒಳಿತನ್ನು ಯಾರೂ ಮಾಡಿದರೂ ಸಮ್ಮತಿಸುವ ಮತ್ತು ಅಲ್ಲದಿರುವುದನ್ನು ವಿರೋಧಿಸುವ ವ್ಯಕ್ತಿತ್ವವಿತ್ತು. ಅಂತಹ ವ್ಯಕ್ತಿತ್ವದ ನಮಗೆಲ್ಲ ಮಾದರಿಯಾಗಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ವಿಧಾನ ಸಭಾಧ್ಯಕ್ಷ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಮಾತನಾಡಿ, ರಾಜಕೀಯ ವ್ಯವಸ್ಥೆಗೆ ಗೌರವ ತಂದುಕೊಟ್ಟ ಅಪರೂಪದ ರಾಜಕಾರಣಿಗಳಲ್ಲಿ ಎಲ್.ಟಿ. ತಿಮ್ಮಪ್ಪನವರು ಎದ್ದು ಕಾಣುತ್ತಾರೆ. ಪ್ರಸ್ತುತ ಅವರ ಕುಟುಂಬ ಗಮನಿಸಿದಾಗ ನಂಬಿಕೆ, ಪ್ರಾಮಾಣಿಕತೆ, ಭಾವನಾತ್ಮಕ ಸಂಬಂಧ ಕಾಣಬಹುದು. ಇಂತ ಮಾನವೀಯ ಮತ್ತು ಭಾವನಾತ್ಮಕ ಸಂಬಂಧಗಳು ಇಂದಿನ ಒಟ್ಟು ವ್ಯವಸ್ಥೆಗೆ ಅತ್ಯಂತ ಅಗತ್ಯವಿದೆ ಎಂದರು.

ಪುಸ್ತಕ ಲೋಕಾರ್ಪಣೆ ಮಾಡಿದ ಹಿರೇಮಗಳೂರು ಕಣ್ಣನ್ ಮಾತನಾಡಿ, ಏಕಮುಖ ಚಿಂತನೆ, ಒಗ್ಗಟ್ಟಿನ ಬಲ ಯಾವುದೇ ಸಮಾಜಕ್ಕೆ ಭೂಷಣ. ಸ್ವಾರ್ಥವಿಲ್ಲದ ಸಮಾಜ ಸೇವೆಯಲ್ಲಿ ಪಾಲ್ಗೊಂಡ ತಿಮ್ಮಪ್ಪ ಹೆಗಡೆಯವರನ್ನು ಸಹಕಾರ ರತ್ನವಾಗಿಸಬೇಕು ಎಂದರು. ಪುಸ್ತಕ ನಿರೂಪಕ ಮಾ.ವೆಂ.ಸ. ಪ್ರಸಾದ್ ಪುಸ್ತಕದ ಕುರಿತು ಮಾತನಾಡಿದರು. ಎಲ್.ಟಿ.ತಿಮ್ಮಪ್ಪ ಹೆಗಡೆ, ಸಾವಿತ್ರಮ್ಮ ತಿಮ್ಮಪ್ಪ ಹೆಗಡೆ ಇದ್ದರು. ನಿಧಿ ಪ್ರಾರ್ಥಿಸಿದರು. ಹೆಗಡೆಯವರ ಪುತ್ರ ತಿಮ್ಮಪ್ಪ ಸ್ವಾಗತಿಸಿದರು. ವರುಣ್ ನಿರೂಪಿಸಿದರು. ಗಣಪತಿ ವಂದಿಸಿದರು.


## ಸಪ್ತರ್ಷಿ ಫೌಂಡೇಷನ್

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)

ಗಾಯತ್ರಿ ಭವನ, ನಂ.3070, ಗಾಯತ್ರೀ ಭವನ ರಸ್ತೆ, 9ನೇ ಮುಖ್ಯರಸ್ತೆ ಬನಶಂಕರಿ 2ನೇ ಹಂತ, ಬೆಂಗಳೂರು–560070.

## ನವೀಕೃತ ಗಾಯತ್ರೀ ಭವನ

ವಿಪ್ರಬಾಂಧವರ ಗಮನಕ್ಕೆ : ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ನವೀಕೃತ "ಗಾಯತ್ರೀ ಭವನ" ಸಮುದಾಯ ಭವನವನ್ನು ಉಪನಯನ, ನಾಮಕರಣ, ಹುಟ್ಟುಹಬ್ಬ, ಮದುವೆ ಹಾಗೂ ಇನ್ನಿತರ ಶುಭ, ಧಾರ್ಮಿಕ ಕಾರ್ಯಕ್ರಮಗಳಿಗೆ ಸದಸ್ಯರಿಗೆ ರಿಯಾಯಿತಿ ದರದಲ್ಲಿ ನೀಡಲಾಗುವುದು.

ವಿವರಗಳಿಗೆ ಸಂಪರ್ಕಿಸಿ : ದೂರವಾಣಿ : 080–26770066 / 26771695

ವ್ಯವಸ್ಥಾಪಕರು 7349714424 (ಮೊಬೈಲ್)

# ಮಹಾಸಭಾ ಅಧ್ಯಕ್ಷರಿಂದ ಸಾಗರದಲ್ಲಿ ವಿಪ್ರ ಸಂಘಟನೆ ಸಮಾಲೋಚನೆ



ಮಹಾಸಭಾ ಅಧ್ಯಕ್ಷರಿಗೆ ಸಾಗರ ವಿಪ್ರ ಮುಖಂಡರಿಂದ ಗೌರವ ಸಮರ್ಪಣೆ



ಮಹಾಸಭಾಧ್ಯಕ್ಷರು ಸಾಗರದ ವಿಪ್ರ ಸಮೂಹದೊಡನೆ ಸಮಾಲೋಚನೆಯನ್ನು ವಿಪ್ರನುಡಿ ಸಂಚಾಲಕ ಹೆಚ್.ವಿ. ಸುಬ್ಬರಾಯರ ತೋಟದ ಮನೆಯಲ್ಲಿ ನಡೆಸಿದರು. ಬ್ರಾಹ್ಮಣರು ಬಹುಸಂಖ್ಯೆಯಲ್ಲಿರುವ ಸಾಗರ, ಶಿರಸಿ, ಸಿದ್ದಾಪುರದಂತಹ ತಾಲ್ಲೂಕುಗಳಲ್ಲಿ ಸಂಘಟನೆಯನ್ನು ಬಲಗೊಳ್ಳಬೇಕಾದ ಅಗತ್ಯ ಹಾಗೂ ಈ ಪ್ರದೇಶಗಳಲ್ಲಿ ಮಹಾಸಭೆಗೆ ಅಧಿಕ ಸಂಖ್ಯೆಯಲ್ಲಿ ಸದಸ್ಯರನ್ನು ಮಾಡಲು ಇರುವ ಅನುಕೂಲಗಳನ್ನು ವಿವರಿಸಿದರು. ಶ್ರೀ ಸುಬ್ಬರಾಯರು ಮಾತನಾಡಿ ಮಲೆನಾಡಿನ ವಿಪ್ರರು ಪಟ್ಟಣ ಪ್ರದೇಶದ ವಿಪ್ರರಿಗಿಂತ ಹೇಗೆ ಭಿನ್ನ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ವಿವರಿಸಿ ಈ ಭಾಗದ ಜನರಿಗೆ ರಾಜ್ಯಮಟ್ಟದ ಸಂಘಟನೆಯ ಸಹಾಯ ಮತ್ತು ಬೆಂಬಲ ಇಂದಿನ ತುರ್ತು ಅಗತ್ಯವಾಗಿದೆ ಎಂಬುದನ್ನು ವಿವರಿಸಿದರು.

ಸಾಗರ ಬ್ರಾಹ್ಮಣ ಸಭಾ ಅಧ್ಯಕ್ಷ ರವೀಶ್, ಕಾರ್ಯಕಾರಿ ಸಮಿತಿ ಸದಸ್ಯ ವಕೀಲರಾದ ರಾಘವೇಂದ್ರ, ಸಾಗರ ಹವ್ಯಕ ಪರಿಷತ್ತಿನ ಪದಾಧಿಕಾರಿಗಳು, ಹವ್ಯಕ ಸಾಗರ (ರಿ) ಸಂಸ್ಥೆಯ ಪದಾಧಿಕಾರಿಗಳು ಹಿರಿಯ ವಕೀಲ ಶ್ರೀ ಕೆ.ಎನ್. ಶ್ರೀಧರ್, ಮುಂತಾದವರು ಭಾಗವಹಿಸಿ ವಿಪ್ರರ ವಿವಿಧ ಸಮಸ್ಯೆಗಳ ಕುರಿತು ಹಾಗೂ ಸಂಘಟನೆಯ ಅಗತ್ಯ ಕುರಿತು ಅಧ್ಯಕ್ಷರಿಗೆ ಮನವರಿಕೆ ಮಾಡಿ, ಬ್ರಾಹ್ಮಣ ಮಹಾಸಭೆಯ ಅಭಿವೃದ್ಧಿಗೆ ತಮ್ಮ ಪೂರ್ಣ ಸಹಕಾರ ಹಾಗೂ ಬೆಂಬಲವನ್ನು ವ್ಯಕ್ತಪಡಿಸಿ, ಮುಂದಿನ ದಿನಗಳಲ್ಲಿ ಸಾಗರದಿಂದ ಸಾವಿರ ಸದಸ್ಯರ ನೋಂದಾವಣಿಯ ಭರವಸೆ ನೀಡಿದರು.

# ಜನರಿಗೆ ಸಹಕಾರಿ ಸಂಸ್ಥೆ ವರದಾನ–ಮಹಾಸಭಾ ಅಧ್ಯಕ್ಷರು



ಶಿವಮೊಗ್ಗ: ಗ್ರಾಮೀಣ ಪ್ರದೇಶ ಸೇರಿದಂತೆ ದೇಶವಾಸಿಗಳಿಗೆ ಸಹಕಾರಿ ಸಂಸ್ಥೆ ವರದಾನವಾಗಿದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿ ಅವರು ಅಭಿಪ್ರಾಯಪಟ್ಟರು.

ಭಾನುವಾರ ಇಲ್ಲಿನ ವಿನೋಬನಗರದ ವಿಪ್ರ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಸ್ಥೆಗೆ ಆಗಮಿಸಿದ ಅಧ್ಯಕ್ಷರು ಸಂಸ್ಥೆಯು ಸಾಧಿಸಿದ ಪ್ರಗತಿಯ ಕುರಿತು ಪ್ರಶಂಸಿಸಿದರು. ಯಾವುದೇ ಒಂದು ಸಹಕಾರ ಸಂಸ್ಥೆಯ ಪ್ರಗತಿ, ಆ ಸಂಸ್ಥೆಯ ಆಡಳಿತ ಮಂಡಳಿಯ ನಿರ್ದೇಶಕರನ್ನು ಅವಲಂಬಿಸಿದೆ. ನಿಸ್ವಾರ್ಥ ಸೇವೆಯಿಂದ ಕಾರ್ಯ ನಿರ್ವಹಿಸಿದರೆ, ಕಟ್ಟಕಡೆಯ ಬಡವನಿಗೂ ಬದುಕು ಕಟ್ಟಿಕೊಡಲು ಸಾಧ್ಯ. ದೇಶದ ಆರ್ಥಿಕ ಪರಿಸ್ಥಿತಿ ಸಹಕಾರಿ ಸಂಸ್ಥೆಯ ಮೇಲಿದೆ ಎಂದರು.

ಸಹಕಾರಿ ಸಂಸ್ಥೆಗಳು ಅವನತಿ ಹೊಂದಿದರೆ, ಜನರ ಬದುಕು ಅಸಹನೀಯವಾಗಲಿದೆ. ಜನತೆಗೆ ಅಗತ್ಯವಾದ ವಸ್ತುಗಳನ್ನು ಮನೆ ಬಾಗಿಲಿಗೆ ತಲುಪಿಸುವ ವ್ಯವಸ್ಥೆ ಸಹಕಾರ ಸಂಸ್ಥೆಗಳಿಗಿದೆ. ಹಾಗಾಗಿ ನಮ್ಮನ್ನಾಳುವ ಸರ್ಕಾರಗಳು, ಸಹಕಾರ ಸಂಸ್ಥೆಗಳ ಕತ್ತು ಹಿಸುಕುವ ಕಾರ್ಯಕ್ಕೆ ಮುಂದಾಗದೆ, ಮತ್ತಷ್ಟು ಬಲಪಡಿಸುವ ಅಗತ್ಯವಿದೆ ಎಂದರು.

ಈ ಸಂದರ್ಭದಲ್ಲಿ ಅಶೋಕ ಹಾರನಹಳ್ಳಿ ಅವರನ್ನು ಸಹಕಾರಿ ಸಂಸ್ಥೆ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಸಹಕಾರಿಯ ಅಧ್ಯಕ್ಷ ಎ.ಎಸ್.ನಾರಾಯಣಮೂರ್ತಿ, ಉಪಾಧ್ಯಕ್ಷ ಎಸ್.ಜಿ. ಗೋಪಾಲ್, ಮಾಜಿ ಅಧ್ಯಕ್ಷ ಎ. ಪ್ರಸನ್ನಕುಮಾರ್, ನಿರ್ದೇಶಕರಾದ ಎ.ಎಸ್.ಗುರುರಾಜರಾವ್, ಶ್ರೀನಿವಾಸಮೂರ್ತಿ, ರತ್ನಾಕರ, ವಾರಿಧಿ ಜಗದೀಶ್, ಸಿ.ಎಂ. ಕುಲಕರ್ಣಿ, ಮಾಲತಿ, ಬ್ರಾಹ್ಮಣ ಮಹಾಸಭಾದ ಕಿಶೋರ್ ಶಿರ್ನಾಳಿ, ವಕೀಲ ರವಿಕುಮಾರ್ ಇದ್ದರು.

## ಬ್ರಾಹ್ಮಣ ಮಹಾಸಭಾದ ಜಿಲ್ಲಾ ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ

## ಭಕ್ತಿ, ಜ್ಞಾನ, ವೈರಾಗ್ಯ ಪ್ರತೀಕವೇ ಬ್ರಾಹ್ಮಣ : ಶ್ರೀ ವಿದ್ಯಾಸಿಂಧು ಮಾಧವ ತೀರ್ಥರು



ರಾಯಚೂರು: ಭಕ್ತಿ, ಜ್ಞಾನ, ವೈರಾಗ್ಯ ಪ್ರತೀಕವೇ ಬ್ರಾಹ್ಮಣ. ಭಗವಂತನನ್ನು ಚೆನ್ನಾಗಿ ಅರಿತುಕೊಂಡವನೇ ನಿಜವಾದ ಬ್ರಾಹ್ಮಣ ಎಂದು ಪರಮಪೂಜ್ಯ ಶ್ರೀ ವಿದ್ಯಾಸಿಂಧು ಮಾಧವತೀರ್ಥ ಶ್ರೀಪಾದಂಗಳವರು ನುಡಿದರು. ನಗರದ ಶಾರದ ವಿದ್ಯಾನಿಕೇತನ ಶಾಲೆಯಲ್ಲಿ ಭಾನುವಾರದ ಸಂಜೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಜಿಲ್ಲಾ ಘಟಕದ ನೂತ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಆಶೀರ್ವಚನ ಮಾಡಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಜಗತ್ತಿನಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡಿದೆ. ಗೌರವಯುತ ವ್ಯಕ್ತಿಗಳನ್ನು ಗೌರವದಿಂದ ನೋಡಬೇಕು. ವಿ ಎಂದರೆ ವಿಷ್ಣು, ಪ್ರ ಎಂದರೆ ಧಾರಣೆ, ಯಾರು ಹೃದಯದಲ್ಲಿ ಭಗವಂತನನ್ನು ಸ್ಮರಣೆ ಮಾಡುತ್ತಾರೋ ಅವರೇ ವಿಪ್ರರು. ಪ್ರತಿಯೊಬ್ಬ ವಿಪ್ರರು ನಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಮುಂದಾಗಬೇಕು ಎಂದು ಕರೆ ನೀಡಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಸಂಘಟನಾ ಕಾರ್ಯದರ್ಶಿ ಡಾ.ಬಿ.ಎಸ್. ರಾಘವೇಂದ್ರ ಭಟ್ ಮಾತನಾಡಿ, ಬ್ರಾಹ್ಮಣ ಮಹಾಸಭಾದ ಸಂಘಟನೆಯು ಆಂದೋಲನಾ ಮಾದರಿಯಲ್ಲಿ ನಡೆಯಬೇಕು. ಅಂದಾಗ ಮಾತ್ರ ಸಮಾಜ ಅಭಿವೃದ್ಧಿ ಹೊಂದಲು ಸಹಕಾರಿಯಾಗುತ್ತದೆ. ಅಶೋಕ ಹಾರನಹಳ್ಳಿಯವರು ಚುನಾವಣೆ ಸಂದರ್ಭದಲ್ಲಿ ನೀಡಿದ ಭರವಸೆಯಂತೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಬೈಲಾ ತಿದ್ದುಪಡಿ ಕಾರ್ಯ ಪ್ರಗತಿ ಹಂತದಲ್ಲಿದೆ. ಮುಜರಾಯಿ ಇಲಾಖೆಯ ವ್ಯಾಪ್ತಿಗೊಳಪಡುವ ದೇವಸ್ಥಾನಗಳಲ್ಲಿ ಪೌರೋಹಿತ ವೃತ್ತಿಗೆ ಸೇರುವ ಪೂರ್ವ ನಡೆಯುವ ಆಗಮ ಪರೀಕ್ಷೆಗಳು ಬೆಂಗಳೂರು ನಗರಕ್ಕೆ ಸೀಮಿತವಾಗಿದ್ದು, ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿಯೂ ನಡೆಯುವಂತೆ ಮಾಡಲು ಮಹಾಸಭಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಿದೆ ಎಂದ ವಿವರಿಸಿದರು.

ಇದೇ ಸಂದರ್ಭದಲ್ಲಿ ನೂತನ ಪದಾಧಿಕಾರಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಅಧ್ಯಕ್ಷತೆಯನ್ನು ಜಿಲ್ಲಾ ಪ್ರಧಾನ ಸಂಚಾಲಕ ಡಿ.ಎ. ಮುರಳೀಧರ ವಹಿಸಿದ್ದರು. ರಾಜ್ಯ ಪರಿಷತ್ತಿನ ಹಿರಿಯ ಸದಸ್ಯ ನರಸಿಂಗರಾವ್ ದೇಶಪಾಂಡೆ, ರಾಜ್ ಉಪಾಧ್ಯಕ್ಷ ಡಾ. ಆನಂದತೀರ್ಥ ಫಡ್ನೀಸ್, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರಾದ ಪ್ರಾಣೇಶ ಮುತಾಲಿಕ್, ಸಿ.ರಾಘವೇಂದ್ರ ವಕೀಲ, ಮಹಿಳಾ ಘಟಕದ ಜಿಲ್ಲಾ ಸಂಚಾಲಕಿ ರೇಖಾ ಮುರಳೀಧರ, ನಗರದ ಪ್ರಧಾನ ಸಂಚಾಲಕ ವೇಣುಗೋಪಾಲ ಇನಾಂದಾರ್, ರಾಮರಾವ್ ಕುಲಕರ್ಣಿ, ಎ.ಸುಧೀರ, ತಾರಾನಾಥ ಜೇಗರಕಲ್, ಕೋಲಾರ ಹಾಗೂ ತಾಲ್ಲೂಕು ಸಂಚಾಲಕರು ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು. ವೆಂಕಟೇಶ ನವಲಿ ನಿರೂಪಿಸಿದರು.

## ಶಿವಮೊಗ್ಗದಲ್ಲಿ ಆಚಾರ್ಯತ್ರಯರ ಜಯಂತಿ



ದಿನಾಂಕ 02-06-2022 ರಂದು ಶಿವಮೊಗ್ಗದ ಬಿ.ಹೆಚ್. ರಸ್ತೆಯಲ್ಲಿರುವ ಶ್ರೀ ಮಾತಾ ಮಾಂಗಲ್ಯ ಮಂದಿರದಲ್ಲಿ ಶಿವಮೊಗ್ಗ ಜಿಲ್ಲಾ ಬ್ರಾಹ್ಮಣ ಮಹಾಸಭಾದ ವತಿಯಿಂದ ಆಚಾರ್ಯತ್ರಯರ ಜಯಂತಿ ಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಶಂಕರಾಚಾರ್ಯರ ಬಗ್ಗೆ ಶ್ರೀ ಅಚ್ಯುತ ಅವಧಾನಿ, ಶಿವಮೊಗ್ಗ ಜಿಲ್ಲಾ ಬ್ರಾಹ್ಮಣ ಮಹಾಸಭಾದ ನಿರ್ದೇಶಕರು ಹಾಗೂ ಸಂಸ್ಕೃತ ಉಪನ್ಯಾಸಕರು, ಡಿ.ವಿ.ಎಸ್. ಕಾಲೇಜ್ ಶ್ರೀ ರಾಮಾನುಜಾಚಾರ್ಯರ ಬಗ್ಗೆ ಶ್ರೀ ಭಾರ್ಗವರಾಮನ್ ಭಾರತೀಯ ವಿಚಾರ ವೇದಿಕೆಯ ಕಾರ್ಯಕರ್ತರು ಹಾಗೂ ಶ್ರೀ ಮಧ್ವಾಚಾರ್ಯರ ಬಗ್ಗೆ ಶ್ರೀ ಕೃಷ್ಣಾಚಾರ್ ರಾಯಚೂರು ಇವರು ಉಪನ್ಯಾಸವನ್ನು ಮಾಡಿದರು. ಶ್ರೀ ಶಂಕರಾನಂದ ಜೋಯ್ಸ್ ರವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಆಚಾರ್ಯರ ಬಗ್ಗೆ ಶುಭ ನುಡಿಗಳನ್ನಾಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಯತ ಕೆ.ಸಿ.ನಟರಾಜ ಭಾಗವತ್ ಇವರು ಮಾತನಾಡುತ್ತಾ ಆಚಾರ್ಯತ್ರಯರ ಬಗ್ಗೆ ಹಾಗೂ ಅವರುಗಳು ಸಮಾಜಕ್ಕೆ ನೀಡಿರುವ ಸಂದೇಶಗಳ ಬಗ್ಗೆ ತಿಳಿಸಿದರು ಹಾಗೂ ಮಹಾಸಭಾದ ಮುಂದಿನ ಕಾರ್ಯಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಶ್ರೀ ಬಿ.ಕೆ. ವೆಂಕಟೇಶ ಮೂರ್ತಿಗಳು ಎಲ್ಲರನ್ನೂ ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನು ಆಡಿದರು. ಶ್ರೀ ಅಕ್ಷಯ್ ಇವರು ಪ್ರಾರ್ಥನೆ ಮಾಡಿದರು. ನಿಲಯದ ವಿದ್ಯಾರ್ಥಿಗಳಿಂದ ವೇದಘೋಷ ನಡೆಸಿದರು. ಶ್ರೀ ಸೂರ್ಯನಾರಾಯಣ ರವರು ನಿರೂಪಿಸಿದರು. ಶ್ರೀಮತಿ ಡಾ. ನಾಗಮಣಿ ಎಲ್ಲರನ್ನು ವಂದಿಸಿದರು.

## ಸದಸ್ಯತ್ವ ಅಭಿಯಾನ ಹಾಗೂ ಸಂಘಟನಾತ್ಮಕ ಸಭೆ



ದಿನಾಂಕ 31. 5. 22.ರಂದು. ಹಾವೇರಿ ಜಿಲ್ಲೆ ಶಿಗ್ಗಾವ್ ಮತ್ತು ಸವಣೂರು ತಾಲೂಕು ಮತ್ತು ಸಿಗ್ಗಾವ್ ತಾಲೂಕಿನ ಬಂಕಾಪುರ್ ನಗರಗಳಲ್ಲಿ ಮಹಾಸಭೆಯ ಸಂಘಟನಾತ್ಮಕ ಹಾಗೂ ಸದಸ್ಯತ್ವ ಅಭಿಯಾನ ನಡೆಯಿತು. ಮುಂಬರುವ ದಿನಗಳಲ್ಲಿ ಜಿಲ್ಲೆಯ ಸಮಾವೇಶ ಜಿಲ್ಲಾಧ್ಯಕ್ಷರ ಆಯ್ಕೆಗೆ ಹಾಗೂ ತಾಲೂಕು ಅಧ್ಯಕ್ಷರ ಆಯ್ಕೆ ಸಲುವಾಗಿ ಸಭೆಗಳನ್ನು ಇಟ್ಟುಕೊಳ್ಳಲಾಗಿತ್ತು. ಸಭೆಯಲ್ಲಿ ಮಹಾಸಭಾದ ರಾಜ್ಯ ಜಂಟಿ ಕಾರ್ಯದರ್ಶಿ ಹಾಗೂ ಹಾವೇರಿ ಮತ್ತು ಗದಗ ಜಿಲ್ಲೆಯ ಉಸ್ತುವಾರಿಗಳಾದ ಶ್ರೀ ವಿಜಯ ನಾಡಜೋಶಿ ಜಿಲ್ಲಾ ನಾಯಕರು ಗಳಾದ ಶ್ರೀ ಪ್ರಭಾಕರ್ ಮಂಗಳೂರು, ಶ್ರೀ ವಸಂತ ಮುಕ್ತಾಲಿ, ಶ್ರೀ ರಮೇಶ್ ಕಡಕೋಳ ಭಾಗವಹಿಸಿದ್ದರು. ಸವಣೂರು ತಾಲೂಕಿನ ಪ್ರಮುಖರಾದ ಶ್ರೀ ಜೈತೀರ್ಥ ದೇಶಪಾಂಡೆ, ಶ್ರೀ ಗುರುರಾಜ್ ಸಾರಥಿ ರಾಮ್, ಶ್ರೀ ಕುಲಕರ್ಣಿ, ಶ್ರೀ ದೀಕ್ಷಿತ್ ದೇಶಪಾಂಡೆ ಮುಂತಾದವರು ಭಾಗವಹಿಸಿದ್ದರು. ಸಿಗ್ಗಾವ್‌ದಿಂದ ಶ್ರೀ ಎಸ್ ಪಿ ಜೋಶಿ, ದಿವಾಕರ್ ದೀಕ್ಷಿತ್ ಹಾಗೂ ಇನ್ನಿತರ ಮಹಿಳಾ ಪ್ರಮುಖರು ಪಾಲ್ಗೊಂಡಿದ್ದರು. ಬಂಕಾಪುರ ನಗರದಿಂದ ಶ್ರೀ ಪ್ರಕಾಶ್ ಮೊದಲಾದವರು ಭಾಗವಹಿಸಿದ್ದರು.

## ಶ್ರೀ ಶುಕ್ಲಯಜುರ್ಶಾಖಾ ಟ್ರಸ್ಟ್ (ರಿ.)ನ ಕಾರ್ಯಕಾರಿ ಮಂಡಳಿಗೆ ಅಯ್ಕೆ



ಬೆಂಗಳೂರಿನ ಶ್ರೀ ಶುಕ್ಲಯಜುಃಶಾಖಾ ಟ್ರಸ್ಟ್ (ರಿ.) ನ ಕಾರ್ಯಕಾರಿ ಮಂಡಳಿಯ ಚುನಾವಣೆಯಲ್ಲಿ ಚುನಾಯಿತರಾದ ಮಹಾಸಭಾ ಉಪಾಧ್ಯಕ್ಷರಾದ ಡಿ.ವಿ. ರಾಜೇಂದ್ರ ಪ್ರಸಾದ್ ಹಾಗೂ ಕೇಂದ್ರ ಕಾರ್ಯಕಾರಣಿ ಸದಸ್ಯರಾದ ಸಿ.ಹೆಚ್. ಪ್ರಭಾಕರ್ ಅವರನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವತಿಯಿಂದ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ್ ಹಾರನಹಳ್ಳಿ ಅವರು ಅಭಿನಂದಿಸಿದರು.

## ಬೀದರನಲ್ಲಿ ಸಾಮೂಹಿಕ ಉಪನಯನ

ಬೀದರ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಬೀದರ ಜಿಲ್ಲಾ ಘಟಕದ ವತಿಯಿಂದ ಗುರುವಾರ ನಗರದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಸಾಮೂಹಿಕ ಬ್ರಹ್ಮೋಪದೇಶ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಬ್ರಾಹ್ಮಣ 8 ವಟುಗಳ ಉಪನಯನ ಹಾಗೂ ಬ್ರಹ್ಮೋಪದೇಶ ನಡೆಯಿತು. ವೈದಿಕ ವಿಧಾನಗಳನ್ನು ಶಿವಕುಮಾರ್ ದಿಕ್ಷಿತ್, ದಿಗಂಬರ ದಿಕ್ಷಿತ್, ಗಜಾನನ ದಿಕ್ಷಿತ್, ಅಚ್ಯುತ ದಿಕ್ಷಿತ್, ಶ್ರೀನಿವಾಸ ದಿಕ್ಷಿತ, ರಾಜಾರಾಮ್ ನಡೆಸಿಕೊಟ್ಟರು.



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಜಿಲ್ಲಾ ಘಟಕ ಹಾಗೂ ಶ್ರೀ ಗುರುರಾಜ ಸೇವಾ ಸಂಘ (ರಿ) ಹಾಗೂ ವೇದವ್ಯಾಸ ವೇದಾಧ್ಯಾಯನ ಕೇಂದ್ರ(ರಿ) ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಬೀದರ ಜಿಲ್ಲಾ ಘಟಕದ ಅಧ್ಯಕ್ಷರಾದ ಹೊಸ ದಿಗಂತ ದಿನಪತ್ರಿಕೆಯ ಜಿಲ್ಲಾ ವರದಿಗಾರರಾದ ವೆಂಕಟೇಶ್ ಮೋರಖಂಡಿಕರ್ ವಟುಗಳಿಗೆ ಬ್ರಹ್ಮಚರ್ಯ ಆಚರಣೆ ನಿತ್ಯ ಸಂಧ್ಯಾವಂದನೆ ಧಾರ್ಮಿಕ ಆಚರಣೆ ತಪ್ಪದೆ ಮಾಡುವಂತೆ ಹೇಳಿದರು



**ಗುಲ್ಬರ್ಗದಲ್ಲಿ ಸಂಘಟನಾ ಸಭೆ**

# ರಟ್ಟೆಹಳ್ಳಿ ಹಾಗೂ ಹಾನಗಲ್‌ನಲ್ಲಿ ವಿಪ್ರ ಸಂಘಟನಾ ಸಭೆ

ಇತ್ತೀಚೆಗೆ ಹಾವೇರಿ ಜಿಲ್ಲೆಯಲ್ಲಿ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸಭೆಯನ್ನು ರಟ್ಟಿಹಳ್ಳಿ ತಾಲೂಕ್ ರಟ್ಟಿಹಳ್ಳಿಯ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ಕರೆಯಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಶ್ರೀ ವಿಜಯೇಂದ್ರ ಕಟ್ಟಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ವಿಜಯ ನಾಡಜೋಶಿ ಸಂಘಟನೆ ಮತ್ತು ಸದಸ್ಯತ್ವದ ಬಗ್ಗೆ ಹಾಗೂ ಮಾನ್ಯ ರಾಜ್ಯಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಮತ್ತು ಮಾನ್ಯ ಶ್ರೀ ಹೊ.ನಾ. ಹಿರಿಯಣ್ಣಸ್ವಾಮಿಯವರು ಉತ್ತರ ಕರ್ನಾಟಕದಲ್ಲಿ ಸಮಾಜದ ಸಂಘಟನೆಗೆ ಹೆಚ್ಚು ಪ್ರಾಧಾನ್ಯತೆ ಕೊಟ್ಟಿದ್ದಾರೆ. ಕಾರಣ ಎಲ್ಲರೂ ಸದಸ್ಯರಾಗೋಣ ಬ್ರಾಹ್ಮಣ ಸಂಘಟನೆಯನ್ನು ಗಟ್ಟಿಗೊಳಿಸೋಣ ಎಂದು ಸುದೀರ್ಘವಾಗಿ ಮಾತನಾಡಿದರು. ಅತಿಥಿಗಳಾಗಿ ಆಗಮಿಸಿದ ಶ್ರೀ ಪ್ರಭಾಕರ್ ಮಂಗಳೂರು, ಶ್ರೀ ವಸಂತ ಮುಕ್ತಾಲಿ, ಶ್ರೀ ರಮೇಶ್ ಕಡಕೊಳ. ಶ್ರೀ ಹನುಮಂತ ನಾಯಕ್ ಬಾದಾಮಿ. ಶ್ರೀ ಎಂ. ಆರ್. ಪಾಟೀಲ್. ಶ್ರೀ ಗಿರೀಶ್ ದೇಸಾಯಿ. ಶ್ರೀ ದತ್ತಣ್ಣ ನಾಡಿಗೆ, ಶ್ರೀ ಜಿ. ಎಲ್. ನಾಡಿಗೇರ್, ಶ್ರೀ ಉಮೇಶ್ ವಿಶ್ವರೂಪ, ಪ್ರಮುಖರಾದ ಪ್ರಭಾವತಿ ಕುಲಕರ್ಣಿ, ಉಷಾ ಬಾಯಿ ಬಿದರಹಳ್ಳಿ, ಲಕ್ಷ್ಮಿ ಕಟ್ಟಿ, ಶ್ರೀ ವಿನಾಯಕ ನಾಡಿಗೆ, ಶ್ರೀ ವಿಶ್ವನಾಥ, ಅಧ್ಯಾಪಕ ರಾಘಣ್ಣ, ಶಿರೋಳ ಗುರುರಾಜ ಕಟ್ಟಿ, ಸುಶೀಲ್ ನಾಡಿಗೇರ್ ಪ್ರಮುಖರು ಕಾರ್ಯಕರ್ತರು ಮಾತೆಯರು ಸೇರಿ ಸಭೆಯನ್ನು ಯಶಸ್ವಿಗೊಳಿಸಿದರು.

ಇತ್ತೀಚೆಗೆ ಹಾವೇರಿ ಜಿಲ್ಲೆಯಲ್ಲಿ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸಭೆಯನ್ನು ಹಾನಗಲ್ ಪಟ್ಟಣದಲ್ಲಿ ಶ್ರೀ ವೆಂಕಟೇಶ್ವರ ಗುಡಿಯಲ್ಲಿ ಕರೆಯಲಾಗಿತ್ತು ಸಭೆಯ ಅಧ್ಯಕ್ಷತೆಯನ್ನು ಶ್ರೀ ತಮ್ಮಣ್ಣ ವೇದಂ ಭಟ್ ವಹಿಸಿದ್ದರು. ಜಿಲ್ಲಾ ವಿಪ್ರ ಮುಖಂಡರು ಹಾಗೂ ರಾಜ್ಯ ಪದಾಧಿಕಾರಿಗಳ ಜೊತೆಯಲ್ಲಿ ಶ್ರೀಮತಿ ಪಾರ್ವತಿ ಕಾಶೀಕರ್ ಶ್ರೀಮತಿ ಎಲ್ ಎಂ. ದೇಸಾಯಿ. ಶ್ರೀಯುತರುಗಳಾದ ಘನಶ್ಯಾಮ ದೇಶಪಾಂಡೆ, ಅಪ್ಪಣ್ಣ ಮೊದಲಾದವರು ಉಪಸ್ಥಿತರಿದ್ದರು.




ದಿನಾಂಕ 6-6-2022 ರಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ರಾಜ್ಯ ಮತ್ತು ರಾಯಚೂರು ಜಿಲ್ಲೆಯ ಪದಾಧಿಕಾರಿಗಳು ಸಿರವಾರ ಮತ್ತು ಮಾನ್ವಿ ತಾಲೂಕುಗಳಲ್ಲಿ ವಿಪ್ರರ ಸಂಘಟನೆ ಮತ್ತು ಸಂಪರ್ಕ ಸಭೆಯನ್ನು ಆಯೋಜಿಸಿ ತಾಲೂಕ್ ಸಮಿತಿಗಳನ್ನು ರಚಿಸಲು ಜಿಲ್ಲಾ ಸಂಘಟನೆಯನ್ನು ಬಲಪಡಿಸಲು ಮತ್ತು ಸದಸ್ಯತ್ವವನ್ನು ಹೆಚ್ಚಿಸಲು ಮಾಹಿತಿಯನ್ನು ನೀಡಲಾಯಿತು.




ದಿನಾಂಕ 29-05-2022 ರಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ರಾಜ್ಯ ಮತ್ತು ರಾಯಚೂರು ಜಿಲ್ಲೆಯ ಪದಾಧಿಕಾರಿಗಳು ಲಿಂಗಸಗೂರು (ಹಟ್ಟಿ,ಗುಡಗುಂಟಿ) ಮತ್ತು ಮಸ್ಕಿ ತಾಲೂಕಗಳಲ್ಲಿ ವಿಪ್ರರ ಸಂಘಟನೆ ಮತ್ತು ಸಂಪರ್ಕ ಸಭೆ ಯನ್ನು ಆಯೋಜಿಸಿ ತಾಲೂಕ್ ಸಮಿತಿಗಳನ್ನು ರಚಿಸಲು ಜಿಲ್ಲಾ ಸಂಘಟನೆಯನ್ನು ಬಲಪಡಿಸಲು ಮತ್ತು ಸದಸ್ಯತ್ವವನ್ನು ಹೆಚ್ಚಿಸಲು ಮಾಹಿತಿ ನೀಡಿದರು.




## ಚಿತ್ಪಾವನ ಸಮಾಜ(ರಿ) ಬೆಂಗಳೂರು ನೂತನ ಪದಾಧಿಕಾರಿಗಳು

ಇತ್ತೀಚೆಗೆ ಚಿತ್ಪಾವನ ಸುವರ್ಣ ಭವನದಲ್ಲಿ ನಡೆದ ನೂತನ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ 2022-25ರ ಅವಧಿಗೆ ಕೆಳಕಂಡವರು ಪದಾಧಿಕಾರಿಗಳಾಗಿ ಆಯ್ಕೆಯಾದವರಿಗೆ ಹಾರ್ದಿಕ ಅಭಿನಂದನೆಗಳು.

ಗೌರವಾಧ್ಯಕ್ಷರು : ಶ್ರೀ ವಿಷ್ಣು ಭಟ್ ಡೋಂಗ್ರೆ, ಅಧ್ಯಕ್ಷರು :ಶ್ರೀ ಎಂ ಗಣಪತಿ ಜೋಶಿ, ಉಪಾಧ್ಯಕ್ಷರು ಶ್ರೀ ಜಿ ನಾರಾಯಣ ಹೆಬ್ಬಾರ್, ಶ್ರೀಮತಿ ರಜನಿ ಮುಕುಂದ ಜೋಶಿ, ಕಾರ್ಯದರ್ಶಿ ಶ್ರೀ ಗಜಾನನ ಎಂ ಗೋಖಲೆ, ಜಂಟಿ ಕಾರ್ಯದರ್ಶಿಗಳು ಶ್ರೀ ಅರುಣ್ ಮರಾಠೆ, ಶ್ರೀ ಹರೀಶ ವಿ ಡೋಂಗ್ರೆ, ಖಜಾಂಚಿ : ಶ್ರೀ ಸುನಿಲ್ ಬರ್ವೆ, ಸದಸ್ಯರು ಶ್ರೀ ರಮೇಶ ಭಾವೆ, ಶ್ರೀ ಚಿತ್ತರಂಜನ ಮರಾಠೆ, ಶ್ರೀ ಸ್ವರೂಪ್ ಜೋಶಿ, ಸುವರ್ಣ ಮಹೋತ್ಸವ ಸಮಿತಿ ಮುಖ್ಯ ಸಂಚಾಲಕರು ಶ್ರೀ ಮನೋಹರ ಎಂ. ಗೋಖಲೆ, ಪರಶುರಾಮ ವಿದ್ಯಾನಿಧಿ ಟ್ರಸ್ಟ್ ಮ್ಯಾನೇಜಿಂಗ್ ಟ್ರಸ್ಟಿ, ಶ್ರೀಮತಿ ನಂದಿನಿ ದಿನೇಶ ಜೋಶಿ, ಟ್ರಸ್ಟಿ ಶ್ರೀ ದಾಮೋದರ ಪಾಳಂದ್ಯೆ, ಭಾರ್ಗವ ವಾಣಿ ಮುಖ್ಯ ಸಂಪಾದಕರು ಶ್ರೀ ಗೋಪಿನಾಥ ರಾವ್ ಬಾಪಟ್, ಸಂಪಾದಕರು ಶ್ರೀಮತಿ ಸ್ನೇಹಲತಾ ಪ್ರಸಾದ್ ಮೋಡಕ್ ಪಾಲ್ಗೊಂಡಿದ್ದರು.

# "ಭಾರತೀ ತೀರ್ಥ" ಪುರಸ್ಕಾರ



**ಶ್ರೀ ಹೆಚ್.ಎಸ್. ಶಿವಶಂಕರ್**

ಶಿವಮೊಗ್ಗದ ಶ್ರೀಯುತ ಹೆಚ್.ಎಸ್. ಶಿವಶಂಕರ್ ಹಾಗೂ ಸಾಗರದ ಶ್ರೀ ಅಶ್ವಿನಿಕುಮಾರ್ ಇವರಿಗೆ ಶೃಂಗೇರಿ ಶ್ರೀ ದಕ್ಷಿಣಾಮ್ನಾಯ ಪೀಠದಿಂದ ಇದೇ ಮೊದಲ ಬಾರಿಗೆ ಕೊಡುತ್ತಿರುವ "ಶ್ರೀ ಜಗದ್ಗುರು ಭಾರತೀ ತೀರ್ಥ" ಪುರಸ್ಕಾರವನ್ನು ನೀಡಿ ಗೌರವಿಸಿರುತ್ತಾರೆ. ಬೆಂಗಳೂರಿನ ಶಂಕರಮಠದ ಭಾರತೀತೀರ್ಥ ಸಭಾಭವನದಲ್ಲಿ ದಿನಾಂಕ 25-06-2022 ರ ಶನಿವಾರ ಸಂಜೆ ನಡೆದ ಈ ಕಾರ್ಯಕ್ರಮ ದಲ್ಲಿ ಶೃಂಗೇರಿ ಜಗದ್ಗುರುಗಳಾದ ಶ್ರೀ ಶ್ರೀ ವಿಧುಶೇಖರ ಭಾರತೀತೀರ್ಥ ಸ್ವಾಮೀಜಿಗಳ ದಿವ್ಯ ಸಾನ್ನಿಧ್ಯದಲ್ಲಿ ಶೃಂಗೇರಿ ಶಂಕರ ಮಠದ ಆಡಳಿತಾಧಿಕಾರಿ ಡಾ. ವಿ.ಆರ್. ಗೌರೀಶಂಕರ್ ಪುರಸ್ಕಾರ ಪ್ರಧಾನ ಮಾಡಿದರು.

ಆದಿತ್ಯ ಕನ್ಸ್ಟ್ರಕ್ಷನ್ ಕಂಪನಿಯ ಪಾಲುದಾರರಾಗಿ ಉದ್ಯಮದಲ್ಲಿ ಎತ್ತರಕ್ಕೆ ಬೆಳೆದ ಶಿವಶಂಕರ್‌ರವರು ರಾಜ್ಯಮಟ್ಟದ ಶಾರದಾ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷರಾಗಿ ಕಳೆದ 15 ವರ್ಷಗಳಿಂದ ಸಂಸ್ಥೆಯನ್ನು ಮುನ್ನಡೆಸುತ್ತಿದ್ದು ರಾಜ್ಯಮಟ್ಟದಲ್ಲಿ ಹೆಸರು ಮಾಡಿದ್ದಾರೆ. ಕೊಡುಗೈ ದಾನಿಗಳೂ ಆಗಿರುವ ಶಿವಶಂಕರ್ ಅವರು ನೂರಾರು ಜನರ ವಿದ್ಯಾಭ್ಯಾಸ, ಮದುವೆಗಳಿಗೆ ನೆರವಾಗಿದ್ದಾರೆ. ಇವರಿಗೆ ಈ ಪ್ರಶಸ್ತಿ ಲಭ್ಯವಾಗಿರುವುದಕ್ಕೆ ನೂರಾರು ಜನ ಅಭಿಮಾನಿಗಳು ಹಾಗೂ ಶ್ರೀಮಠದ ಭಕ್ತರು ಶುಭ ಹಾರೈಸಿರುತ್ತಾರೆ.




**ಶ್ರೀ ಅಶ್ವಿನಿ ಕುಮಾರ್**

ಶ್ರೀ ಅಶ್ವಿನಿ ಕುಮಾರ್, ಸಾಗರ ವೃತ್ತಿ ಸುಮಾರು 35 ವರ್ಷದಿಂದ ಅಡಿಕೆ ವ್ಯಾಪಾರ ಪ್ರವೃತ್ತಿಯಲ್ಲಿ ಅಧ್ಯಕ್ಷರು ಹರದೂರು ದುರ್ಗಾಂಬ ದೇವಸ್ಥಾನ ಸಾಗರ. ವಿದ್ಯಾ ಪೋಷಕ ಶಿವಮೊಗ್ಗ ಜಿಲ್ಲಾ ಸಂಚಾಲಕರು. ಅಂತರಾಷ್ಟ್ರೀಯ ಲಯನ್ ಸಂಸ್ಥೆಯಲ್ಲಿ ವಿವಿಧ ಹುದ್ದೆಯಲ್ಲಿ ಸೇವೆ ಕರ್ನಾಟಕ ಅರೆಕಾ ಚೇಂಬರ್ ಆಫ್ ಕಾಮರ್ಸ್‌ನ ಉಪಾಧ್ಯಕ್ಷರು ಮಲೆನಾಡು ಅಭಿವೃದ್ಧಿ ಪ್ರತಿಷ್ಠಾನದ ನಿರ್ದೇಶಕರು ಹವ್ಯಕ ಅಭಿವೃದ್ಧಿ ಪ್ರತಿಷ್ಠಾನದ ನಿರ್ದೇಶಕರು ರೆಡ್ ಕ್ರಾಸ್ ಸಂಸ್ಥೆಯ ನಿರ್ದೇಶಕರು ಸಾಗರ ಶೃಂಗೇರಿ ಶಂಕರ ಮಠದಲ್ಲಿ ಸೇವೆ ಸಲ್ಲಿಸಿದ ಹಿನ್ನೆಲೆಯಲ್ಲಿ ಜಗದ್ಗುರು ಶ್ರೀ ಶ್ರೀ ಭಾರತಿ ತೀರ್ಥ ಪುರಸ್ಕಾರ ಸಂದಿದೆ

ಶ್ರೀ ಭಾರತಿ ತೀರ್ಥ ಪುರಸ್ಕಾರ ಪಡೆದ ಇವರಿಗೆ ಮಹಾಸಭಾದ ಹಾರ್ದಿಕ ಅಭಿನಂದನೆಗಳು.

---

### ವಿಪ್ರ ಅಂಗವಿಕಲರು ಹಾಗೂ ವೃದ್ಧರಿಗೆ

## ಮಾಸಾಶನ ಯೋಜನೆಗೆ ಪ್ರಾಯೋಜಕತ್ವಕ್ಕಾಗಿ ಮನವಿ

**ಸಂಕಷ್ಟದಲ್ಲಿರುವ ಅರ್ಹ ವಿಪ್ರ ಅಂಗವಿಕಲರು ಹಾಗೂ ವೃದ್ಧರಿಗೆ ಮುಂದಿನ ದಿನಗಳಲ್ಲಿ ಮಾಸಿಕ ಸಹಾಯ ಧನವಾಗಿ 'ಮಾಸಾಶನ' ನೀಡಲು ಯೋಜಿಸಲಾಗಿದೆ. ಸಮಾಜದ ಉಳ್ಳವರು, ಮತ್ತು ಸಬಲರು ಈ ಯೋಜನೆಗೆ ಪ್ರಾಯೋಜಕರಾಗಿ ಮುಂದೆ ಬಂದು ಅಪೂರ್ವವಾದ ಯೋಜನೆಗೆ ಕಾರ್ಯ ರೂಪಕ್ಕೆ ಬರುವಂತೆ ನೆರವಾಗಬೇಕೆಂದು ಮಹಾಸಭೆಯ ಅಧ್ಯಕ್ಷರು ವಿನಂತಿಸಿಕೊಂಡಿದ್ದಾರೆ. ಒಂದು ವರ್ಷಕ್ಕೆ 6000ರೂಗಳನ್ನು ನೀಡಿ ಪ್ರಾಯೋಜಕರಾದಲ್ಲಿ ಅವರದೆ ಹೆಸರಿನಲ್ಲಿ ಈ ಹಣದಿಂದ ಒಬ್ಬರಿಗೆ 12 ತಿಂಗಳು 500ರೂಗಳಂತೆ ತಿಂಗಳಿಗೆ ಸಹಾಯಧನ ರೂಪದಲ್ಲಿ ಮಾಸಾಶನ ನೀಡಲು ಯೋಜಿಸಿದೆ. ಆದ್ದರಿಂದ ಕನಿಷ್ಠ 6,000 ರೂಗಳನ್ನು ನೀಡಿ ಪ್ರಾಯೋಜಕರಾಗಲು ಕೋರಿದೆ. ಪ್ರಾಯೋಜಕರ ಹೆಸರನ್ನು ಮಹಾಸಭೆಯ ಜಾಲತಾಣ ಹಾಗೂ ವಿಪ್ರನುಡಿಯಲ್ಲಿ ಪ್ರಕಟಿಸಲಾಗುವುದು.**

**-ಪ್ರಧಾನ ಕಾರ್ಯದರ್ಶಿಗಳು**

## ಮಹಿಳಾ ವಿಭಾಗದ ರಾಜ್ಯ ಸಂಚಾಲಕಿಯಾಗಿ ಶ್ರೀಮತಿ ಶುಭಮಂಗಳ ಸುನೀಲ್ ನೇಮಕ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮಹಿಳಾ ವಿಭಾಗದ ರಾಜ್ಯ ಸಂಚಾಲಕಿಯಾಗಿ ಡಾ। ಶುಭಮಂಗಳ ಸುನೀಲ್‌ರವರನ್ನು ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರು ನೇಮಕ ಮಾಡಿ ನೇಮಕಾತಿ ಪತ್ರ ನೀಡಿದರು.

ಡಾ॥ ಶುಭಮಂಗಳ ಸುನೀಲ್ ಅವರು ಹಲವು ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಸೇವೆ ಸಲ್ಲಿಸುತ್ತಿದ್ದು ಸೈಬರ್ ಸೆಕ್ಯುರಿಟಿಯಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಸಂಪಾದಿಸಿದ್ದಾರೆ.

## ಕೇಂದ್ರ ನಿಧಿ, ಮಾಸಾಶನ ಸಮಿತಿ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ಆಯೋಜಿಸುತ್ತಿರುವ ಅಶಕ್ತ ಪುರುಷರು, ಮಹಿಳೆಯರಿಗೆ ಮತ್ತು ಅಂಗವಿಕಲರಿಗೆ ಮಾಸಾಶನವನ್ನು ನೀಡಲು ಈ ಕೆಳಕಂಡ ಕೇಂದ್ರ ನಿಧಿ ಹಾಗೂ ಮಾಸಾಶನ ಸಮಿತಿಯನ್ನು ಅಧ್ಯಕ್ಷರು ರಚಿಸಿದ್ದಾರೆ.

1. ಶ್ರೀ ಟಿ.ಎಲ್.ಎಸ್. ಕುಮಾರ್ ಸಂಚಾಲಕರು
   ಸಹ ಕಾರ್ಯದರ್ಶಿ, ಎಕೆಬಿಎಂಎಸ್ ಬೆಂಗಳೂರು.

**ಸದಸ್ಯರು**

2. ಶ್ರೀ ಎಂ.ಆರ್. ಶಿವಶಂಕರ್, ಬೆಂಗಳೂರು.
3. ಶ್ರೀ ಅನಂತರಾಮ್. ಸಿ.ಆರ್. ಬೆಂಗಳೂರು
4. ಶ್ರೀ ಸತ್ಯನಾರಾಯಣ ಆರ್. (ಸತೀಶ್), ಬೆಂಗಳೂರು
5. ಶ್ರೀ ಸುನೀಲ್ ಲಕ್ಯ ಎಲ್.ವಿ., ಬೆಂಗಳೂರು
6. ಶ್ರೀ ನಿಖಿಲ್ ಭಾರಧ್ವಾಜ್ ಹೆಚ್.ಸಿ., ಬೆಂಗಳೂರು.
7. ಶ್ರೀಮತಿ ಶ್ವೇತಾ ಎಸ್., ಬೆಂಗಳೂರು.

## ನೂತನ ಸಹ ಕಾರ್ಯದರ್ಶಿಗಳ ನೇಮಕ

ವಿಪ್ರ ಸಮುದಾಯದ ಸಂಘಟನೆಗೆ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಮಹಾಸಭೆ ಅಧ್ಯಕ್ಷರು ಶ್ರೀ ವಿಜಯ ಗುರುನಾಥ ನಾಡಜೋಶಿ ಹುಬ್ಬಳ್ಳಿ, ಹಾಗೂ ಶ್ರೀ ಆರ್. ರವಿಕುಮಾರ್ ಇವರುಗಳನ್ನು ಸಹಕಾರ್ಯದರ್ಶಿಗಳಾಗಿ ನೇಮಕ ಮಾಡಿರುತ್ತಾರೆ.



ಮಹಾಸಭೆಯ ಸಹಕಾರ್ಯದರ್ಶಿ ಹಾಗೂ ಹಾವೇರಿ ಹಾಗೂ ಗದಗ ಜಿಲ್ಲಾ ಉಸ್ತುವಾರಿ

ಶ್ರೀ ವಿಜಯೇಂದ್ರ ಗುರುನಾಥ ನಾಡಜೋಶಿ



ಶ್ರೀ ಆರ್. ರವಿಕುಮಾರ್, ಬೆಂಗಳೂರು.
ಸಹ ಕಾರ್ಯದರ್ಶಿ

## ನೂತನ ಪದಾಧಿಕಾರಿಗಳು

ಕುಮಾರಸ್ವಾಮಿ ಲೇಔಟ್ ಬ್ರಹ್ಮಣ ಸೇವಾ ಸಂಘ (ರಿ.) ಕ್ಕೆ 2022–23ನೇ ಸಾಲಿಗೆ ನೂತನ ಪದಾಧಿಕಾರಿಗಳಾಗಿ ಈ ಕೆಳಕಂಡವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಆಯ್ಕೆಯಾದ ನೂತನ ಪದಾಧಿಕಾರಿಗಳಿಗೆ ಮಹಾಸಭೆಯ ಅಭಿನಂದನೆಗಳು.

ಶ್ರೀಯುತರಾದ ವಿ. ಸುರೇಶ್ ಹಂದೆ ಅಧ್ಯಕ್ಷರು, ಎಸ್. ಲಕ್ಷ್ಮೀನಾರಾಯಣ್ ಕಾರ್ಯದರ್ಶಿ, ಗೋವಿಂದ ಅಡಿಗ–ಉಪಾಧ್ಯಕ್ಷರು, ಎಲ್ ಶ್ರೀನಿವಾಸ್–ಕೋಶಾಧಿಕಾರಿ, ಎಸ್.ಎನ್. ರವಿಶಂಕರ್–ಜಂಟಿ ಕಾರ್ಯದರ್ಶಿ, ಸಮಿತಿಯ ಸದಸ್ಯರಾಗಿ ಎಸ್.ಎನ್.ಶರ್ಮಾ, ಪಿ.ಎಸ್.ಮಂಜುನಾಥ್, ಗಣಪತಿ ಐತಾಳ್, ವಿಜಯಕುಮಾರ್, ಜಯಕರ ಉಪಧ್ಯಾಯ, ಶ್ರೀಮತಿ ಜಯಲಕ್ಷ್ಮೀ

## ಮಾಸಾಶನ ಅರ್ಜಿ ಆಹ್ವಾನ

ಆರ್ಥಿಕವಾಗಿ ಸಂಕಷ್ಟದಲ್ಲಿರುವ ಮಹಾಸಭಾ ಸದಸ್ಯರಾಗಿರುವ 60ವರ್ಷ ಮೇಲ್ಪಟ್ಟ ಅಶಕ್ತ ವೃದ್ಧ ವಿಪ್ರರು, ಅಂಗವಿಕಲರುಗಳು, ಅಶಕ್ತ ಮಹಿಳೆಯರು ಒಂದು ವರ್ಷದ ಅವಧಿಗೆ ಮಾಸಾಶನಕ್ಕಾಗಿ ಮಹಾಸಭೆಗೆ ತಮ್ಮ ಪ್ರದೇಶದ ಮಹಾಸಭೆಯ ಕಾರ್ಯಕಾರಿಣಿ ಸಮಿತಿ ಸದಸ್ಯರು ಅಥವಾ ಪದಾಧಿಕಾರಿಗಳು/ಅಂಗಸಂಸ್ಥೆಗಳ ಅಧ್ಯಕ್ಷರು/ಕಾರ್ಯದರ್ಶಿಗಳ ಶಿಫಾರಸ್ಸಿನೊಂದಿಗೆ ಅರ್ಜಿಯನ್ನು ಮಹಾಸಭೆಗೆ ಸಲ್ಲಿಸಲು ಕೋರಿದೆ. ಹೆಚ್ಚಿನ ವಿವರಗಳಿಗಾಗಿ ವ್ಯವಸ್ಥಾಪಕರನ್ನು ಸಂಪರ್ಕಿಸಿ.

–ಪ್ರಧಾನ ಕಾರ್ಯದರ್ಶಿ.

# ವ್ಯಾಸ ಪೂರ್ಣಿಮಾ

ಪ್ರೊ: ಎಂ.ಕೆ. ಶ್ರೀಧರ್



ಆಷಾಢ ಮಾಸ ಶುಕ್ಲಪಕ್ಷ ಹುಣ್ಣಿಮೆಯಂದು ವ್ಯಾಸ ಪೂರ್ಣಿಮಾ, ಗುರು ಪೂರ್ಣಿಮಾ. ಅಂದು ಭಾರತೀಯರೆಲ್ಲರೂ ವೇದ ಪಿತಾಮಹ ವ್ಯಾಸ ಮಹರ್ಷಿಗಳಿಗೆ ಗೌರವ ಸಲ್ಲಿಸಿ ತಮ್ಮ ಗುರುಗಳನ್ನು ಪೂಜಿಸುತ್ತಾರೆ. ವ್ಯಾಸರು ದ್ವಾಪರಯುಗದಲ್ಲಿ ಇದ್ದು, ಪಾಂಡವರ ಮೂಲ ವಂಶಸ್ಥರಾಗಿ, ಇಡೀ ಕೌರವ–ಪಾಂಡವರ ಹುಟ್ಟು, ಬೆಳವಣಿಗೆ, ಅವಸಾನಕ್ಕೆ ಸಾಕ್ಷಿಯಾಗಿ ಮಹಾಭಾರತ ಎಂಬ ಐತಿಹಾಸಿಕ ಗ್ರಂಥವನ್ನು ರಚಿಸಿದವರು. ಇವರು ಸತ್ಯವತಿ ಎಂಬ ಬೆಸ್ತ ಸ್ತ್ರೀ, ಪರಾಶರ ಮುನಿಗಳ ಮಗ. ಸತ್ಯವತಿ ದಾಶರಾಜ ಎಂಬ ಅಂಬಿಗನ ಸಾಕುಮಗಳು. ಅದ್ರಿಕಾ ಎಂಬ ಅಪ್ಸರೆ ಉಪರಿಚರವಸುವಿನ ಮಗಳು. ಒಂದು ಶಾಪದಿಂದಾಗಿ ಮೀನಾದಳು. ದಾಶರಾಜನು ಆ ಮೀನನ್ನು ಹಿಡಿದು ಕತ್ತರಿಸದಾಗ ಅ ಹೆಣ್ಣುಮಗು ಸಿಕ್ಕಿತು, ಅದನ್ನು ಸಾಕಿದನೆಂದು ಪುರಾಣದ ಕಥೆ. ಈ ವ್ಯಾಸರು ಹುಟ್ಟಿದೊಡನೆ ತಮ್ಮ ತಂದೆ ಪರಾಶರರ ಅನುಗ್ರಹದಿಂದ ದೊಡ್ಡವರಾಗಿ ತಪಸ್ಸು ಮಾಡಲು ಹೋದರು. ಇವರು ವ್ಯಾಸರ ಮರಿಮಗ. ಶಕ್ತಿ ಮಹರ್ಷಿಯ ಮೊಮ್ಮಗ. ಪರಾಶರರ ಮಗ. ಶುಕಮಹರ್ಷಿಯ ತಂದೆ. ಯಮುನಾ ನದಿ ದಂಡೆಯಲ್ಲಿ ಹುಟ್ಟಿದ್ದರಿಂದ, ಕಪ್ಪು ವರ್ಣ ಹೊಂದಿದ್ದರಿಂದ ಕೃಷ್ಣ ದ್ವೈಪಾಯನ ಎಂಬ ಹೆಸರು.

**ವ್ಯಾಸಂ ವಸಿಷ್ಠ ನಪ್ತಾರಂ ಶಕ್ತೇಃ ಪೌತ್ರಂ ಅಕಲ್ಮಷಮ್ ।**

**ಪರಾಶರಾತ್ಮಜಂ ವಂದೇ ಶುಕತಾತಂ ತಪೋನಿಧಿಮ್ ॥**

ಬದರಿ ಕ್ಷೇತ್ರದಲ್ಲಿ ಜನಿಸಿದ್ದರಿಂದ ಬಾದರಾಯಣ ಎಂಬ ಹೆಸರು. ಅನಾದಿಯೂ, ಅನಂತವೂ, ಪುರುಷ ಸೃಷ್ಟಿಯಲ್ಲದ ಸಮಗ್ರ ವೇದವನ್ನು ನಾಲ್ಕು ವಿಭಾಗಗಳನ್ನಾಗಿ ವಿಂಗಡಿಸಿದ್ದರಿಂದ ವೇದವ್ಯಾಸರೆಂಬ ಹೆಸರು (**ವಿವ್ಯಾಸ ವೇದಾನ್ ವ್ಯಾಸಃ ಇತಿ ಸ್ಮೃತಃ** ।). ಅವರ ಮಹಿಮೆಯನ್ನು ವಿವರಿಸುವ ಶ್ಲೋಕವು ಹೀಗಿದೆಃ **ಅಚತುರ್ವದನೋ ಬ್ರಹ್ಮಾ ದ್ವಿಬಾಹುರಪರೋ ಹರಿಃ । ಅಫಾಲಲೋಚನಃ ಶಂಭುಃ ಭಗವಾನ್ ಬಾದರಾಯಣಃ ॥** 'ಭಗವಾನ್ ಬಾದರಾಯಣರು ನಾಲ್ಕು ಮುಖಗಳಿಲ್ಲದ ಇನ್ನೊಬ್ಬ ಬ್ರಹ್ಮ. ಎರಡು ಕೈಗಳುಳ್ಳ ವಿಷ್ಣು. ಹಣೆಯಲ್ಲಿ ಕಣ್ಣುಗಳಿಲ್ಲದ ಮತ್ತೊಬ್ಬ ಶಿವ ! ವ್ಯಾಸರು ವೇದಗಳು, ಉಪನಿಷತ್ತುಗಳು ಹಾಗೂ ಭಗವದ್ಗೀತೆಯ ಸಾರವನ್ನು 555 ಸೂತ್ರಗಳ ರೂಪದಲ್ಲಿ ರಚಿಸಿದರು. ಅವೇ ಬ್ರಹ್ಮಸೂತ್ರಗಳು ಅಥವಾ ಬಾದರಾಯಣ ಸೂತ್ರಗಳು ಅಥವಾ ಶಾರೀರಿಕ ಮೀಮಾಂಸೆ. ಚಂದ್ರವಂಶದ ಹುಟ್ಟು–ವಿಕಾಸ–ವಿನಾಶವನ್ನು ವಿವರಿಸುವ ಒಂದು ಲಕ್ಷ ಶ್ಲೋಕಗಳನ್ನುಳ್ಳ ಮಹಾಭಾರತವೆಂಬ ಐತಿಹಾಸಿಕ ಗ್ರಂಥವನ್ನು ವಿರಚಿಸಿದರು. ವೇದಾರ್ಥಗಳೆಲ್ಲವನ್ನು ಈ ಗ್ರಂಥದಲ್ಲಿ ವಿವರಿಸಿರುವುದರಿಂದ ಇದಕ್ಕೆ 'ಪಂಚಮವೇದ' ವೆಂಬ ಹೆಸರಿದೆ. (**ಭಾರತಃ ಪಂಚಮೋ ವೇದಃ** ।).

ಮಹಾಭಾರತವು ಬಹಳ ದೊಡ್ಡ ಗ್ರಂಥ. ಜಗತ್ತಿನಲ್ಲಿ ಇದಕ್ಕಿಂತ ದೊಡ್ಡದಾದ ಐತಿಹಾಸಿಕ ಗ್ರಂಥ ಇಂದಿಗೂ ಇಲ್ಲ. ಕೆಲವು ಭಾರತೀಯ–ಪಾಶ್ಚಾತ್ಯ ವಿಮರ್ಶಕರ ಪ್ರಕಾರ ಈ ಗ್ರಂಥವು ಮೂರು ಹಂತಗಳಲ್ಲಿ ಬೆಳೆದು ಬಂದಿತು. ಮೊದಲನೇ ಹಂತದಲ್ಲಿ ಮೂಲ 8,800 ಶ್ಲೋಕಗಳಿದ್ದು, 'ಜಯ' ಎಂದು ಹೆಸರು. ಎರಡನೇ ಹಂತದಲ್ಲಿ ಹರಿಶ್ಚಂದ್ರ, ನಳ, ಶಕುಂತಲಾ–ದುಷ್ಯಂತ, ಸಾವಿತ್ರೀ, ರಾಮ ಮುಂತಾದವರ ಉಪಾಖ್ಯಾನಗಳು ಸೇರಿ, 24,000 ಶ್ಲೋಕಗಳ 'ಭಾರತ ಸಂಹಿತಾ' ಆಯಿತು. ಮೂರನೇ ಹಂತದಲ್ಲಿ ಹಲವಾರು ಜ್ಞಾನ ಶಾಖೆಗಳ ಅಂಶಗಳು, ಕಥೆಗಳು ಸೇರಿ ಬಹಳ ದೊಡ್ಡದಾಗಿ, ಭಾರಯುತವಾಗಿ ಒಂದು ಲಕ್ಷ ಶ್ಲೋಕಗಳನ್ನು ಒಳಗೊಂಡು ಮಹಾಭಾರತವಾಯಿತು. ಆದ್ದರಿಂದ ಇದಕ್ಕೆ 'ಶತಸಾಹಸ್ರೀ ಸಂಹಿತಾ' ಎಂಬ ಹೆಸರಿದೆ.

**ಮಹತ್ತ್ವಾದ್ ಭಾರವತ್ತ್ವಾಚ್ಚ ಮಹಾಭಾರತಮುಚ್ಚತೇ ।**

**ನಿರುಕ್ತಮಸ್ಯ ಯೋ ವೇದ ಸರ್ವಪಾಪೈಃ ಪ್ರಮುಚ್ಚತೇ ॥**

ವ್ಯಾಸ ಮಹರ್ಷಿಗಳು ನಾಲ್ಕು ಲಕ್ಷ ಮೂವತ್ತೆರಡು ಸಾವಿರ ಶ್ಲೋಕಗಳನ್ನುಳ್ಳ ಹದಿನೆಂಟು ಪುರಾಣಗಳನ್ನು ರಚಿಸಿದರು. ತಲಾ ಆರು ಪುರಾಣಗಳು ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರಿಗೆ ಸೇರಿವೆ. ಭಾರತೀಯ ಖಗೋಲಶಾಸ್ತ್ರಜ್ಞರ ಪ್ರಕಾರ ಪುರಾಣದ ಒಟ್ಟು ಶ್ಲೋಕಗಳು ಭೂಮಿಯ ಪರಿಧಿಯನ್ನು ಸೂಚಿಸುತ್ತವೆ. ಈ ಪುರಾಣಗಳಲ್ಲಿ ಲೌಕಿಕ, ಆಧ್ಯಾತ್ಮಿಕ, ಭೌಗೋಳಿಕ, ಸಾಮಾಜಿಕ, ನೈತಿಕ ಅಂಶಗಳಿವೆ. ವ್ಯಾಸರೇ ಒಂದಡೆ 'ಕೋಟಿ ಗ್ರಂಥಗಳಿಂದ ಹೇಳಬಹುದಾದ ವಿಷಯಗಳನ್ನು ಅರ್ಧ ಶ್ಲೋಕದಲ್ಲಿ ತಿಳಿಸುತ್ತೇನೆ. ಪುಣ್ಯವೆಂದರೆ ಬೇರೆಯವರಿಗೆ ಸಹಾಯ ಮಾಡುವುದು, ಪಾಪವೆಂದರೆ ಬೇರೆಯವರನ್ನು ಪೀಡಿಸುವುದು' ಎನ್ನುತ್ತಾರೆ.

**ಶ್ಲೋಕಾರ್ಧೇನ ಪ್ರವಕ್ಷ್ಯಾಮಿ ಯದುಕ್ತಂ ಗ್ರಂಥ ಕೋಟಿಭಿಃ ।**

**ಪರೋಪಕಾರ ಪುಣ್ಯಾಯ ಪಾಪಾಯ ಪರಪೀಡನಮ್ ॥**

ಮಹಾಭಾರತವು ಕೇವಲ ಐತಿಹಾಸಿಕ ಗ್ರಂಥವಷ್ಟೇ ಅಲ್ಲ, ಧರ್ಮಶಾಸ್ತ್ರವೂ, ಕಾಮಶಾಸ್ತ್ರವೂ, ಮೋಕ್ಷಶಾಸ್ತ್ರವೂ, ರಾಜನೀತಿ ಶಾಸ್ತ್ರವೂ, ನೀತಿಶಾಸ್ತ್ರವೂ ಹೌದು.

**ಅರ್ಥಶಾಸ್ತ್ರಮದಂ ಪ್ರೋಕ್ತಂ ಧರ್ಮಶಾಸ್ತ್ರಮಿದಂ ಮಹತ್ ।**

**ಕಾಮಶಾಸ್ತ್ರಮಿದಂ ಪ್ರೋಕ್ತಂ ವ್ಯಾಸೇನ ಅಮಿತಬುದ್ಧಿನಾ ॥**

ತಕ್ಕಡಿಯ ಒಂದು ತವದಲ್ಲಿ ಹದಿನೆಂಟು ಪುರಾಣಗಳು, ಧರ್ಮಶಾಸ್ತ್ರಗಳು, ವೇದಾಂಗಸಹಿತ ವೇದಗಳನ್ನು ಇಟ್ಟು ಇನ್ನೊಂದು ತವದಲ್ಲಿ, ಮಹಾಭಾರತವನ್ನಷ್ಟೇ ಇಟ್ಟರೆ ಸಾಕು, ಅವು ಸರಿಸಮವಾಗಿ ತೂಗುವವು ಎಂಬ ಪ್ರತೀತಿ ಇದೆ.

**ಅಷ್ಟಾದಶ ಪುರಾಣಾನಿ ಧರ್ಮಶಾಸ್ತ್ರಾಣಿ ಸರ್ವತಃ ।**

**ವೇದಾಃ ಸಾಂಗಾಃ ತದೇಕತ್ರ ಭಾರತಂ ಚೈಕತಃ ಸ್ಥಿತಮ್ ॥**

ಈ ಮಹಾಭಾರತದ ಮೂಲ ವಿಷಯ ಧರ್ಮ, ಅರ್ಥ, ಕಾಮ, ಮೋಕ್ಷಗಳ ಪ್ರತಿಪಾದನೆ. ಧರ್ಮದ ಮೂಲಕವೇ ಮಿಕ್ಕ ಮೂರು ಪುರುಷಾರ್ಥಗಳನ್ನು ಮಾನವರು ಪಡೆಯಬೇಕು ಎಂದು ವ್ಯಾಸಹರ್ಷಿಗಳು ನೂರಾರು ಬಾರಿ ಘೋಷಿಸಿ,ಈ ಕೃತಿಯಲ್ಲಿ ಏನುಂಟೂ ಅದು ಬೇರೆಡೆ ಇದೆ. ಇಲ್ಲಿ ಏನಿಲ್ಲವೋ ಅದು ಇನ್ನೆಲ್ಲೂ ಇಲ್ಲ ಎಂದು ತಿಳಿಸುತ್ತಾರೆ. ಧರ್ಮವೆಂದರೆ ಋಜು ನಡವಳಿಕೆ. ಧರಿಸಲು, ಪರಿಪಾಲಿಸಲು ಯೋಗ್ಯವಾದದ್ದು (**ಧಾರಣಾತ್ ಧರ್ಮ ಇತ್ಯಾಹುಃ**).

**ಧರ್ಮೇಚ ಅರ್ಥೇಚ ಕಾಮೇ ಚ ಮೋಕ್ಷೇ ಚ ಭರತರ್ಷಭ ।**

**ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ತತ್ ಕ್ವಚಿತ್ ॥**

ಸಂಸ್ಕೃತ ಕವಿಗಳ ಪ್ರಕಾರ ಜ್ಞಾನವೆಂಬುದೇ ದೀಪ. ಮಹಾಭಾರತವೇ ತೈಲ. ಈ ತೈಲದ ಮೂಲಕ ದೀಪವು ಪ್ರಜ್ವಲಿಸುವಂತೆ ಮಾಡಿದವರು, ವಿಶಾಲಬುದ್ಧಿಗಳಾದ ವ್ಯಾಸಮಹರ್ಷಿಗಳು.

**ನಮೋಸ್ತುತೇ ವ್ಯಾಸವಿಶಾಲಬುದ್ಧೇ ಫುಲ್ಲಾರವಿಂದಾಯತ ಪತ್ರನೇತ್ರ ।**

**ಯೇನ ತ್ವಯಾ ಭಾರತ ತೈಲಪೂರ್ಣಃ ಪ್ರಜ್ವಾಲಿತೋ ಜ್ಞಾನಮಯ ಪ್ರದೀಪಃ ॥**

ಗಹನವಾದ ಬ್ರಹ್ಮಸೂತ್ರಗಳು, ಶಾಸ್ತ್ರಕಾವ್ಯವಾದ ಮಹಾಭಾರತ, ಲೌಕಿಕವಾದ ಪುರಾಣಗಳನ್ನು, ಪಂತಜಲಿ ಮಹರ್ಷಗಳ ಯೋಗ ಸೂತ್ರಗಳಿಗೆ ಭಾಷ್ಯವನ್ನು ಒಬ್ಬ ವ್ಯಕ್ತಿ ರಚಿಸಿದರೆಂದು ಊಹಿಸುಕೊಳ್ಳುವುದು ಅಸಾಧ್ಯ. ಜಗತ್ತಿಗೆ ಮಹದುಪಕಾರ ಮಾಡಿರುವ, ಚಿರಂಜೀವಿ ವ್ಯಾಸಮಹರ್ಷಿಗಳಿಗೆ ನಮ್ಮೆಲ್ಲರ ಸಾಷ್ಟಾಂಗ ನಮನ.


**ಪೂರ್ಣಪ್ರಜ್ಞ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ**

**ಶುಭಾಶಯಗಳೊಂದಿಗೆ**



ನಂ. 552, 'ಪೂರ್ಣಪ್ರಜ್ಞ ಸುವರ್ಣಭವನ',
ಉತ್ತರಹಳ್ಳಿ–ಕೆಂಗೇರಿ ಮುಖ್ಯರಸ್ತೆ
ಪೂರ್ಣಪ್ರಜ್ಞ ನಗರ, ಬೆಂಗಳೂರು–560 061.
ದೂ. ಸಂ. 080–26731335, 26731336

**ಬಡಾವಣೆ ವಿವರಗಳು :**

1. **ಪೂರ್ಣಪ್ರಜ್ಞ ಬಡಾವಣೆ, ಕತ್ರಿಗುಪ್ಪೆ, ಬನಶಂಕರಿ 3ನೇ ಹಂತ, ಬೆಂಗಳೂರು-560 085**
2. **ಪೂರ್ಣ ಪ್ರಜ್ಞನಗರ, ಉತ್ತರಹಳ್ಳಿ, ಸುಬ್ರಮಣ್ಯಪುರ ಪೋಸ್ಟ್, ಬೆಂಗಳೂರು-560 061**

**ಸಂಘದ ಆಡಳಿತ ಮಂಡಳಿ ಸದಸ್ಯರು**

| | | | | | |
|---|---|---|---|---|---|
| ಹಯಗ್ರೀವಾಚಾರ್ | ಅಧ್ಯಕ್ಷರು | ಕೃಷ್ಣಮೂರ್ತಿ ಕೆ.ಎನ್. | ನಿರ್ದೇಶಕರು | ವೆಂಕಟೇಶ್ ಎಸ್.ವಿ. | ನಿರ್ದೇಶಕರು |
| ಅನಂತಸ್ವಾಮಿ ಎಸ್. | ಉಪಾಧ್ಯಕ್ಷರು | ವಿಶ್ವನಾಥ್ ಜಿ. | ನಿರ್ದೇಶಕರು | ರಾಮಯ್ಯ ಎಸ್.ಟಿ. | ನಿರ್ದೇಶಕರು |
| ಸುಧೀಂದ್ರ ಎಸ್.ಕೆ. | ನಿರ್ದೇಶಕರು | ಈಶ್ವರಿ ಜಿ.ಸಿ. | ನಿರ್ದೇಶಕರು | ಸಂಜೀವ್ ಕುಮಾರ್ ಎಸ್ | ನಿರ್ದೇಶಕರು |
| ಮೊಕಾಶಿ ಡಿ.ಎಚ್. | ನಿರ್ದೇಶಕರು | ರಾಧಮಣಿ ವಿ.ಕೆ. | ನಿರ್ದೇಶಕರು | | |

# ಪ್ರಥಮೈಕಾದಶೀ

**ಡಾ। ಮುದ್ರಾಡಿ ವಾಸುದೇವ ಭಟ್**

ವೈಶಾಖ ಶುದ್ಧ ತದಿಗೆಯನ್ನು ಅಕ್ಷಯ ತದಿಗೆ ಎನ್ನುವಂತೆ ಮಾಘ ಬಹುಳ ಚತುರ್ದಶಿಯನ್ನು ಶಿವರಾತ್ರಿ ಎನ್ನುವಂತೆ ಆಷಾಢ ಶುದ್ಧ ಏಕಾದಶಿಯನ್ನು ಪ್ರಥಮೈಕಾದಶೀ ಎನ್ನುತ್ತಾರೆ. ಈ ತಿಥಿ ನಿರ್ಣಯವನ್ನು ಜ್ಯೋತಿಶ್ಶಾಸ್ತ್ರದಿಂದ ತಿಳಿಯಬೇಕಾಗುತ್ತದೆ. ವ್ರತಾಚರಣೆಯನ್ನು ಧರ್ಮಶಾಸ್ತ್ರದಿಂದ ತಿಳಿಯಬೇಕಾಗುತ್ತದೆ. ಸ್ಮೃತಿ, ಪುರಾಣಾದಿಗಳು ಧರ್ಮಶಾಸ್ತ್ರ ಗ್ರಂಥಗಳ ಧರ್ಮಶಾಸ್ತ್ರ ಬ್ರಾಹ್ಮಣರಿಗೆ, ಭಾರತೀಯರಿಗೆ ಮಾತ್ರವಲ್ಲ. ಇಡೀ ಮನುಕುಲದ ಉದ್ಧಾರಕ್ಕಿರುವುದು. ಮಹಾಭಾರತ ಮತ್ತು ಗರುಡ ಪುರಾಣಾದಿಗಳಲ್ಲಿ ಈ ಉಪವಾಸ ವ್ರತದ ಕ್ರಮ ಮತ್ತು ಮಹತ್ವಗಳಿರುವುದು.

ನಮ್ಮಲ್ಲಿ ಇಬ್ಬರು ಪುರಾಣ ಪ್ರಸಿದ್ಧ ವ್ಯಕ್ತಿಗಳಿದ್ದಾರೆ. ಒಬ್ಬ ಎಷ್ಟು ಮದುವೆಯಾದರೂ ನಿತ್ಯಬ್ರಹ್ಮಚಾರಿ. ಇನ್ನೊಬ್ಬ ಹೋದಲ್ಲೆಲ್ಲ ಹೊಟ್ಟೆತುಂಬ ಪುಷ್ಕಳದಿಂದ ತಿಂದು ತೇಗಿದರೂ ನಿತ್ಯೋಪವಾಸಿ. ಇವರಿಂದಾಗಿಯೇ ನಮ್ಮ ವ್ರತಾದಿಗಳು ಲೋಕವಿಖ್ಯಾತವಾದುದು. ಅಂಬರೀಷ ಮಹಾರಾಜ ಏಕಾದಶೀ ವ್ರತವನ್ನಾಚರಿಸಿ ದುರ್ವಾಸರನ್ನೇ ಸೋಲಿಸಿದ. ಹಾಗಾಗಿ ಪ್ರಾತಃಸ್ಮರಣೀಯನಾದ.

ಕಾಳಿದಾಸ ಹೇಳುವಂತೆ ಪಾರ್ವತೀದೇವಿಯು ನಿರಾಹಾರಳಾಗಿ ತಪಸ್ಸನ್ನಾಚರಿಸಿ ಪರಮೇಶ್ವರನನ್ನೇ ಪತಿಯನ್ನಾಗಿ ಪಡೆದಳು. ಮಾರ್ಕಂಡೇಯ ಪುರಾಣದಲ್ಲಿರುವಂತೆ ಸುರಥ ಮತ್ತು ವೈಶ್ಯರು **'ನಿರೀಹಾರೌ ಯಥಾತಾನೌ ತನ್ಮನಸ್ಕೌ ಸಮಾಹಿತೌ"** ಎಂಬಂತೆ ನಿರಾಹಾರ ವ್ರತವನ್ನಾಚರಿಸಿ ಮನ್ವಂತರಾಧಿಪತಿಗಳಾದರು.

**'ಪ್ರಯೋಜನಂ ವಿನಾ ತೃಣಮಪಿ ನಚಲತಿ'** ಈ ಪ್ರಪಂಚದಲ್ಲಿ ಪ್ರಯೋಜನವಿಲ್ಲದೆ ಯಾರೂ ಏನನ್ನೂ ಮಾಡಲಾರರು. ಮಾಡಬಾರದ್ದನ್ನೆಲ್ಲಾ ಮಾಡುತ್ತಾ ವರ್ಷಕ್ಕೊಂದು ತಿಂಗಳು ಹಗಲು ಉಪವಾಸ ಮಾಡುವುದು. ಶುಕ್ರವಾರ ಉಪವಾಸ ಮಾಡುವುದು. ಇದೆಲ್ಲಾ ಶಾಸ್ತ್ರೀಯ ಆಚರಣೆಗಳು. ಇದನ್ನು ಬೇಕಾದರೆ ಪಠ್ಯಪುಸ್ತಕದಲ್ಲಿ ಸೇರಿಸಬಹುದು.

ಆದರೆ ಭಾರತೀಯರು ಭಕ್ತಿಯಿಂದ ಆಚರಿಸುವ ಪ್ರಥಮೈಕಾದಶಿ ಉಪವಾಸ ವ್ರತ, ಶಿವರಾತ್ರಿ ವ್ರತ, ನವರಾತ್ರಿ ಕಲ್ಪೋಕ್ತ ವ್ರತಾದಿಗಳೆಲ್ಲ ಮೂಢನಂಬಿಕೆಯ ಪರಮಾವಧಿಯ ವ್ರತಗಳು. ಇದನ್ನು ಮಾತ್ರ ಪಠ್ಯಪುಸ್ತಕದಲ್ಲಿ ಸೇರಿಸಲೇಬಾರದು. ಇದನ್ನು ಸೇರಿಸಿದರೆ ನಮ್ಮ ಭಾವನೆಗೆ ಧಕ್ಕೆಯಾಗುತ್ತದೆ. "ಮರಕ್ಕೆ ಮರವೇ ಮಾರಿ" ಎಂಬಂತೆ ಇದನ್ನು ಇನ್ಯಾರೋ ಹೇಳುವುದಲ್ಲ. ನಮ್ಮ ದೇವರಿಗೆ ಇನಾಂ ಆಗಿ ಕೊಟ್ಟ ಆಸ್ತಿಯನ್ನು ಲಪಟಾಯಿಸಿ ತಿಂದು ತೇಗುವ ಗಂಜೀ ಗಿರಾಕಿಗಳು ಹೇಳುವುದು.

**'ಯಥಾಶಕ್ತಿರ್ ನವಂಚ ಯೇತ್'** ಎಂಬಂತೆ ಸಾಧ್ಯವಿರುವವರು ಪ್ರಥಮ ಏಕಾದಶಿಯ ದಿನ ಪ್ರಾತಃಕಾಲದಲ್ಲಿ ಎದ್ದು ಸ್ನಾನಾದಿ ಸಂಕಲ್ಪಪೂರ್ವಕವಾಗಿ ಉಪವಾಸ ವ್ರತವನ್ನು ಆಚರಿಸಬೇಕು. ದ್ವಾದಶೀ ದಿನ ಪ್ರಾತಃಕಾಲದಲ್ಲಿ ಸ್ನಾನಾದಿಕಾದಿಗಳನ್ನು ದೇವರಪೂಜೆಯನ್ನು ಮುಗಿಸಿ ತೀರ್ಥ ಸೇವಿಸಿ ಪಾರಣೆಯನ್ನು ಮಾಡಬೇಕು. ವರಾಹಮಿಹಿರರು ಹೇಳುವಂತೆ ಸಕಲ ದೋಷಗಳ ಪರಿಹಾರಕ್ಕೂ ಇರುವ ಏಕಮೇವ ವ್ರತವೆಂದರೆ ಅದು ಉಪವಾಸ ವ್ರತ. "ಲಂಘನಂ ಪರಮೌಷಧಂ" ಎಂಬಂತೆ ಇದರಿಂದ ಸಕಲ ವ್ಯಾಧಿಗಳೂ ನಿವೃತ್ತಿಯಾಗಲಿರುವುದು. ಇಷ್ಟವಿಲ್ಲದೆ ಪ್ರಥಮ ಏಕಾದಶಿಯ ಒಂದು ದಿನವಾದರೂ ಉಪವಾಸವಿದ್ದು ಆಚರಿಸಿದರೆ ವರ್ಷವಿಡೀ ಆಚರಿಸಿದ ಫಲ ಬರುವುದೆಂದು ಪೂರ್ವಿಕರು ಹೇಳುತ್ತಿದ್ದರು.

ಆದುದರಿಂದ ಯಾವೊಂದೂ ಖರ್ಚುವೆಚ್ಚಗಳಿಲ್ಲದೆ ಸಕಲ ತಾಪತ್ರಯಗಳೂ ನಿವೃತ್ತಿಯಾಗುವ ಸಕಲೇಷ್ಟಾರ್ಥಗಳೂ ಸಿದ್ಧಿಸುವ ಈ ಏಕಾದಶೀ ವ್ರತವನ್ನು ಆಚರಿಸಿ ಕೃತಕೃತ್ಯರಾಗೋಣ.

## ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಆತ್ಮೀಯ ಬ್ರಾಹ್ಮಣ ಬಂಧು,

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾವು** ಮಕ್ಕಳ ವಿದ್ಯಾಭ್ಯಾಸ ಪ್ರೋತ್ಸಾಹಿಸುವ ನಿಟ್ಟಿನಲ್ಲಿ 2022 ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ (10ನೇ ತರಗತಿ) ಹಾಗೂ ಪಿ.ಯು.ಸಿ.(ಪ್ಲಸ್ 2) ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕಗಳನ್ನು ಪಡೆದ ಪ್ರತಿಭಾವಂತ ಮಕ್ಕಳಿಗೆ **'ಪ್ರತಿಭಾ ಪುರಸ್ಕಾರ'** ಕಾರ್ಯಕ್ರಮವನ್ನು ಮಹಾಸಭಾದ ವತಿಯಿಂದ ಆಯೋಜಿಸಲಾಗಿದ್ದು, ಆಸಕ್ತ ಮಕ್ಕಳು ಎಸ್.ಎಸ್.ಎಲ್.ಸಿ (10ನೇ ತರಗತಿ) ಹಾಗೂ ಪಿ.ಯು.ಸಿ.(ಪ್ಲಸ್ 2)ಪರೀಕ್ಷೆಗಳಲ್ಲಿ ಶೇ.98ಕ್ಕಿಂತ ಹೆಚ್ಚು ಅಂಕ ಗಳಿಸಿ ಉತ್ತೀರ್ಣರಾಗಿದ್ದಲ್ಲಿ, **ದೃಢೀಕೃತ ಅಂಕಪಟ್ಟಿ ಮತ್ತು ನಿಗದಿತ ಪ್ರಪತ್ರದಲ್ಲಿ ವಿವರಗಳನ್ನು ಭರ್ತಿ ಮಾಡಿ ದಿನಾಂಕ 20-08-2022 ರೊಳಗಾಗಿ ಅಧ್ಯಕ್ಷರು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ, ಇವರಿಗೆ ಅರ್ಜಿ ಸಲ್ಲಿಸಲು ಕೋರಿದೆ.**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: +91 99458 40620**

**ಸೂಚನೆ :** ವಿಪ್ರನುಡಿ ಪತ್ರಿಕೆಯಲ್ಲಿ ಮುದ್ರಿತವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರ ವೈಯಕ್ತಿಕ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ – ಮುದ್ರಕರ ಅಭಿಪ್ರಾಯವಲ್ಲ. ವಿಪ್ರನುಡಿಯಲ್ಲಿ ಪ್ರಕಟವಾಗುವ ಯಾವುದೇ ಜಾಹೀರಾತುಗಳಿಗೆ (ರಿಯಲ್ ಎಸ್ಟೇಟ್, ಜ್ಯೋತಿಷ್ಯ, ವಾಣಿಜ್ಯಕ್ಕೆ ಸಂಬಂಧಿಸಿದ್ದು) ಮಹಾಸಭೆ ಜವಾಬ್ದಾರರಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಾಹಿರಾತುದಾರರನ್ನೇ ಸಂಪರ್ಕಿಸಬೇಕು.

–ಸಂಪಾದಕ ಮಂಡಳಿ

# ಹಸಿರ ಸೆರಗಿಂದ ಸಿಂಗರಿಸಿ ಭೂತಾಯಿಯನ್ನು....

ಡಾ॥ ಗೀತಾ ರಮೇಶ್ ಜೆ.

ಜೂನ್ 5ರಂದು ಪರಿಸರ ದಿನವನ್ನಾಗಿ ವಿಶ್ವದಾದ್ಯಂತ ಸುಮಾರು 143 ದೇಶಗಳಲ್ಲಿ ಆಚರಿಸಲಾಯಿತು.

ಈ ಪರಿಸರ ದಿನವನ್ನು ಪ್ರಾರಂಭ ಮಾಡಿದ್ದು ಸಂಯುಕ್ತ ರಾಷ್ಟ್ರಗಳು (ಯು.ಎನ್.) ಉದ್ದೇಶ-ಪರಿಸರದ ಮೇಲೆ ಮನುಷ್ಯನ ಹಸ್ತಕ್ಷೇಪವನ್ನು ಕಡಿಮೆ ಮಾಡುವುದೇ ಆಗಿದೆ.

ಮನುಷ್ಯ ತನ್ನ ಉಪಯೋಗಕ್ಕಾಗಿ ನೀರು, ಕಾಡು ಪ್ರಾಣಿ ಎಲ್ಲವನ್ನೂ ಹಾಳು ಮಾಡುತ್ತಾ ಬಂದಿದ್ದಾನೆ. ನಮ್ಮ ದೇಶ ಭಾರತವು ಇದಕ್ಕೇನು ಹೊರತಾಗಿಲ್ಲ. ಇದರ ಪರಿಣಾಮವಾಗಿ ಪರಿಸರದ ಬಗ್ಗೆ ಅನೇಕ ಘೋಷಣೆಗಳು ಬಂದಿದೆ. ಹಸಿರನ್ನೇ ಉಸಿರಾಡಿ. ಹಸಿರಿನ ಜೊತೆಗೆ ಜೀವಿಸಿ. ಮನೆಗೊಂದು ಮರ. ಕಾಡು ಬೆಳೆಸಿ, ನಾಡು ಉಳಿಸಿ, ಹೀಗೆ ಹತ್ತು ಹಲವಾರು ಘೋಷಣೆಗಳ ಮೂಲಕ ನಮ್ಮ ಯುವ ಜನರನ್ನು, ಪ್ರಜೆಗಳನ್ನು ಎಚ್ಚರಿಸುತ್ತಿದ್ದೇವೆ. ನಮ್ಮ ಸನಾತನ ಸಂಸ್ಕೃತಿಯನ್ನು ಮರೆತದ್ದರಿಂದ ಆಗಿರುವ ಪರಿಣಾಮ ಇದಾಗಿದೆ.

ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಪ್ರಕೃತಿಯನ್ನು ಮಾತೆಯಂತಲೂ, ಮಾಯೆಯೆಂದೂ ಪರಿಗಣಿಸಿದ್ದೇವೆ. ನಮ್ಮ ರಾಷ್ಟ್ರದ ಕಲ್ಪನೆಯು ಅತ್ಯಂತ ವೈಭವವಾಗಿಯೇ ಇದೆ. "ಪೃಥಿವ್ಯಾ ಸಮುದ್ರಪರ್ಯಂತ ಏಕರಾಟ್". ಅಂದರೆ ಸಮುದ್ರದವರೆಗಿನ ಇಡೀ ಭೂಮಿ ಒಂದು ರಾಷ್ಟ್ರ. ಈ ರೀತಿಯ ವಿಶಾಲ ಕಲ್ಪನೆಯಿಂದಾಗಿ ನಾವು ಪ್ರಕೃತಿಯ ಎಲ್ಲದರಲ್ಲಿಯೂ ದೇವದೇವಿಯರ ರೂಪವನ್ನು ಕಾಣುತ್ತೇವೆ. ಪಾಶ್ಚಿಮಾತ್ಯರಿಗೆ ಕೇವಲ (ಹೆಚ್2ಓ ಆಗಿ) ಕಾಣುವ ನೀರು ನಮಗೆ ಗಂಗಾಮಾತೆಯಾಗಿ ಕಂಡಳು. ಎಲ್ಲಾ ನದಿಗಳ ಹೆಸರನ್ನು ನಮ್ಮ ಅಕ್ಕ, ತಂಗಿಯರ ಹೆಸರನ್ನಾಗಿ ಇಟ್ಟು ಗೌರವಿಸಿದರು.

ಸ್ನಾನ ಮಾಡುವಾಗ ಮಂಗಳ ಸಮಾರಂಭಗಳಲ್ಲಿ ಎಲ್ಲಾ ನದಿಗಳನ್ನು ಸ್ಮರಿಸಿಕೊಂಡು ಮಾಡುವ ಸಂಪ್ರದಾಯ ನಮ್ಮದು. ಅದಕ್ಕೇ ಹೇಳುತ್ತೇವೆ. **"ಗಂಗೇಚ ಯಮುನೇ ಚೈವ ಗೋದಾವರೀ ಸರಸ್ವತಿ। ನರ್ಮದೇ ಸಿಂಧು ಕಾವೇರೀ ಜಲೇಸ್ಮಿನ್ ಸನ್ನಧಿಂ ಕುರು॥"** ಇದು ನಮಗೆ ನೀರಿನ ಬಗ್ಗೆ ಶ್ರದ್ಧೆಯನ್ನು ಕಲಿಸಿದರೆ ನಮ್ಮ ದೇಶದಲ್ಲಿ ಕಾಣುವ ಪರ್ವತ ಶ್ರೇಣಿಗಳೂ ನಮಗೆ ದೈವಾಂಶ ಸ್ವರೂಪವೇ ಆಗಿದೆ.

**"ಮಹೇಂದ್ರೋ ಮಲಯಃ ಸಹ್ಯೋ ದೇವತಾತ ಹಿಮಾಲಯಃ ಧ್ಯೇಯೋರೈವತಕೋ ವಿಂಧ್ಯೋ ಗಿರಿಶ್ಚೌರಾವಲಿಸಧಾ॥"** ಅಂದರೆ ಮಹೇಂದ್ರ ಮಲಯ ಸಹಾ ದೇವತೆಗಳ ಆತ್ಮದಂತಿರುವ ಹಿಮಾಲಯ ರೈವತಕ ವಿಂಧ್ಯ ಮತ್ತು ಅರಾವಳಿಗಳು ನಿತ್ಯ ಸ್ಮರಣೀಯವಾಗಿವೆ. ಇವೆಲ್ಲವನ್ನೂ ಒಳಗೊಂಡಂತೆ ಇಡೀ ಭೂಮಿಯನ್ನೇ ಮಾತೆಯ ರೂಪದಲ್ಲಿ ಕಂಡು ಬೆಳಿಗ್ಗೆ ಏಳುತ್ತಲೇ ಆಕೆಯನ್ನು ವಂದಿಸಿ ದಿನವಿಡೀ ಅನಿವಾರ್ಯವಾಗಿ ಆಕೆಯ ಕಾಲುಗಳಿಂದ ಮುಟ್ಟಿದ ಪಾಪಕ್ಕಾಗಿ ಕ್ಷಮೆ ಯಾಚಿಸುತ್ತೇವೆ.

**"ಸಮುದ್ರವಸನೇ ದೇವಿ ಪರ್ವತಸ್ತನಮಂಡಲೇ। ವಿಷ್ಣುಪತ್ನೀ ನಮಸ್ತುಭ್ಯಂ ಪಾದಸ್ಪರ್ಶಂ ಕ್ಷಮಸ್ವ ಮೇ."** ಓ ಮಾತೇ, ಶ್ರೀ ವಿಷ್ಣುವಿನ ಸಹಚಾರಿಣಿ ಸಾಗರವೇ ಸೆರಗಾಗಿ ಪರ್ವತಗಳೇ ಸ್ತನಗಳಾಗಿರುವ ತಾಯೀ ಪಾದಸ್ಪರ್ಶಕ್ಕಾಗಿ ನನ್ನನ್ನು ಕ್ಷಮಿಸು.

ನಮ್ಮ ಭಾರತೀಯ ಸಂಸ್ಕೃತಿಯ ಪ್ರಕಾರ ಮಣ್ಣು, ಗಾಳಿ, ನೀರು ಬೆಟ್ಟ, ಗುಡ್ಡ, ಪಕ್ಷಿ ಪ್ರತಿಯೊಂದು ಪವಿತ್ರ. ಹಾಗಾಗಿಯೇ, ನಮ್ಮ ಎಲ್ಲ ದೇವದೇವಿಯರಿಗೆ ವಾಹನ ರೂಪದಲ್ಲಿ ಪ್ರಾಣಿಗಳನ್ನು ಕೊಟ್ಟಿದ್ದಾರೆ. ಗಣೇಶನಿಗೆ ಇಲಿ, ಈಶ್ವರನಿಗೆ ವೃಷಭ. ಜಗನ್ಮಾತೆಗೆ ಸಿಂಹ, ನಾರಾಯಣನಿಗೆ ಗರುಡ, ಹೀಗೆ ಬರೆಯುತ್ತಾ ಹೋದರೆ ಎಲ್ಲ ಪ್ರಾಣಿಗಳ ಹೆಸರು ಬರುತ್ತವೆ. ಇದೆಲ್ಲಾ ಯಾಕೆ ಮಾಡಿದ್ದಾರೆ ಎಂದು ಯೋಚಿಸಿದಾಗ ತಿಳಿಯುವುದು ಈ ಪ್ರಕೃತಿಯನ್ನು ನಾಶ ಮಾಡಬಾರದು. ಈ ಪ್ರಕೃತಿಯು ಜೀವರಾಶಿಗಳೆಲ್ಲ ಕೂಡ ಅತ್ಯಂತ ಶ್ರೇಷ್ಠ ಮತ್ತು ಉಪಯುಕ್ತ ಎಂದು ತಿಳಿಸುವ ಪರಿ ಇದಾಗಿದೆ.

ದೇವರೊಂದಿಗೆ ಪ್ರಾಣಿಗಳನ್ನು ಬೆಸೆದಾಗ ಅವರಲ್ಲಿ ಭಕ್ತಿಯುಂಟಾಗಿ ಅಥವಾ ಭಯದಿಂದಾಗಿ ಪ್ರಾಣಿ ಪಕ್ಷಿಗಳಿಗೆ ಹಾನಿ ಮಾಡದಿರಲಿ ಎಬುದು ಇದರ ಇಂಗಿತವಾಗಿರಬಹುದು.

ಈ ಎಲ್ಲಾ ಮೌಲ್ಯಗಳನ್ನು ಮರೆಯುತ್ತಾ ಬಂದಿರುವುದರಿಂದ ಭಾರತದಲ್ಲೂ ಪ್ರಕೃತಿಯನ್ನು ಕಾಪಾಡುವುದರ ಬಗ್ಗೆ ಸಲಹೆಗಳು ಬೇಕಾಗಿದೆ. ಪಂಚಮಹಾಭೂತಗಳಾದ ಗಾಳಿ, ನೀರು, ಬೆಂಕಿ, ಆಕಾಶ, ಭೂಮಿ (ಮಣ್ಣು) ಇವುಗಳಿಂದಾಗಿಯೇ ಎಲ್ಲ ಪ್ರಾಣಿಗಳ ಮನುಷ್ಯನೂ ಸೇರಿ ಜನನವಾಗಿದೆ. ಆದ್ದರಿಂದ ನೀರು, ಗಾಳಿ, ಕಾಡುಗಳನ್ನು ಉಳಿಸಬೇಕಾಗಿರುವುದು ಮನುಷ್ಯನ ಆದ್ಯ ಕರ್ತವ್ಯವಾಗಿದೆ. ಪ್ರಾಣಿ ಸಂಕುಲಗಳು ಬೇರೆ ಜೀವಗಳಿಗೆ ಹಾನಿ ಮಾಡಿ ಬದುಕುವುದಿಲ್ಲ. ಅವು ಸಾಮರಸ್ಯದಿಂದ ಬದುಕುತ್ತವೆ. ಆದರೆ ಮನುಷ್ಯ ತನ್ನ ಉಪಯೋಗಕ್ಕಾಗಿ ಅರಣ್ಯ ನಾಶ, ಗಣಿಕಾರಿಕೆ ಇವುಗಳನ್ನು ಮಾಡಿ ಪರಿಸರವನ್ನು ಹಾಳು ಮಾಡಿದ್ದಾನೆ. ಕೈಗಾರಿಕಾ ಪ್ರಗತಿಯಿಂದಾಗಿ ನೈಸರ್ಗಿಕವಾಗಿ ಸಿಗುವ ಎಲ್ಲಾ ವಸ್ತುಗಳನ್ನು

ದುರುಪಯೋಗಪಡಿಸಿಕೊಂಡಿದ್ದಾನೆ. ಈ ಕಾರಣಕ್ಕಾಗಿಯೇ, ಸಂಯುಕ್ತ ರಾಷ್ಟ್ರಗಳು 1974ರಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಜಾರಿಗೆ ತಂದವು. ಪ್ರತಿವರ್ಷವೂ ನಿರ್ದಿಷ್ಟ ಗುರಿ ಆಧಾರದ ಮೇಲೆ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಗುತ್ತಿದೆ.

ಭೂಮಿಯಲ್ಲಿರುವ ಪರಿಸರ ಮನುಷ್ಯನಿಗಿರುವ ಉಡುಗೊರೆ ಎಂದು ಈ ದಿನವನ್ನು ವಿಶ್ವ ಪರಿಸರ ದಿನವ್ನಾಗಿ ಆಚರಿಸಲಾಗುತ್ತದೆ.

ಜಾಗತಿಕ ತಾಪಮಾನದಿಂದಾಗಿ ಭೂಮಿಯ ಉಷ್ಣತೆ ಹೆಚ್ಚಾಗಿ ಎಲ್ಲ ನೈಸರ್ಗಿಕ ಸಂಪನ್ಮೂಲಗಳು ನಾಶವಾಗುತ್ತದೆ ಎಂಬುದು ಎಲ್ಲ ಪರಿಸರ ವಿಜ್ಞಾನಿಗಳ ಆತಂಕ. ಇದನ್ನು ತಡೆಗಟ್ಟಲು ಹೆಚ್ಚಿನ ಪ್ರಮಾಣದಲ್ಲಿ ಗಿಡಗಳ ನೆಡುವಿಕೆ, ಅರಣ್ಯ ಸಂಪತ್ತನ್ನು ಕಾಪಾಡುವುದು ಅರಣ್ಯಗಳ ಸಂರಕ್ಷಣೆಯಿಂದ ಪ್ರಾಣಿಪಕ್ಷಿಗಳ ಸಂತತಿಯನ್ನು ಉಳಿಸಿ ಬೆಳೆಸಬಹುದು.

ಈ ನಿಟ್ಟಿನಲ್ಲಿ ಸರ್ಕಾರವು ಪರಿಸರ ಸಂರಕ್ಷಣೆಗಾಗಿ ಕೆಲವು ಕಾನೂನುಗಳನ್ನು ಜಾರಿಗೆ ತಂದಿದೆ. ಪ್ಲಾಸ್ಟಿಕ್ ಉಪಯೋಗವನ್ನು ನಿಷೇಧಿಸುವುದು. ಸಾರ್ವಜನಿಕ ವಾಹನಗಳಲ್ಲಿ ಸಂಚರಿಸಲು ಸಹಾಯ ಮಾಡುವುದು, ಎಲ್ಲರ ಮನೆಗಳಲ್ಲಿ ಗಿಡಗಳನ್ನು ವಿತರಿಸಿ ನೆಡೆಸುವುದು.

ಪರಿಸರ ದಿನದ ಮೂಲ ಉದ್ದೇಶ ಭೂಮಿಯನ್ನು ಸ್ವಚ್ಛ ಮತ್ತು ಸುಂದರವಾಗಿ ಮಾಡುವುದು. ಪರಿಸರವನ್ನು ಸಂರಕ್ಷಿಸುವುದು. ನೀರನ್ನು ಮಿತವಾಗಿ ಬಳಸುವುದು, ಮರುಬಳಕೆ ಮಾಡುವುದನ್ನು ಅಭ್ಯಾಸ ಮಾಡುವುದು. ನೈಸರ್ಗಿಕವಾಗಿ ಸಿಗುವ ಎಲ್ಲ ಸಂಪನ್ಮೂಲಗಳನ್ನು ಕಾಪಾಡುವುದು ಹಾಗೂ ಸದ್ಬಳಕೆ ಮಾಡುವುದೇ ಆಗಿದೆ.

ಒಟ್ಟಿನಲ್ಲಿ ಹೇಳುವುದಾದರೆ ಎಲ್ಲರೂ ಒಟ್ಟಾಗಿ ಈ ಪ್ರಕೃತಿಯನ್ನು ನಾಡನ್ನು ಸುಂದರವಾಗಿಸಿ ಆರೋಗ್ಯಕರವಾಗಿ ಮಾಡಿ ಭೂಮಿಯನ್ನು **ಹಸಿರ ಸೆರಗಿನಿಂದ ಸಿಂಗರಿಸುವುದೇ** ಆಗಿದೆ.

ಇಡೀ ವಿಶ್ವಕ್ಕೆ ಮಾನವತೆಯ ದಿವ್ಯತೆಯ ಪಾಠವನ್ನು ನಮ್ಮ ಸನಾತನ ಸಂಸ್ಕೃತಿ ಋಷಿಮುನಿಗಳು ಕಲಿಸಿದ್ದಾರೆ. ಅ ಎಲ್ಲಾ ವಿಷಯುವನ್ನು ಅರ್ಥಮಾಡಿಕೊಂಡು ಜ್ಞಾನಶೀಲರಾಗಿ ಪರಿಸರವನ್ನು ಉಳಿಸೋಣ.


ಜಾಹಿರಾತು



# ಶ್ರೀ ಶಂಕರ ಬಡಾವಣೆ

# SRI SHANKARA LAYOUT





200 ft. off Doddaballapur-Devanahalli state highway
DTPA noc DC converted (BIAPPA)
Fully developped with Box type drains, Water pipes,
Asphalted 40 ft. Roads PARK with walking track
& benches, Treatment plant, Street lights
CCTV surveillance Compounded
Ring Road passes inside layout
Own held land
2000/-per sq.ft. negotiable
Town Municipal Corporation Ward Number - 5
CONTACT : Ph. : 98453 77292, 63666 66858

## ಶುದ್ಧತೆ, ಬದ್ಧತೆಯ ಸರದಾರ

# ರಾಜಕಾರಣವನ್ನು ವ್ರತವಾಗಿ ಪಾಲಿಸಿದ ಕಾಗೇರಿ

ಎಚ್.ಆರ್.ಗಣೇಶ



ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಈ ದೇಶ ಕಂಡ ಅಪರೂಪದ ರಾಜಕಾರಣಿ. ಮೂರು ದಶಕಗಳ ಅವಧಿಯ ರಾಜಕಾರಣದಲ್ಲಿ ಶುದ್ಧತೆ ಹಾಗೂ ಬದ್ಧತೆ ಉಳಿಸಿಕೊಂಡು ಒಂದೂ ಕಪ್ಪು ಚುಕ್ಕೆ ಇಲ್ಲದೇ ಜನಸೇವೆ ಮಾಡಿ ರಾಜಧರ್ಮ ಪಾಲಿಸಿದ ರಾಜಕಾರಣಿ ಎಂಬ ಹೆಗ್ಗಳಿಕೆ ಇವರದ್ದು.

ವಿಧಾನಸಭೆಯ ಅಧ್ಯಕ್ಷರಾಗಿ ಅನೇಕ ಬದಲಾವಣೆಗಳನ್ನು ತಂದು ದೇಶ ಮಟ್ಟದಲ್ಲಿ ಮಾದರಿ ಆದ ಶ್ರೇಷ್ಠತೆ ವಿಶ್ವೇಶ್ವರ ಹೆಗಡೆಯವರಿಗೆ ಸಲ್ಲಬೇಕು.

ಅಟಲ್ ಬಿಹಾರಿ ವಾಜಪೇಯಿ ಅವರಿಂದ ಪ್ರಭಾವಿತರಾಗಿ ಅವರ ಅನೇಕ ಗುಣಗಳನ್ನು ನಮ್ಮ ರಾಜಕಾರಣದಲ್ಲಿ ಹಾಗೂ ಜೀವನದಲ್ಲಿ ಅಳವಡಿಸಿಕೊಂಡು ತಪ್ಪದೇ ಪಾಲಿಸುತ್ತಾ ಬಂದ ಕಾಗೇರಿಯವರು ಪ್ರಧಾನಿ ನರೇಂದ್ರ ಮೋದಿಯವರ ಸಾಂಗತ್ಯ, ಒಡನಾಟದ ಪರಿಣಾಮವಾಗಿ ಅವರ ರಾಜಧರ್ಮ ಪಾಲನೆಗೆ ಆಕರ್ಷಿತರಾದವರು.

ಬೂತ್ ಮಟ್ಟದ ಕಾರ್ಯಕರ್ತರು ಸೇರಿದಂತೆ ಯಾರೇ ಆದರೂ ದೂರವಾಣಿ ಮೂಲಕ ಸಂಪರ್ಕಿಸಿದರೆ ಅಥವಾ ಸ್ವತಃ ಭೇಟಿಗೆ ಬಂದರೆ ಸುಲಭವಾಗಿ ಸಿಗುವ ಸರಳತೆಯ ಸಾಕಾರ ಮೂರ್ತಿ. ಜೀವನದುದ್ದಕ್ಕೂ ಭ್ರಷ್ಟಾಚಾರರನ್ನು ತಮ್ಮ ಕಡೆ ಸುಳಿಯಲು ಬಿಡದ ಇವರು ನಾಡಿನ ಎಲ್ಲರ ಗಮನ ಸೆಳೆದಿದ್ದಾರೆ.

ಸದಾ ಬೆಂಬಲಿಗರ ದಂಡು, ಗುತ್ತಿಗೆದಾರರ ಹಿಂಡು ಕಟ್ಟಿಕೊಂಡು ಓಡಾಡುವ ರಾಜಕೀಯ ನಾಯಕರಿಗಿಂತ ಇವರು ಭಿನ್ನರು. ಇವರ ಕ್ಷೇತ್ರದಲ್ಲಿ ಬೇರೆ ಬೇರೆ ತಾಲ್ಲೂಕು ಹಾಗೂ ಜಿಲ್ಲೆಗಳ ಗುತ್ತಿಗೆದಾರರು ಕೆಲಸ ಮಾಡಲು ಖುಷಿಪಡುವುದು ಗಮನಾರ್ಹ ಸಂಗತಿಯಾಗಿದೆ.

ಪ್ರತಿ ಹಂತದಲ್ಲೂ ಹೊಗಳುವವರನ್ನು ಅಪ್ಪಿಕೊಳ್ಳದೇ, ದೂರಿದವರನ್ನು ದೂರ ಮಾಡದೇ ತಮ್ಮ ಸಮಗ್ರ ಜೀವನದಲ್ಲಿ ಪ್ರಬುದ್ಧತೆಯನ್ನು ಸಮಾಜಕ್ಕೆ ಆದರ್ಶವಾಗಿ ತೋರ್ಪಡಿಸುತ್ತಿರುವ ರಾಜಕಾರಣಿ ಇವರು.

ಕರ್ನಾಟಕದ ಇವತ್ತಿನ ಈ ರಾಜಕೀಯ ವ್ಯಸ್ಥೆಯಲ್ಲಿ ಸಾಮರ್ಥ್ಯ ಇದ್ದರೂ ಉನ್ನತ ಸ್ಥಾನಮಾನ ಲಭ್ಯವಾಗದೇ ಹೋಗಬಹುದು. ಕ್ಲೀನ್ ಹ್ಯಾಂಡ್ ಆ್ಯಂಡ್ ಕ್ಲೀನ್ ಇಮೇಜ್ ಇರುವಂತಹ ಕಾಗೇರಿಯವರಿಗೆ ಯಾಕೋ ಮುಖ್ಯಮಂತ್ರಿ ಸ್ಥಾನ ಇನ್ನೂ ದೂರವೇ ಉಳಿದಿದೆ.

ಕಳೆದ ವರ್ಷ ರಾಜ್ಯದ ಬಿಜೆಪಿ ಆಡಳಿತದ ಮುಖ್ಯಮಂತ್ರಿ ಬದಲಾವಣೆಯ ಸಂದರ್ಭದಲ್ಲಿ ರಾಷ್ಟ್ರಮಟ್ಟದಿಂದ ಕಾಗೇರಿಯವರ ಹೆಸರು ಕೇಳಿಬಂತು ಎನ್ನುವುದು ವಿಶ್ವೇಶ್ವರ ಹೆಗಡೆಯವರ ಶಕ್ತಿ ಸಾಮರ್ಥ್ಯಕ್ಕೆ ನಿದರ್ಶನ.

ಕ್ಷೇತ್ರದ ಯಾವುದೇ ಕಾರ್ಯಕರ್ತರಿಗೂ ಬೇಸರ ಆಗದ ಹಾಗೆ ನೋಡಿಕೊಳ್ಳುವ ಕಾಗೇರಿಯವರ ಸದ್ಗುಣ ಅನುಕರಣೀಯ. ಅವರಲ್ಲಿ ಇರುವಂತಹ ಹೃದಯ ಶ್ರೀಮಂತಿಕೆ ಜನನಾಯಕರಲ್ಲಿ ಇತ್ತೀಚೆಗೆ ತುಂಬಾ ವಿರಳ.

ರಾಜಕಾರಣವನ್ನು ಎಲ್ಲರೂ ಮಾಡುತ್ತಾರೆ. ಆದರೆ ಅದನ್ನು ಒಂದು ವ್ರತವಾಗಿ ಸ್ವೀಕರಿಸಿ ಪಾಲಿಸುತ್ತಾ ಬಂದವರು ಕಾಗೇರಿಯವರು ಎಂದು ಸಚಿವರಾದ ಕೋಟ ಶ್ರೀನಿವಾಸ ಪೂಜಾರಿ ಹೇಳಿದ್ದಾರೆ. ಹೀಗಾಗಿ ನಾವು ಕಾಗೇರಿಯವರ ಬಗ್ಗೆ ಅಭಿಮಾನ ಪಡಬೇಕಾಗಿದ್ದು ಸಹಜವೇ.

ಕಾಗೇರಿಯವರು 6 ಬಾರಿ ಶಾಕರಾಗಿ, ಸಚಿವರಾಗಿ, ಸಭಾಧ್ಯಕ್ಷರಾಗಿ ಅತ್ಯಂತ ಸಮರ್ಥವಾಗಿ ನಿಭಾಯಿಸಿದರು. ಮುದಿನ ದಿನಗಳಲ್ಲಿ ಈ ನಾಡಿನ ಮುಖ್ಯಮಂತ್ರಿ ಆದರೂ ಅತ್ಯುತ್ತಮವಾಗಿ ನಿಭಾಯಿಸುತ್ತಾರೆ. ಅದರಲ್ಲಿ ಎಳ್ಳಷ್ಟು ಸಂದೇಹವಿಲ್ಲ. ಈ ಸರಳತೆಯ ಸಾಹುಕಾರನಿಗೆ ಯೋಗ್ಯತೆಯ ಜತೆಗೆ ಯೋಗವೂ ಕೂಡಿ ಬರಲಿ. ದೈವಿಕ ಬಲ ಸದಾ ಇರಲಿ. ಜನ್ಮದಿನ ನೂರಾಗಲಿ ಎಂಬ ಶುಭ ಹಾರೈಕೆಗಳು.

**ಜುಲೈ 10ನೇ ದಿನಾಂಕದಂದು**
**62ನೇ ವರ್ಷಕ್ಕೆ ಕಾಲಿಟ್ಟಿರುವ**
**ಸುಸಂದರ್ಭದಲ್ಲಿ ಕರ್ನಾಟಕ**
**ವಿಧಾನ ಸಭೆಯ ಸಭಾಪತಿಗಳಾದ**
**ಸನ್ಮಾನ್ಯ ಶ್ರೀ ವಿಶ್ವೇಶ್ವರ ಹೆಗಡೆ**
**ಕಾಗೇರಿಯವರಿಗೆ ಮಹಾಸಭೆಯ**
**ಹಾರ್ದಿಕ ಶುಭಾಶಯಗಳು**
**ಅಧ್ಯಕ್ಷರು ಹಾಗೂ ಪದಾಧಿಕಾಗಳು**
**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ**



# ಪ್ರೊ. ಬಿ.ವಿ ಸುಬ್ಬರಾಯಪ್ಪ

ಸುರೇಶ್ ಮೂನಾ

ಸ್ಮಾರ್ತರಲ್ಲಿ ಉಲುಚುಕಮ್ಮೆ ಯುವರಾದ ಪ್ರೊ.ಬಿ.ವಿ. ಸುಬ್ಬರಾಯಪ್ಪ ಭಾರತೀಯ ವಿಜ್ಞಾನ ಇತಿಹಾಸ ಸಂಶೋಧನೆಯ ಮೇರು ಪುರುಷರೆಂದೆ ಚಿರಪರಿಚಿತರು.

ಉಲುಚುಕಮ್ಮೆ ಬ್ರಾಹ್ಮಣ ಮಹಾಸಭಾವು 2010ರಲ್ಲಿ ಉಲುಚುಕಮ್ಮೆ ಸಾಧಕರು ಮಾಲೆಯಲ್ಲಿ ಇವರ ಬಗ್ಗೆ ಒಂದು ಕಿರುಹೊತ್ತಿಗೆಯನ್ನು ಹೊರತಂದಿದೆ. ಶ್ರೀಮತಿ ಅನ್ನಪೂರ್ಣ ವೆಂಕಟನಂಜಪ್ಪ ಅವರು ಬಹಳ ಅಚ್ಚುಕಟ್ಟಾಗಿ ಈ ಮರೆಯಲಾಗದ ಮಹನೀಯರ ಜೀವನ ಮತ್ತು ಸಾಧನೆಯನ್ನು ದಾಖಲೆ ಮಾಡಿದ್ದಾರೆ.

ಭಾರತದ ವೈಜ್ಞಾನಿಕ ಪರಂಪರೆಯನ್ನು ಸೂಕ್ತ ರೀತಿಯಲ್ಲಿ ಒತ್ತಿ ಹೇಳಿದ ಸಮಕಾಲೀನ ವಿಜ್ಞಾನಿಗಳಲ್ಲಿ ಪ್ರೊ. ಬಿ ವಿ. ಸುಬ್ಬರಾಯಪ್ಪ ಅಗ್ರಗಣ್ಯರು.

ಬಿದರೆಯ ಬಿ. ವೆಂಕಟಸುಬ್ಬಯ್ಯ ಮತ್ತು ರಂಗಮ್ಮ ದಂಪತಿಗಳ ದ್ವಿತೀಯ ಪುತ್ರರಾಗಿ ಕೊರಟಗೆರೆ ತಾಲೂಕಿನ ಪಾತಗಾನಹಳ್ಳಿಯಲ್ಲಿ 9.1.1926ರಲ್ಲಿ ಜನಿಸಿದ ಪ್ರೊ. ಬಿವಿಎಸ್ ಅವರು ಸ್ವಂತ ಪರಿಶ್ರಮ ಮತ್ತು ಬುದ್ಧಿವಂತಿಕೆಯಿಂದ ಹಂತಹಂತವಾಗಿ ಸಾಧನೆಯ ಸೋಪಾನವನ್ನು ಏರಿ ದೇಶವಿದೇಶಗಳಲ್ಲಿ ನಮ್ಮ ನಾಡಿಗೆ ಕೀರ್ತಿಯನ್ನು ತಂದ ಅಸಾಮಾನ್ಯ ಕನ್ನಡಿಗರು. ನನ್ನ ಆತ್ಮೀಯ ಮಿತ್ರರು, ಹಿತೈಷಿಗಳೂ ಆಗಿದ್ದ ಅವರ ಸಾಧನೆಯ ಪಥದ ಬಗ್ಗೆ ಬರೆಯುತ್ತ ಹೋದರೆ, ಒಂದು ದೊಡ್ಡ ಗ್ರಂಥವೇ ಆಗುತ್ತದೆ. ಈ ಅಂಕಣದ ವ್ಯಾಪ್ತಿಯನ್ನು ಗಮನದಲ್ಲಿ ಇಟ್ಟುಕೊಂಡು ಅವರ ಯಶಸ್ಸಿನ ವೈವಿಧ್ಯಮಯ ಸ್ತರಗಳ ಒಂದು ಕಿರು ಪರಿಚಯವನ್ನು ಮಾತ್ರ ಇಲ್ಲಿ ಕೊಡಲಾಗಿದೆ.

ಮೈಸೂರಿನ ಕೇಂದ್ರ ಆಹಾರ ತಂತ್ರಜ್ಞಾನ ಸಂಶೊಧನಾ ಸಂಸ್ಥೆಯಲ್ಲಿ ವಿಜ್ಞಾನಿ, ದೆಹಲಿಯ ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್ ಸಂಸ್ಥೆಯಲ್ಲಿ ವಿಜ್ಞಾನ ಯೋಜನಾ ವಿಭಾಗದ ಅಧಿಕಾರಿ.

ಮೈಸೂರು ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿ. ದೆಹಲಿಯ ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿಯ ವಿಜ್ಞಾನ ಇತಿಹಾಸ ಸಮಿತಿಯ ಸಂಚಾಲಕ ಮತ್ತು ಅಕಾಡೆಮಿಯ ಕಾರ್ಯನಿರ್ವಾಹಕ ಕಾರ್ಯದರ್ಶಿ. ಪೋಲೆಂಡಿನ ವಿಜ್ಞಾನ ಅಕಾಡೆಮಿಯಿಂದ ಕೋಪರ್ನಿಕಸ್ ಪದಕ.

ಪಿಲಾನಿಯ ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿಯಲ್ಲಿ ವಿಜ್ಞಾನ ಇತಿಹಾಸ ಪ್ರಾಧ್ಯಾಪಕ. ಮುಂಬೈನ ನೆಹರು ಸೆಂಟರ್‌ನ ನಿರ್ದೇಶಕ. ರುಮೇನಿಯಾದ ಬುಖಾರೆಸ್ಟ್‌ನಲ್ಲಿ ನಡೆದ ಇಂಟರ್‌ನ್ಯಾಷನಲ್ ಯೂನಿಯನ್ ಆಫ್ ಹಿಸ್ಟರಿ ಅಂಡ್ ಫಿಲಾಸಫಿ ಆಫ್ ಸೈನ್ಸ್‌ನ ಅಧಿವೇಶನದಲ್ಲಿ ಅದರ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಗೌರವ (1985ರಲ್ಲಿ ಪುನರಾಯ್ಕೆ). ಪ್ಯಾರಿಸ್‌ನ ಅಂತಾರಾಷ್ಟ್ರೀಯ ವಿಜ್ಞಾನ ಇತಿಹಾಸ ಅಕಾಡೆಮಿಯ ಸದಸ್ಯತ್ವ. ಈ ಸದಸ್ಯತ್ವ ದೊರೆತ ಪ್ರಥಮ ಭಾರತೀಯ. ಬೆಂಗಳೂರು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್‌ಕಲ್ಚರ್‌ನ ವಿಜ್ಞಾನ ಇತಿಹಾಸ ಕೇಂದ್ರದ ಗೌರವ ನಿರ್ದೇಶಕ. ದೆಹಲಿಯ ಸೆಂಟರ್ ಫಾರ್ ಸ್ಟಡೀಸ್ ಇನ್ ಸಿವಿಲೈಸೇಷನ್‌ನ ಭಾರತೀಯ ವಿಜ್ಞಾನ ಇತಿಹಾಸ, ತತ್ವಶಾಸ್ತ್ರ ಮತ್ತು ಸಂಸ್ಕೃತಿಯ ವಿಭಾಗದ ಆಶ್ರಯದಲ್ಲಿ ನಾಲ್ಕು ಗ್ರಂಥಗಳ ಸಂಪಾದಕ ಮತ್ತು ಲೇಖಕ.

ಯುನೆಸ್ಕೋದ ಇಂಟರ್‌ನ್ಯಾಷನಲ್ ಯೂನಿಯನ್ ಆಫ್ ಹಿಸ್ಟರಿ ಅಂಡ್ ಫಿಲಾಸಫಿ ಆಫ್ ಸೈನ್ಸ್‌ನ ಅಧ್ಯಕ್ಷ. ಈ ಮನ್ನಣೆಗೆ ಪಾತ್ರರಾದ ಪ್ರಥಮ ಪಾಶ್ಚಿಮಾತ್ಯೇತರ ವಿಜ್ಞಾನಿ. ಇಟಲಿಯ ಬೊಲೋನಾ ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್. ಇಂಟರ್‌ನ್ಯಾಷನಲ್ ಸೊಸೈಟಿ ಫಾರ್ ಸೈನ್ಸ್ ಅಂಡ್ ರಿಲಿಜನ್‌ನ ಸಂಸ್ಥಾಪಕ ಸದಸ್ಯತ್ವ. ಇದು ನೊಬೆಲ್ ಪ್ರಶಸ್ತಿ ಪುರಸ್ಕೃತರೂ ಇತರ ಶ್ರೇಷ್ಠ ವಿಜ್ಞಾನಿಗಳೂ ಇರುವ ಪ್ರತಿಷ್ಠಿತ ಸಂಸ್ಥೆ. ಬೆಂಗಳೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ ಸ್ಟಡೀಸ್ ಸಂಸ್ಥೆಯಲ್ಲಿ ಗೌರವ ಪ್ರಾಧ್ಯಾಪಕ.

ಪ್ರೊ. ಪಿ ಬಿಲಿಮೋರಿಯಾ ಮತ್ತು ಡಾ॥ ಎಂ.ಕೆ. ಶ್ರೀಧರ್ ಅವರು ಸಂಪಾದಿಸಿದ ಹಲವು ದೇಶಗಳ ಲೇಖಕರು ಬರೆದ ಪ್ರಬುದ್ಧ ಬರಹಗಳನ್ನು ಒಳಗೊಂಡ ಅಭಿನಂದನಾ ಗ್ರಂಥ ಸಮರ್ಪಣೆ. ಕನ್ನಡ ರಾಜ್ಯೋತ್ಸವ ಪ್ರಶಸ್ತಿ. ಉಲುಚುಕಮ್ಮೆ ಸಾಧಕರ ಮಾಲೆಯಲ್ಲಿ ಪ್ರೊ. ಬಿವಿಎಸ್ ಜೀವನಚರಿತ್ರೆ ಕಿರುಹೊತ್ತಿಗೆ ಪ್ರಕಟಣೆ. ಈಶ್ವರಚಂದ್ರ ವಿದ್ಯಾಸಾಗರ್ ಮೆಮೋರಿಯಲ್ ಲೆಕ್ಚರರ್‌ಶಿಪ್ ಗೌರವ. ಇದು ಒಂದು ಉನ್ನತ ಪುರಸ್ಕಾರ. ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿಯ ಫೆಲೊ ಆಗಿ ಆಯ್ಕೆ.

ಇವಿಷ್ಟಲ್ಲದೆ, ಹಲವಾರು ಪ್ರಸಿದ್ಧ ಸಂಘ ಸಂಸ್ಥೆಗಳು ಪ್ರೊ. ಬಿವಿಎಸ್ ಅವರನ್ನು ಆದರ ಅಭಿಮಾನಗಳೊಂದಿಗೆ ಗೌರವಿಸಿ ಸತ್ಕರಿಸಿವೆ.

ಪ್ರೊ. ಬಿ.ವಿ. ಸುಬ್ಬರಾಯಪ್ಪ ಅವರು ವಿಜ್ಞಾನ ಇತಿಹಾಸಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ಕೆಲವು ಕೃತಿಗಳನ್ನು ಮತ್ತು ಇಂಗ್ಲಿಷ್ ಭಾಷೆಯಲ್ಲಿ ದೇಶ ವಿದೇಶಗಳಲ್ಲಿ ಮಾನ್ಯತೆ ಪಡೆದಿರುವ ಇಪ್ಪತ್ತಕ್ಕೂ ಹೆಚ್ಚು ಅಮೂಲ್ಯ ಕೃತಿಗಳನ್ನು ನೀಡಿದ್ದಾರೆ.

ಪ್ರೊ॥ ಬಿ.ವಿ. ಸುಬ್ಬರಾಯಪ್ಪ ಅವರ ಕೃತಿಗಳಲ್ಲಿ ಓದುಗರನ್ನು ಮತ್ತು ಜನಸಾಮಾನ್ಯರನ್ನು ಚಿಂತನೆಗೆ ಹಚ್ಚುವ ಹಲವಾರು ವಿಚಾರಗಳಿವೆ.

ಈ ಮಹನೀಯರು ಒಬ್ಬ ಅಪರೂಪದ ಭಾರತೀಯ, ಕನ್ನಡಿಗ ಹಾಗೂ ಬ್ರಾಹ್ಮಣ ಎಂಬುದು ನಮಗೆಲ್ಲಾ ಹೆಮ್ಮೆಯ ಸಂಗತಿ.

ಇಂತಹ ಅಸಮಾನ್ಯ ಸಾಧನೆ ಮಾಡಿದ ಪ್ರೊ. ಬಿ.ವಿ. ಸುಬ್ಬರಾಯಪ್ಪ ಅವರು 8.4.2019 ರಂದು ದೈವಾಧೀನರಾದರು.

# ಶ್ರೀ ಅಖಿಲ ಹವ್ಯಕ ಮಹಾಸಭಾ-ಒಂದು ಅನಾವರಣ

ಶ್ರೀ ನಾರಾಯಣ ಭಟ್ ಹುಳೇಗಾರು




79 ವಸಂತಗಳು ಒಬ್ಬ ವ್ಯಕ್ತಿಯ ದೃಷ್ಟಿಯಿಂದ ಬದುಕಿನ ಸಂಧ್ಯಾ ಕಾಲ, ಆದರೆ ಅದೇ ಒಂದು ಸಂಸ್ಥೆಯ ದೃಷ್ಟಿಯಿಂದ ಅದರ ಕ್ರೀಯಾಶೀಲ ನಿರಂತರತೆಯ ಒಂದು ಮಹತ್ವದ ಹೆಜ್ಜೆ. ಚೀನಿಗಾದೆ ಹೇಳುವಂತೆ ಸಾವಿರ ಮೈಲುಗಳ ದೂರದ ಪ್ರಯಾಣ ಒಂದು ಹೆಜ್ಜೆಯಿಂದ ಆರಂಭವಾಗುತ್ತದೆಯಂತೆ. 1942 ರಲ್ಲಿ ಅಂತಹ ಒಂದು ದಿಟ್ಟ ಹೆಜ್ಜೆಯನ್ನಿಟ್ಟು ಶ್ರೀ ಅಖಿಲ ಹವ್ಯಕ ಮಹಾಸಭಾ 75ರ ಅಮೃತಮಹೋತ್ಸವವನ್ನು ಸಂಭ್ರಮದಿಂದ ಆಚರಿಸಿಕೊಂಡು 79ನೇ ವರ್ಷಕ್ಕೆ ಕಾಲಿಟ್ಟಿದೆ.

ತಮ್ಮ ಆಚಾರ ವಿಚಾರ, ಸಂಪ್ರದಾಯ, ಸಂಸ್ಕೃತಿ, ಸಂಸ್ಕಾರ ಹಾಗೂ ಭಾಷೆಯಲ್ಲಿ ಒಂದು ವಿಶಿಷ್ಟತೆಯನ್ನು ಕಂಡುಕೊಂಡ ಅತ್ಯಂತ ಬುದ್ಧಿವಂತ ಜನಾಂಗವಾದ ಇವರು ಪ್ರಾರಂಭದಲ್ಲಿ ಸಮಾಜದೊಂದಿಗೆ ತಮ್ಮನ್ನು ತಾವು ಸ್ಪಷ್ಟವಾಗಿ ತೆರೆದುಕೊಳ್ಳುವಲ್ಲಿ, ಸಂಸ್ಕೃತಿಯ ವಿಶಿಷ್ಟತೆಯನ್ನು ಬಿಚ್ಚಿಕೊಳ್ಳುವಲ್ಲಿ ಅಷ್ಟಾಗಿ ಮನಸ್ಸುಮಾಡಿದಂತೆ ಕಾಣುವುದಿಲ್ಲ. ತಮ್ಮ ವೃತ್ತಿನಿಷ್ಠೆಯಲ್ಲಿ ಆಗಬೇಕಾದ ವಿಕಾಸಕ್ಕೆ ಬೇಲಿಹಾಕಿಕೊಂಡಂತೆ ಕಾಣುತ್ತದೆ. ಕ್ರಮೇಣ ಉತ್ತಮ ಶಿಕ್ಷಣ, ರಕ್ತಗತವಾಗಿ ಬಂದ ಪ್ರತಿಭೆ ಇವರನ್ನು ಸಮಾಜದಲ್ಲಿ ಮುಂಚೂಣಿಯಾಗಿ ನಿಲ್ಲಿಸಿತು. ಸಮಾಜ ಮುಖಿಯಾಗಿಯೂ ಗುರುತಿಸಿಕೊಂಡು, ಒಪ್ಪಿತ ಸಮಾಜದ ಒಂದು ಭಾಗವಾಗಿ ಬೆರೆತುಕೊಂಡರು.

ಒಪ್ಪಿತ ಸಮಾಜಕ್ಕೆ ಸಾಂಘಿಕ ಚಿಂತನೆಗಳು ಸಂಘಟನೆಗೊಂದು ವಿಶೇಷ ಬಲವನ್ನು ತಂದುಕೊಡುತ್ತದೆ. ಇದನ್ನು ಮನಗಂಡ ಕೆಲವೇ ಕೆಲವು ನಿಸ್ವಾರ್ಥ ವ್ಯಕ್ತಿಗಳು, ಸಮಾಜಮುಖಿ ಮನಸ್ಸುಳ್ಳ ಚಿಂತಕರು ಬೆಂಗಳೂರಿನಲ್ಲಿ ಹವ್ಯಕರ ಒಂದು ಸಂಘಟನೆಯನ್ನು ಹುಟ್ಟುಹಾಕಲು ಪ್ರಯತ್ನಿಸಿ ಅದರಲ್ಲಿ ಯಶಸ್ವಿಯೂ ಆದರು. ದಿನಾಂಕ 08.11.1942 ರಂದು ಶ್ರೀ ನೂಜಿಬೈಲು ಶಂಕರಭಟ್ಟರ ಅಧ್ಯಕ್ಷತೆಯಲ್ಲಿ ಕೇವಲ 24 ಜನ ಹವ್ಯಕ ಗಣ್ಯರು ಸೇರಿ ಶ್ರೀ ಹವ್ಯಕ ಬ್ರಾಹ್ಮಣ ಮಹಾಸಭಾವನ್ನು ಸ್ಥಾಪಿಸಿದರು. ದಿನಾಂಕ 29.09.1943 ರಂದು ಮೈಸೂರು ಸೊಸೈಟಿ ಕಾನೂನಿನ್ವಯ ನಂ. 345ರ ಪ್ರಕಾರ ನೋಂದಣಿಯಾಗಿ ಸ್ವಾತಂತ್ರ್ಯಕ್ಕಿಂತ ಪೂರ್ವದಲ್ಲಿಯೇ ಹುಟ್ಟಿದ ಒಂದು ಹೆಮ್ಮೆಯ ಸಂಸ್ಥೆಯೆಂಬ ಪ್ರಶಂಸೆಗೆ ಪಾತ್ರವಾಯಿತು.

ಸಾಮಾಜಿಕ ಕಳಕಳಿಯ ಸಿದ್ಧಾಂತವನ್ನು ಮೈಗೂಡಿಸಿಕೊಂಡು ಕಾರ್ಯಕ್ರಮ ಆಧಾರಿತ ಯೋಜನಾಬದ್ಧ ಸಂಘಟನೆಯೊಂದಿಗೆ ಹಾಗೂ ಪರಸ್ಪರ ಬಾಂಧವ್ಯ ಪ್ರಜ್ಞೆಯ ಹೊಸ ಬದುಕಿಗೆ ಅಣಿಯಾಗಿ ಸಮಾಜ ಮತ್ತು ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲಿತು.

ಹವ್ಯಕ ಸಂಘಟನೆ, ಅರ್ಹ ಬಡ ವಿದ್ಯಾರ್ಥಿಗಳಿಗೆ ಧನ ಸಹಾಯ, ವಿದ್ಯಾರ್ಥಿನಿಲಯ ಸ್ಥಾಪನೆ, ಸರ್ವ ಸಾಮಾನ್ಯ ಹವ್ಯಕ ಹಿತ ಸಾಧನೆ ಮುಂತಾದ ಸಮಾಜ ಮುಖಿ ಧ್ಯೇಯಗಳನ್ನಿಟ್ಟು ಕೊಂಡು ರೂಪಿತವಾದದ್ದು ಹವ್ಯಕ ಬ್ರಾಹ್ಮಣ ಮಹಾಸಭಾ.

ಪರಿಶ್ರಮ ಮತ್ತು ಸಫಲತೆ ಪರಸ್ಪರ ಒಡನಾಡಿಗಳು. ಶ್ರಮವಿದ್ದಲ್ಲಿ ಸಾಧನೆ, ಸಾಧನೆಯಿದ್ದಲ್ಲಿ ಸಿದ್ಧಿ, ಸಿದ್ಧಿಯಿಂದ ಸಮೃದ್ಧಿ. ಇವತ್ತಿನ ಈ ಸಮೃದ್ಧಿಯ ಹಿಂದೆ ಈ ಸಂಘಟನೆಯನ್ನು ಕಟ್ಟಿದ ಗಣ್ಯರನ್ನು ಈ ಸಂದರ್ಭದಲ್ಲಿ ನೆನೆಯಲೇಬೇಕು. ಅವರ ತ್ಯಾಗ ಸಮರ್ಪಣಾ ಮನೋಭಾವಕ್ಕೆ ತಲೆ ಬಾಗಲೇಬೇಕು.

ಬೆಂಗಳೂರಿನ ಅರಳಿಪೇಟೆ ಪೋಲೆಪಳ್ಳಿ ಸುಬ್ಬಯ್ಯ ಶೆಟ್ಟರ ಛತ್ರದಲ್ಲಿ ಪ್ರಪ್ರಥಮ ಸಭೆಯನ್ನು ಕರೆದು, ಅದೇ ತಿಂಗಳಿನಲ್ಲಿ ನೋಂದಣಿ ಮಾಡಿಸಿದರು. ಮಾಸಿಕ ಚಂದಾ ಹಣ ಕೇವಲ 2 ಆಣೆಯಾಗಿತ್ತು. ಸುಮಾರು ಒಂದು ವರ್ಷದ ನಂತರ ವಾರ್ಷಿಕಾಧಿವೇಶನವನ್ನು ಚಿಕ್ಕಮಗಳೂರಿನ ಜಿ.ಆರ್. ಯಾಜಿ ಯವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಪ್ರಾದೇಶಿಕ ಪ್ರಾಮುಖ್ಯತೆಯ ದೃಷ್ಟಿಯಿಂದ ಎರಡನೇ ಅಧಿವೇಶನವನ್ನು ಸಾಗರದ ಸುಪ್ರಸಿದ್ಧ ವಕೀಲರಾದ ಟಿ.ಎನ್. ವೆಂಕಪ್ಪನವರ ಅಧ್ಯಕ್ಷತೆ ಯಲ್ಲಿ ನೆರವೇರಿತು. ಆ ಸಂದರ್ಭದಲ್ಲಿ ಶ್ರೀ ಮೇಣ ರಾಮಕೃಷ್ಣ ಭಟ್ ಅಧ್ಯಕ್ಷರಾಗಿ ಶ್ರೀ ಪಾಂಡೇಶ್ವರ ಸುಬ್ಬರಾವ್ ಗೌ. ಕಾರ್ಯದರ್ಶಿಯಾಗಿ ಶ್ರೀ ಮಕ್ಕಿ ರಾಮಯ್ಯನವರು ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು.

ಮಹಾಸಭೆಯ ಆಡಳಿತ ಕೇಂದ್ರವು ಬೆಂಗಳೂರು ನಗರ ವಾಗಿದ್ದು, ಅದರ ವ್ಯಾಪ್ತಿಯು ಹವ್ಯಕ ಜನಾಂಗವಿರುವ ಎಲ್ಲಾ ಕಡೆಗೂ ಅನ್ವಯಿಸಬೇಕು ಎನ್ನುವ ಮಹತ್ವದ ನಿರ್ಣಯ ಇಂದು ಸಂಪೂರ್ಣ ಸಾಕಾರಗೊಂಡಿರುವುದು ಹೆಮ್ಮೆಯ ವಿಷಯ.

1956, ಕರ್ನಾಟಕ ಏಕೀಕರಣವಾದ ನಂತರ ಬೆಂಗಳೂರಿನಲ್ಲಿ ಹವ್ಯಕರ ಸಂಖ್ಯೆ ಬೆಳೆಯತೊಡಗಿತು. ಮಹಾಸಭೆಗೊಂದು ಸ್ವಂತ ಕಟ್ಟಡ ಕಟ್ಟಲು 1969 ರಲ್ಲಿ ಮಲ್ಲೇಶ್ವರಂನ 11ನೇ ಕ್ರಾಸಿನಲ್ಲಿ (ಈಗಿರುವ ನಿವೇಶನ) ಖರೀದಿಸಲಾಯಿತು. ಒಟ್ಟು 130*75 1/2 ಚದರ ಅಡಿ ಜಾಗದಲ್ಲಿ ಹಾಸ್ಟೆಲ್ ಹಾಗೂ ಕಲ್ಯಾಣ ಮಂಟಪವನ್ನು ಕಟ್ಟಲಾಯಿತು. ಇದರಿಂದ ಆದಾಯ ಬರಲು ಪ್ರಾರಂಭವಾಗಿ ಮಹಾಸಭೆ ತನ್ನ ಅಭಿವೃದ್ಧಿಯ ಬಾಗಿಲುಗಳನ್ನು ಒಂದೊಂದಾಗಿ ತೆರೆಯಲು ಅನುಕೂಲವಾಯಿತು. ಡಾ. ಎನ್. ಕೆ. ಗಣಪಯ್ಯನವರ ಔದಾರ್ಯ ಹಾಗೂ ದಕ್ಷ ಮಾರ್ಗದರ್ಶನದಲ್ಲಿ ಹವ್ಯಕ ಭವನ ಮೇಲೆದ್ದು ನಿಂತಿತು.

1979 ರಲ್ಲಿ "ಹವ್ಯಕ ಬ್ರಾಹ್ಮಣ ಮಹಾಸಭಾ" ಎನ್ನುವ ಹೆಸರಿಗೆ ಬದಲಾಗಿ ಶ್ರೀ ಅಖಿಲ ಹವ್ಯಕ ಮಹಾಸಭಾ (ರಿ.) ಬೆಂಗಳೂರು ಎಂಬ ಹೆಸರನ್ನು ಪಡೆದು ಸಮಸ್ತ ಹವ್ಯಕ ಸಮಾಜದ ಪ್ರತಿಷ್ಠಿತ ಸಂಸ್ಥೆಯಾಗಿ ಕಾರ್ಯನಿರ್ವಹಿಸಲು ಪ್ರಾರಂಭಿಸಿತು. ಸುಮಾರು 32 ವರ್ಷಗಳ ಸತತ ಪ್ರಯತ್ನದಿಂದ ಸ್ವಂತ ಕಟ್ಟಡ ಹೊಂದಿರುವುದು ಹವ್ಯಕರೆಲ್ಲರ ಹೆಮ್ಮೆಯ ಸಂಗತಿ.

ದಿನಾಂಕ 25.05.1974 ರಂದು ಮಹಾಸಭೆ ತನ್ನ ವಾರ್ಷಿಕಾಧಿವೇಶನವನ್ನು ತನ್ನ ಸ್ವಂತ ಕಟ್ಟಡದಲ್ಲಿ ವಿಜೃಂಭಣೆಯಿಂದ ಆಚರಿಸಿತು. ಪುನರ್ ನಾಮಕರಣದ ಕಾರಣದಿಂದ ಹವ್ಯಕರು ನೆಲೆಸಿರುವ ಎಲ್ಲಾ ಪ್ರದೇಶಗಳನ್ನು ಪರಿಗಣಿಸಿ ಪ್ರಾದೇಶಿಕ ಪ್ರಾಮುಖ್ಯತೆಯನ್ನು ನೀಡಿ ಕೇಂದ್ರ ಸಂಸ್ಥೆಗೆ ಆಡಳಿತ ಮಂಡಳಿಯನ್ನು ರಚಿಸಲಾಯಿತು.

ಸಂಸ್ಥೆಯ ಉಪ ನಿಯಮದ ಪ್ರಕಾರ ಆಡಳಿತ ಮಂಡಳಿಯ 31 ಜನ ಚುನಾಯಿತ ನಿರ್ದೇಶಕರನ್ನು ಒಳಗೊಂಡಿರುತ್ತದೆ. ಉತ್ತರ ಕನ್ನಡ ಜಿಲ್ಲೆಯಿಂದ 5, ದಕ್ಷಿಣ ಕನ್ನಡ 5, ಶಿವಮೊಗ್ಗ 5, ಬೆಂಗಳೂರು 10, ಹಾಸನ-ಚಿಕ್ಕಮಗಳೂರು 1, ಕೊಡಗು 1, ಕರ್ನಾಟಕ ಇತರೆ ಭಾಗದಿಂದ 1, ಕೇರಳ ರಾಜ್ಯ 1, ಇತರೆ ರಾಜ್ಯ 1, ಸಂಘ ಸಂಸ್ಥೆಯಿಂದ 1, ಅಲ್ಲದೇ ಅಧ್ಯಕ್ಷರಿಂದ ನಾಮಕರಣ ಹೊಂದಿದ 6 ನಿರ್ದೇಶಕರು ಹಾಗೂ 6 ವಿಶೇಷ ಆಹ್ವಾನಿತ ನಿರ್ದೇಶಕರನ್ನು ಹೊಂದಿರುತ್ತದೆ. ಇದಲ್ಲದೆ ಕಾರ್ಯಕಾರಿ ಸಮಿತಿಗೆ ವಿಶೇಷ ಆಹ್ವಾನಿತರಾಗಿ 4 ಸದಸ್ಯರನ್ನು ನೇಮಕ ಮಾಡಿಕೊಳ್ಳಲಾಗುತ್ತದೆ.

ತನ್ನ ಯೋಜನೆಯನ್ನು ವಿಸ್ತರಿಸುವ ಹಿನ್ನೆಲೆಯಲ್ಲಿ ಸುಮಾರು 40 ವರ್ಷಗಳ ನಂತರ ಶಿಥಿಲವಾಗಿದ್ದ ಮೂಲ ಕಟ್ಟಡವನ್ನು ಸಂಪೂರ್ಣವಾಗಿ ಕೆಡವಿ ಇದ್ದ ಸ್ಥಳದಲ್ಲಿಯೇ ಆಧುನಿಕ ವಿನ್ಯಾಸಗಳನ್ನೊಳಗೊಂಡ ಬಹು ಮಹಡಿಗಳ ವಿದ್ಯಾರ್ಥಿನಿಲಯ ಸಮುಚ್ಚಯವು ದಿನಾಂಕ 21.02.2016 ರಂದು ಲೋಕಾರ್ಪಣೆಗೊಂಡಿತು.

ಹವ್ಯಕ ಬಾಂಧವರ ಹಾಗೂ ಸಮಾಜದ ಗಣ್ಯರ, ಜನ ಪ್ರತಿನಿಧಿಗಳ ವಿಶಾಲ ಮನಸ್ಸಿನ ಸ್ಪಂದನೆಯ ಮೂಲಕ ಆರ್ಥಿಕ



ಸಂಪನ್ಮೂಲವನ್ನು ಕ್ರೋಢಿಕರಿಸಿಕೊಂಡು ಒಟ್ಟಾಗಿ ಕೆಲಸಮಾಡಿದ್ದರ ಪೂರ್ಣಫಲವೇ ಈಗಿರುವ ಸುಂದರ ವ್ಯವಸ್ಥಿತ ಸಮುಚ್ಚಯ. ಇದು ನಿಜವಾಗಲು ಹವ್ಯಕ ಸಮಾಜಕ್ಕೊಂದು ದೊಡ್ಡ ಕೊಡುಗೆಯಾಗಿದೆ.

ವರ್ಷದಿಂದ ವರ್ಷಕ್ಕೆ ತನ್ನ ಕಾರ್ಯ ಕ್ಷೇತ್ರವನ್ನು ವಿಸ್ತರಿಸಿಕೊಳ್ಳುತ್ತ ಇಂದು ಮೂವತ್ತು ಸಾವಿರ ಸದಸ್ಯರನ್ನು ಹೊಂದಿ ಒಂದು ದೊಡ್ಡ ಸಂಸ್ಥೆಯಾಗಿ ಬೆಳೆಯುತ್ತಿರುವುದು ಶ್ಲಾಘನೀಯ ಸಂಗತಿ.

ಒಂದು ಕಾಲದಲ್ಲಿ ಬೆಂಗಳೂರಿನಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಬರುವ ವಿದ್ಯಾರ್ಥಿಗಳಿಗೆ ವಸತಿ ದೊಡ್ಡ ಸಮಸ್ಯೆಯಾಗಿ ಬೆಳೆಯುತ್ತಿತ್ತು, ಹಳ್ಳಿ ಮೂಲೆಗಳಿಂದ ವಿದ್ಯಾಭ್ಯಾಸಕ್ಕಾಗಿ ಬರುವ ವಿದ್ಯಾರ್ಥಿಗಳಿಗೆ ವಸತಿ ಸಮಸ್ಯೆ ಉಂಟಾಗಬಾರದೆನ್ನುವ ಘನ ಉದ್ದೇಶದಿಂದ ಹವ್ಯಕ ಬೆಂಗಳೂರಿನಲ್ಲಿ 2 ಹುಡುಗರ ಹಾಸ್ಟೆಲ್ ಹಾಗೂ ಒಂದು ಮಹಿಳಾ ಹಾಸ್ಟೆಲ್ ಪ್ರಾರಂಭವಾಯಿತು. ಪ್ರಾರಂಭದಲ್ಲಿ 28 ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿಕೊಟ್ಟ ಮಹಾಸಭೆ ಇಂದು 250 ಜನರಿಗೆ ವಸತಿ ಸೌಕರ್ಯ ಒದಗಿಸಿದೆ.

ಆರ್ಥಿಕ ಅನನುಕೂಲತೆ ಒಬ್ಬ ವಿದ್ಯಾರ್ಥಿಯ ಭವಿಷ್ಯವನ್ನು ಹಾಳು ಮಾಡಬಾರದು ಎನ್ನುವ ಉದ್ದೇಶದಿಂದ ವಿದ್ಯಾಪ್ರೋತ್ಸಾಹ ನಿಧಿಯನ್ನು ಸ್ಥಾಪಿಸಿ ವರ್ಷಕ್ಕೆ ಸುಮಾರು 10 ಲಕ್ಷ ರೂಗಳನ್ನು ನೀಡುತ್ತಿದೆ. ಆರ್ತನಿಧಿ, ಕೃಷಿ ನಿಧಿ ಹಾಗೂ ವೈದಿಕ ನಿಧಿಯನ್ನು ಸ್ಥಾಪಿಸಿ ಸಂಕಷ್ಟದಲ್ಲಿರುವ ಬಾಂಧವರಿಗೆ ಆರ್ಥಿಕ ಸಹಾಯ ನೀಡುತ್ತಿದೆ. ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸಮ್ಮಾನ, ಯುವ ವೇದಿಕೆ, ಸಾಂಸ್ಕೃತಿಕ ವೇದಿಕೆ, ಮಹಿಳಾ ವೇದಿಕೆ, ಕಲಾ ವೇದಿಕೆ, ಅಂತರ್ಜಾಲ, ಪ್ರತಿಬಿಂಬ, ವೈವಾಹಿಕ ಮಾಹಿತಿ, ಕೈಗಾರಿಕಾ ಮತ್ತು ಕೃಷಿ, ಹವ್ಯಕ ಜನಗಣತಿ, ವೈದ್ಯಕೀಯ ಹೀಗೆ ಹತ್ತು ಹಲವು ಸಮಿತಿಗಳು ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬದ್ಧತೆಯಿಂದ ಕಾರ್ಯನಿರ್ವಹಿಸುತ್ತಿವೆ. ಸುಮಾರು 7 ಸಾವಿರ ಉಪಯುಕ್ತ ಗ್ರಂಥಗಳನ್ನೊಳಗೊಂಡ ಹವ್ಯಕ ಗ್ರಂಥಾಲಯ ಓದುಗರಿಗೆ, ಸಂಶೋಧಕರಿಗೆ ಉತ್ತಮ ಮಾಹಿತಿ ಸಂಗ್ರಹಿಸಲು ಸಹಕಾರಿಯಾಗಿದೆ.

ಸಮ್ಮೇಳನಗಳು ಏಕತೆಯ ಪ್ರಜ್ಞೆಯನ್ನು ಮತ್ತು ಸಾಂಸ್ಕೃತಿಕ ಒಳನೋಟವನ್ನು ಹುಟ್ಟು ಹಾಕುತ್ತವೆ. ಒಂದು ಸಂಸ್ಥೆಯನ್ನು ಬೆಳೆಸಲೂ ಕಾರಣವಾಗುತ್ತವೆ. ಈ ಹಿನ್ನಲೆಯಲ್ಲಿ 9, 10 ಫೆಬ್ರವರಿ 1980 ರಲ್ಲಿ ಬೆಂಗಳೂರಿನಲ್ಲಿ ಮೊದಲ ಸಮ್ಮೇಳನ, 6, 7 ಫೆಬ್ರವರಿ 1982 ರಲ್ಲಿ ಸಾಗರದಲ್ಲಿ 2ನೇ ಸಮ್ಮೇಳನ, 3, 4 ಮಾರ್ಚ್ 1990 ರಲ್ಲಿ ಶಿರಸಿಯಲ್ಲಿ ಮಹಾಸಮ್ಮೇಳನ, 20,21 ಜೂನ್ 1993 ರಲ್ಲಿ ಬೆಂಗಳೂರಿನಲ್ಲಿ ಸುವರ್ಣ ಮಹೋತ್ಸವ ಮತ್ತು 5ನೇ ಸಮ್ಮೇಳನ, ಡಿಸೆಂಬರ್ 28, 29, 1996 ಪುತ್ತೂರಿನಲ್ಲಿ 6ನೇ ಸಮ್ಮೇಳನ ಹಾಗೂ ಮೊದಲ ವಿಶ್ವಹವ್ಯಕ ಸಮ್ಮೇಳನ ನಡೆಯಿತು. ಸುಳ್ಯದಲ್ಲಿ 2001 ರಲ್ಲಿ ಪ್ರಥಮ ಹವ್ಯಕ ಸಾಹಿತ್ಯ ಸಮ್ಮೇಳನ ಹಾಗೂ 2006 ರಲ್ಲಿ ಪ್ರಥಮ ಹವಿಗನ್ನಡ ಸಮ್ಮೇಳನ ಹೊನ್ನಾವರದಲ್ಲಿ ನಡೆಯಿತು. ಇತ್ತೀಚಿನ ದಿನಗಳಲ್ಲಿ ನಡೆದ ಹವ್ಯಕ ಮಾಧ್ಯಮ ಸಮ್ಮೇಳನ, ಹವ್ಯಕ ಯುವಜನೋತ್ಸವ, ಮಹಿಳಾ ಸಮ್ಮೇಳನ, ರಾಜ್ಯ ಮಟ್ಟದ ಚಿತ್ರಕಲಾ ಶಿಬಿರ, ಹವ್ಯಕ ವೈದಿಕರ ಸಮಾವೇಶ, ಹವ್ಯಕ ನ್ಯಾಯ ಸಮಾವೇಶ ಅಭೂತ ಪೂರ್ವ ಯಶಸ್ಸು ಕಂಡವು.

ಮೇಣ ರಾಮಕೃಷ್ಣ ಭಟ್ಟರಿಂದ ಹಿಡಿದು ಇವತ್ತಿನ ಡಾ. ಗಿರಧರ ಕಜೆಯವರೆಗಿನ ಅಧ್ಯಕ್ಷರು, ಉಪಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ನಿರ್ದೇಶಕರು, ಸಂಚಾಲಕರು, ಸದಸ್ಯರ ಶ್ರಮ ಅವರ ಯೋಜನೆ ಮತ್ತು ಯೋಚನೆಗಳು ಮಹಾಸಭೆಯ ಅಭಿವೃದ್ಧಿ ಪಥದಲ್ಲಿ ವಿಶೇಷ ಕೆಲಸ ಮಾಡಿದೆ.

ಇತ್ತೀಚಿನ ವರ್ಷಗಳಲ್ಲಿ ಡಾ. ಗಿರಿಧರ ಕಜೆಯವರ ಸೃಜನಾತ್ಮಕ ಯೋಜನೆಗಳು ನೆಲಸಂಸ್ಕೃತಿಯನ್ನು ಪೋಷಿಸಿ ಹೊಸ ಹೊಸ ಸಾಧ್ಯತೆಗಳನ್ನು ಹುಟ್ಟುಹಾಕುವ ಸೃಜನಶೀಲ ಕಾರ್ಯಕ್ರಮಗಳು ಹವ್ಯಕಕ್ಕೆ ಒಂದು ಹೊಸ ಆಯಾಮವನ್ನು ರೂಪಿಸಿದೆ.

**'ಸಂಸ್ಕಾರೋಹಿ ಗುಣಾಂತರಾಧನಂ"** ಎಂಬುದು ಪ್ರಾಚೀನ ಋಷಿಯ ವಾಕ್ಯ. ಸಂಸ್ಕಾರ ನೀಡಿ ಹಾವಿನ ವಿಷವನ್ನು ಶ್ರೇಷ್ಠ ಔಷಧವನ್ನಾಗಿಸಬಹುದು ಎನ್ನುವ ನೀತಿಯ ಜಾಡನ್ನು ಹಿಡಿದ ಮಹಾಸಭೆ ವೇದ, ಭಾಷೆ, ಗಾನ, ಕಲಾ, ಯೋಗ, ಪಾಕ, ಯಕ್ಷ, ಗೀತಾ, ಸಂಸ್ಕಾರಗಳಿಗೆ ಸಂಬಂಧಪಟ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಕಳಚಿ ಹೋಗುತ್ತಿರುವ ಸಂಸ್ಕೃತಿಗೆ ಕೊಂಡಿ ಬೆಸೆಯುವ ಕಾರ್ಯವನ್ನು ಮಹಾಸಭೆ ಸಮರ್ಥವಾಗಿ ಮಾಡಿದೆ.

ಮಹಾಸಭೆಯ ಒಂದು ಸಮರ್ಥ ಮಾಧ್ಯಮವಾದ 'ಹವ್ಯಕ ಪತ್ರಿಕೆ' ಸಮಾಜದ ಆಗುಹೋಗುಗಳ ಬಗ್ಗೆ ಸೂಕ್ಷ್ಮ ದೃಷ್ಟಿ ಬೀರಿ ಸಮುದಾಯಕ್ಕೆ ಸಮಾಚಾರವನ್ನು ತಿಳಿಸುವ ಕೆಲಸವನ್ನು ನಿರಂತರವಾಗಿ ಮಾಡುತ್ತಿದೆ. ಹವ್ಯಕದ ಮುಖವಾಣಿಯಾದ ಇದು 1966 ಜೂನ್ 1 ರಂದು ತ್ರೈಮಾಸಿಕವಾಗಿ ಪ್ರಾರಂಭವಾಯಿತು. ನಂತರ 1981 ಜನವರಿ 1 ರಿಂದ ಮಾಸಿಕವಾಗಿ ಪ್ರಾರಂಭವಾಯಿತು. 12 ಪುಟಗಳಿಂದ ಪ್ರಾರಂಭವಾದ ಪತ್ರಿಕೆ ಇಂದು 64 ಪುಟಗಳಷ್ಟಾಗಿ ವೈವಿಧ್ಯಮಯ ವಿಚಾರಗಳೊಂದಿಗೆ ಹವ್ಯಕದ ಅಭಿವೃದ್ಧಿ ಪಥದಲ್ಲಿ ಸಿಂಹಪಾಲನ್ನು ಪಡೆದುಕೊಂಡಿದೆ.

ವಜ್ರ ಮಹೋತ್ಸವ ಸಂದರ್ಭದಲ್ಲಿ ಹವ್ಯಕ ಅಧ್ಯಯನ ಕೇಂದ್ರ ಸ್ಥಾಪಿಸಿ ಅದರ ಮೂಲಕ ಹವ್ಯಕರ ಸಾಂಸ್ಕೃತಿಕ ಇತಿಹಾಸದ ರಚನೆಯತ್ತ ದಿಟ್ಟವಾದ ಹೆಜ್ಜೆ ಇಟ್ಟಿದೆ. ಅದಕ್ಕೆ ಪೂರಕವಾಗಿ ಈಗಾಗಲೇ ಸುಮಾರು 25 ಪುಸ್ತಕಗಳನ್ನು ಪ್ರಕಟಿಸಿದೆ. ಹಾಗೆಯೇ ಅಮೃತ ಮಹೋತ್ಸವ ಸಂದರ್ಭದಲ್ಲಿ 101 ಪುಸ್ತಕಗಳನ್ನು ಪ್ರಕಟ ಮಾಡಿರುವುದು ಇತಿಹಾಸದ ಒಂದು ಭಾಗವಾಗಿದೆ.

ಇವೆಲ್ಲಕ್ಕೂ ಕಿರೀಟ ಪ್ರಾಯವಾಗಿ ಹೊಯ್ಸಳ ಶೈಲಿಯ ಮೋದಕ ವರದ ಹಸ್ತ ಪಾಶಾಂಕುಶಧಾರಿಯಾದ ಕೃಷ್ಣಶಿಲೆಯ ಸುಮಾರು 25 ಇಂಚು ಎತ್ತರವಿರುವ ಶಿಲಾಮಯ ದೇವಾಲಯದಲ್ಲಿನ ಶ್ರೀ ಸಿದ್ಧಿ ವಿನಾಯಕನ ನಿಂತ ಮೂರ್ತಿ ಭಕ್ತರ ಪಾಲಿಗೆ ಶಕ್ತಿದೇವತೆಯಾಗಿದೆ.

ಒಟ್ಟಾರೆ ನಮ್ಮ ಅಪೂರ್ವ ಸಂಸ್ಕೃತಿಯ ಬಗ್ಗೆ ಸ್ವಾಭಿಮಾನ ಮೂಡಿಸುವ ದಿಶೆಯಲ್ಲಿ, ಸಾಂಸ್ಕೃತಿಕ ಮೌಲ್ಯವನ್ನು ಹರಡುವ, ಹವ್ಯಕತನವನ್ನು ಸಂರಕ್ಷಿಸುವ ಕೆಲಸದಲ್ಲಿ ಮಹಾಸಭೆ ತನ್ನನ್ನು ವಿಶೇಷವಾಗಿ ತೊಡಗಿಸಿಕೊಂಡಿರುವುದು ಭವಿಷ್ಯದ ಆಶಾಕಿರಣ ಗೋಚರಿಸದಂತಾಗಿದೆ.

Past in Glory present is gift of God, then only you can cherish the future with Glorious past. ಅಂದರೆ ಸಾರ್ಥಕ ವರ್ತಮಾನ ವನ್ನು ಸ್ಥಾಪಿಸಿದಾಗ ಮಾತ್ರ ನಾವು ಉತ್ತಮ ಇತಿಹಾಸ ಕಾರರಾಗುತ್ತೇವೆ ಎಂಬ ಮಾತಿಗೆ ಇಂದು ಸಮರ್ಥ ಉತ್ತರ ಸಿಕ್ಕಿದೆ.



ಶ್ರೀ ಸಿದ್ಧಿ ವಿನಾಯಕ ದೇವರು

ಋಷಿಗಳ ಸಂದೇಶ-3

# ಆಚಾರ್ಯೋಪದೇಶ

ಎಸ್. ಶ್ರೀಧರಮೂರ್ತಿ

ಆಷಾಢ ಮಾಸದ ಶುದ್ಧ ಪೂರ್ಣಿಮೆಯನ್ನು ಗುರು ಪೂರ್ಣಿಮಾ ಅಥವಾ ವ್ಯಾಸಪೂರ್ಣಿಮಾ ಎಂದು ಆಚರಿಸಲಾಗುತ್ತದೆ. ಜುಲೈ ತಿಂಗಳ 13ನೆ ತಾರೀಖಿನಂದು ಈ ವರ್ಷದ ಗುರುಪೂರ್ಣಿಮೆಯನ್ನು ಆಚರಿಸಲಾಗುತ್ತದೆ.

ನಾವೆಲ್ಲರೂ ನಮ್ಮ ಶಿಕ್ಷಾ ಗುರುಗಳನ್ನು ಮತ್ತು ದೀಕ್ಷಾಗುರುವನ್ನು ಸ್ಮರಿಸಿ ಅವರಿಗೆ ಗೌರವಯುತ ಪೂಜೆ ಸಲ್ಲಿಸುವ ಪವಿತ್ರ ದಿನ.

ಈ ಸಂಚಿಕೆಯಲ್ಲಿ ನಾವು ತೈತ್ತರೀಯ ಉಪನಿಷತ್ತಿನಲ್ಲಿ ಬರುವ "ಆಚಾರ್ಯೋಪದೇಶ" ದ ಮಂತ್ರಗಳ ಬಗ್ಗೆ ತಿಳಿಯೋಣ.

ಹಿಂದೆ ಗುರುಕುಲ ಪದ್ಧತಿಯತೆ ವಿದ್ಯಾರ್ಥಿಯು ಸುಮಾರು ಹನ್ನೆರಡು ವರ್ಷಗಳ ಕಾಲ ಗುರುಕುಲದಲ್ಲಿ ವಾಸವಿದ್ದು ಗುರು ಮತ್ತು ಗುರುಮಾತೆಯನ್ನು ಜನ್ಮದಾತರಂತೆ ಸೇವೆಗೈದು, ಗುರುವಿನಿಂದ ಎಲ್ಲಾ ವಿದ್ಯೆಗಳನ್ನು ಪಡೆದ ಮೇಲೆ ಗುರುವಿನ ಆದೇಶದಂತೆ ತನ್ನ ಸ್ವಗೃಹಕ್ಕೆ ಹಿಂತಿರುಗಿ ಸದ್ಗೃಹಸ್ಥನಾಗಿ ಬಾಳ್ವೆ ನಡೆಸುತ್ತಿದ್ದ. ಗುರುಗೃಹದಿಂದ ಹೊರಡುವ ಮೊದಲು "ಸ್ನಾತಕವ್ರತ" ಎಂದರೆ ಈ ವಿದ್ಯಾರ್ಥಿ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿದ್ದಾನೆ ಎಂದು ತಿಳಿಸಲು ಆಚರಿಸುವ ವಿಧಿ ವಿಧಾನ. ಈಗಿನ "ಸ್ನಾತಕ ಪದವಿ ವಿತರಣ" ಸಮಾರಂಭಕ್ಕೆ ಹೋಲಿಸಬಹುದೇನೋ!

ಈ ಸ್ನಾತಕ ವ್ರತದಲ್ಲಿ ವಿದ್ಯಾರ್ಥಿಗಳಿಗೆ ಗುರುವು ಕೆಲವು ನಿರ್ದಿಷ್ಟ ಆದೇಶಗಳನ್ನು ವಿಧಿಸುತ್ತಿದ್ದರು. ಈ ವಿದ್ಯಾರ್ಥಿಗಳು ಸಮಾಜಮುಖಿ ಗಳಾಗಿ ಜೀವನ ನಡೆಸುವಾಗ ಅವರ ಕರ್ತವ್ಯ, ಅವರ ಆಚರಣೆ, ಅವರು ಅನುಸರಿಸಬೇಕಾದ ವಿಧಿ ನಿಷೇಧಗಳನ್ನೆಲ್ಲಾ ಆದೇಶ ರೂಪದಲ್ಲಿ ನೀಡುತ್ತಿದ್ದರು. ಈ ಆದರ್ಶಗಳನ್ನು ಈ ವಿದ್ಯಾರ್ಥಿಗಳು ಶಿರಸಾವಹಿಸಿ ಅನುಸರಿಸುತ್ತಿದ್ದರು ಮತ್ತು ತನ್ಮೂಲಕ ಸಮಾಜದ ಸ್ವಾಸ್ಥ್ಯ ಮತ್ತು ಏಳ್ಗೆ ಸಹಜವಾಗಿ ಸಾಗುತ್ತಿತ್ತು.

ಶಾಸ್ತ್ರ ಎಂದೂ ಯಾರನ್ನೂ ದೈನ್ಯದಿಂದ ವಿನಂತಿಸುವುದಿಲ್ಲ. ಅದು ಆದೇಶಿಸುತ್ತದೆ. ಅದರ ಪಾಲನೆ ನಮ್ಮ ಕರ್ತವ್ಯ ಆಚಾರ್ಯರ ಆದೇಶ ವಚನಗಳು/ಮಂತ್ರಗಳು ಈ ರೀತಿ ಇವೆ.

**1. ಸತ್ಯವನ್ನೇ ನುಡಿಯಬೇಕು :**

ಎಷ್ಟೇ ಕಷ್ಟ ಮತ್ತು ಪರೀಕ್ಷಾ ಸಮಯ ಬಂದರೂ ಯಾವುದು ಸತ್ಯವೋ ಅದರಲ್ಲೇ ನೆಲಸಬೇಕು. ಸತ್ಯವಾಕ್ಯ ಪರಿಪಾಲನೆಯ ಅನೇಕ ನಿದರ್ಶನಗಳು ಪುರಾಣಗಳಲ್ಲಿ, ಶಾಸ್ತ್ರಗಳಲ್ಲಿವೆ ಮತ್ತು ಈಗಲೂ ಸತ್ಯನಿಷ್ಠರಾಗಿರುವವರನ್ನು ಕಾಣಬಹುದು. ಸತ್ಯವಚನ ಪಾಲನೆ ಆರೋಗ್ಯಕರ ಸಮಾಜದ ಬುನಾದಿ.

**2. ಧರ್ಮವನ್ನು ಅನುಷ್ಠಾನಗೊಳಿಸಬೇಕು :**

ಧರ್ಮ ಎಂಬುದು ಬರೀ ಮಾತಾಗದೆ ಅನುಷ್ಠಾನ ಪರವಾಗಿರಬೇಕು ಎಂದರೆ ಆಚರಿಸಿ ತೋರಿಸಬೇಕು. ಸಮಾಜದಲ್ಲಿ ನಮ್ಮ ಆಶ್ರಮ ಧರ್ಮದಂತೆ ಆಚರಿಸಬೇಕು.

ವಿದ್ಯಾರ್ಥಿ ಧರ್ಮ – ಬ್ರಹ್ಮಚರ್ಯ ಆಶ್ರಮ

ಗೃಹಸ್ಥ ಧರ್ಮ ಗೃಹಸ್ಥಾಶ್ರಮ

ವಾನಪ್ರಸ್ಥ ಧರ್ಮ – ವಾನಪ್ರಸ್ಥ ಆಶ್ರಮ

ಸನ್ಯಾಸ ಧರ್ಮ – ಸನ್ಯಾಸ ಆಶ್ರಮ

ಆಯಾ ಆಶ್ರಮಕ್ಕೆ ತಕ್ಕಂತೆ ಧರ್ಮವನ್ನು ಶಾಸ್ತ್ರ ಯಾವುದನ್ನು ಸೂತ್ರರೂಪದಲ್ಲಿ ವಿಧಿಸಿದೆಯೋ ಅದನ್ನು ಆಚರಿಸಿ ತನ್ಮೂಲಕ ಮುಂದಿನ ಪೀಳಿಗೆಗೆ ದಾರಿದೀಪವಾಗಬೇಕು.

**3. ಸ್ವಾಧ್ಯಾಯವನ್ನು ಬಿಡಬಾರದು :**

ಒಮ್ಮೆ ಗುರುಕುಲದಿಂದ ಹಿಂತಿರುಗಿದ ನಂತರ ಅಧ್ಯಯನವೆಲ್ಲಾ ಮುಗಿಯಿತು ಎಂಬ ಮನಸ್ಥಿತಿ ಇರಬಾರದು. ಅಧ್ಯಯನ ಮಾಡಿದ್ದನ್ನು ಪುನಃ ಪುನಃ ಅಭ್ಯಸಿಸಬೇಕು ಮತ್ತು ಜ್ಞಾನವನ್ನು ಉತ್ತಮಗೊಳಿಸುತ್ತಲೇ ಇರಬೇಕು. (Updating Knowledge) ಸ್ವಾಧ್ಯಾಯಕ್ಕೆ ಮತ್ತೊಂದು ಅರ್ಥ, ತಮ್ಮನ್ನು ತಾವು ಅಧ್ಯಾಯಿಸಿಕೊಳ್ಳುವುದು ಎಂದರೆ, ತನ್ನನ್ನು ತಾನೇ ಪರೀಕ್ಷಿಸಿ ನಾನು ಮನುಜನಾಗುತ್ತಿರುವೆನೋ ಅಥವಾ ಇನ್ನೂ ಪ್ರಾಣಿ ಮನಸ್ಥಿತಿಯಲ್ಲೇ ಇದ್ದೇನೆಯೋ ಎಂದು ಪರಾಮರ್ಶಿಸುವುದು. ತನ್ಮೂಲಕ ತನ್ನ ಸ್ವಸ್ವರೂಪ ಅಂದರೆ ತಾನು ಚೇತನ ಸ್ವರೂಪ, ಜಡ ದೇಹ, ಮನಸ್ಸಲ್ಲ ಎಂದು ತಿಳಿದು ತನ್ನೊಳಗೆ ತಾನು ಅರಿಯವುದು. ಈ ಸ್ವ ಅಧ್ಯಯನವನ್ನು ಎಂದೂ ಬಿಡಬಾರದು.

**4. ಆಚಾರ್ಯರಿಗೆ ದಕ್ಷಿಣೆ ಅಥವಾ ಕಾಣಿಕೆಯನ್ನು ಸಲ್ಲಿಸುವುದು:**

ಆಚಾರ್ಯರಿಗೆ ನಾವು ನಮ್ಮ ಶಕ್ತ್ಯಾನುಸಾರ ದಕ್ಷಿಣೆ ಸಲ್ಲಿಸಬೇಕು ಅಥವಾ ಅವರ ಗುರುಕುಲದ ಅವಶ್ಯಕತೆಗೆ ತಕ್ಕಂತೆ ಯಾವುದೇ ತರಹದ ಸಹಾಯಹಸ್ತದ ಸೇವೆ ಸಲ್ಲಿಸಬೇಕು. ಮುಂದಿನ ಪೀಳಿಗೆಯ ವಿದ್ಯಾರ್ಥಿಗಳಿಗೆ ಗುರುಕುಲದಲ್ಲಿ ಎಲ್ಲ ರೀತಿಯ ಅನುಕೂಲತೆಗಳನ್ನು ನೀಡಲು ಇದು ಸಹಾಯವಾಗುತ್ತವೆ. ಗುರುಕುಲವು ಸುಸ್ಥಿತಿಯಿಂದ ಇದ್ದಲ್ಲಿ ಮಾತ್ರ ಗುರು ತದೇಕ ಚಿತ್ತದಿಂದ ಪಾಠಪ್ರವಚನ ಮಾಡಲು ಸಾಧ್ಯ.

**5. ಸತ್ ಸಂತತಿಯನ್ನು ವೃದ್ಧಿಗೊಳಿಸಬೇಕು :**

ಇಲ್ಲಿ ವಂಶಾಭಿವೃದ್ಧಿಯ ಬಗ್ಗೆ ಗುರು ಆದೇಶಿಸಿದ್ದಾನೆ. ವಿದ್ಯಾಭ್ಯಾಸ ಮುಗಿಸಿ ಸ್ವಗೃಹಕ್ಕೆ ಹಿಂದಿರುಗಿ ಗೃಹಸ್ಥನಾಗಬೇಕು, ಎಂದರೆ ಗೃಹ್ಯಸೂತ್ರಗಳ ಧರ್ಮದಂತೆ ವಿವಾಹಿತನಾಗಿ ಸಂತತಿ ವೃದ್ಧಿಗೊಳಿಸಬೇಕು. ಹಾಗಾದಾಗ ಮಾತ್ರ ಧರ್ಮ ಅವಿಚ್ಛಿನ್ನವಾಗಿ ಮುಂದುವರಿಯುತ್ತದೆ. ಆ ವಿದ್ಯಾರ್ಥಿ ತೀವ್ರ ವೈರಾಗ್ಯವಂತನಾಗಿದ್ದರೆ ಆತ ಸನ್ಯಾಸಾಶ್ರಮವನ್ನು ಸ್ವೀಕರಿಸಿ ವಿರಕ್ತನಾಗಿ ಗೃಹ ತ್ಯಜಿಸಬಹುದಿತ್ತು.

**6. ಸತ್ಯವನ್ನು ಬಿಡಬಾರದು :**

ಸತ್ಯವಚನದ ಪ್ರಾಮುಖ್ಯತೆಯನ್ನು ತಿಳಿಸಲು ಗುರುವು ಮತ್ತೆ ಹೇಳುತ್ತಿದ್ದಾನೆ ಯಾವುದೇ ಸಂದರ್ಭದಲ್ಲೂ ಸತ್ಯಪಾಲನೆಯಿಂದ ವಿಮುಖನಾಗಬೇಡ ಎಂದು.

**7. ಧರ್ಮವನ್ನು ಬಿಡಬೇಡ :**

ಸತ್ಯ ಮತ್ತು ಧರ್ಮ ಒಂದನ್ನೊಂದು ನೆರಳಿನಂತೆ ಹಿಂಬಾಲಿಸುತ್ತವೆ. ಧರ್ಮ ಬರಿ ಮಾತಾಗದೇ ಅನುಷ್ಠಾನ ಪರವಾಗಿರಬೇಕೆಂದು ಗುರು ಮತ್ತೆ ಮತ್ತೆ ನೆನಪಿಸುತ್ತಿದ್ದಾನೆ.

**8. ಕುಶಲವಾದುದನ್ನು ಎಂದೂ ಬಿಡಬೇಡ :**

ಯಾವ ಕಾರ್ಯಗಳಿಂದ ಜಗತ್ ಹಿತ ಉಂಟಾಗುವುದೋ ಅವುಗಳನ್ನು ಬಿಡಬೇಡ. ಎಷ್ಟೇ ವಿಘ್ನಗಳು ಬಂದರೂ ಈ ಪರಹಿತ ಕಾರ್ಯವನ್ನು ಬಿಡಬಾರದು.

**9. ಮಂಗಳಕರವಾದ ಕಾರ್ಯಗಳನ್ನು ಬಿಡಬೇಡ :**

ಯಾವುದು ಶುಭವೋ, ಮಂಗಳವೋ ಅಂಥ ಕಾರ್ಯಗಳನ್ನು ಎಂದೂ ಆಚರಿಸುವುದನ್ನು ಬಿಡಬೇಡ. ಅದರಿಂದ ಬಹುಜನ ಸುಖ ಮತ್ತ ಬಹು ಜನಹಿತ ನೆರವೇರುತ್ತದೆ.

**10. ಸ್ವಾಧ್ಯಾಯ ಮತ್ತು ಪ್ರವಚನವನ್ನು ಬಿಡಬಾರದು :**

ನಾವು ಗುರುಗಳಿಂದ ಕಲಿತ ವಿದ್ಯೆಯನ್ನು ಪುನಃ ಪುನಃ ಆವರ್ತಿಸಿ ನಮ್ಮದಾಗಿಸಿಕೊಳ್ಳಬೇಕು ಮತ್ತು ನಾವು ಅರ್ಜಿಸಿದ ಜ್ಞಾನವನ್ನ ಪಾತ್ರರಿಗೆ ಹಂಚಬೇಕು. ಇದು ಜ್ಞಾನಯಜ್ಞವೆನಿಸುತ್ತದೆ. ಹೀಗೆ ಯಜ್ಞ ಮಾಡುವುದರಿಂದ ನಮ್ಮ ವಿದ್ಯೆಯು ವೀರ್ಯವತ್ತಾಗುತ್ತದೆ ಮತ್ತು ನಮ್ಮಲ್ಲಿ ಕೃತಕೃತ್ಯಭಾವ ಮೂಡುತ್ತದೆ.

**11.ದೇವತೆಗಳ ಮತ್ತು ಪಿತೃಕಾರ್ಯಗಳನ್ನು ಬಿಡಬಾರದು :**

ಸಾಮಾನ್ಯವಾಗಿ ಮನೆಗಳಲ್ಲಿ ಮಂಗಳ ಕಾರ್ಯ ಮಾಡುವಾಗ ಮೊದಲು 'ನಾಂದಿ' ಎಂಬ ಪೂಜಾ ಕೈಂಕರ್ಯ ನಡೆಯುತ್ತದೆ. ದೇವತೆಗಳನ್ನು ಮತ್ತು ಪಿತೃಗಳನ್ನು ಸಂತೋಷಪಡಿಸುವುದೇ ನಾಂದಿ ಪೂಜೆಯ ಉದ್ದೇಶ.

ದೇವತೆಗಳ ಕೃಪೆಯಿಂದ ನಮಗೆ ನರಜನ್ಮ ಬಂದಿದೆ ಮತ್ತು ಜನ್ಮ ಬರುವುದಕ್ಕೆ ಮೊದಲೇ ನಮಗೆ ಬೇಕಾದ ಎಲ್ಲಾ ಅವಶ್ಯಕತೆಗಳನ್ನು ದೇವತೆಗಳು ಸೃಷ್ಟಿಸಿದ್ದಾರೆ. ನಮ್ಮ ಉಸಿರಾಟದಿಂದ ಹಿಡಿದು ಎಲ್ಲವೂ ದೈವಾಧೀನ. ನಾವು ಈ ಋಣವನ್ನು ಶಾಸ್ತ್ರ ರೀತಿ ದೇವತೆಗಳನ್ನು ಪೂಜಿಸುವ ಮೂಲಕ, ಯಾಜಿಸುವುದರ ಮೂಲಕ ತೀರಿಸಬೇಕು ಎಂದು ಗುರು ಕೃತಜ್ಞತಾರೂಪದ ಈ ಆದೇಶ ನೀಡಿದ್ದಾನೆ.

**ಅಂತೆಯೇ ನಮ್ಮ ಪಿತೃಗಳು:–**

ನಮ್ಮ ಹುಟ್ಟಿಗೆ ಮತ್ತು ನಾವು ಮೈಗೂಡಿಸಿಕೊಂಡಿರುವ ಉನ್ನತ ಸಂಸ್ಕಾರಗಳಿಗೆ ನಮ್ಮ ಪೂರ್ವಜರೇ ಕಾರಣರು. ನಾವು ಜೀವಂತ ಹಿರೀಕರಿಗೆ ಸೇವಾದಿ ಆದರ ತೋರಿ, ಗತಿಸಿದ ಪಿತೃಗಳನ್ನು ಶಾಸ್ತ್ರ ರೀತಿ ಪೂಜಿಸಿ ನೆನಪಿಸಿಕೊಳ್ಳಬೇಕು. ಇದು ನಾವು ಅವರಿಗೆ ಸಲ್ಲಿಸುವ ಕೃತಜ್ಞತೆ. ಇದು ಒಂದು ಸತ್‌ಸಂಪ್ರದಾಯ.

**12. ತಾಯಿಯನ್ನು, ತಂದೆಯನ್ನು ದೇವರಂತೆ ಪೂಜಿಸಿ :**

ತಾಯಿತಂದೆಯರ ಹಿರಿಮೆಯ ಬಗ್ಗೆ ಪ್ರತ್ಯೇಕವಾಗಿ ವಿವರಿಸಬೇಕಿಲ್ಲ. ತಾಯಿ ತನ್ನ ಪ್ರಾಣವನ್ನೇ ಒತ್ತೆ ಇಟ್ಟು ನಮ್ಮನ್ನು ಹೆರುತ್ತಾಳೆ. ಅನೇಕ ಕಷ್ಟಕೋಟಲೆಗಳ ನಡುವೆ ತನ್ನೆಲ್ಲಾ ಕಷ್ಟಗಳನ್ನು ಬದಿಗೊತ್ತಿ ನಮ್ಮನ್ನು ಸಾಕಿ ತನ್ನ ಕರುಳುಬಳ್ಳಿಯ ಏಳಿಗೆಗಾಗಿ ತನ್ನ ಜೀವನವನ್ನೇ ಮುಡುಪಾಗಿಡುತ್ತಾಳೆ. ಇನ್ನು ತಂದೆಯಾದರೋ ವಾತ್ಸಲ್ಯದಿಂದ ಆದರಿಸಿ ನಮ್ಮನ್ನು ಪ್ರೀತಿಯಿಂದ ದಂಡಿಸಿ ಸಂಸ್ಕಾರ ನೀಡುತ್ತಾನೆ.

ಈ ತಾಯಿ ತಂದೆಯರನ್ನು ನಾವು ಪೂಜ್ಯ ಭಾವನೆಯಿಂದ ಕಂಡು ಪ್ರತ್ಯಕ್ಷ ದೇವತಾ ಸ್ವರೂಪಿಗಳೆಂದು ತಿಳಿದು, ಗೌರವಿಸಬೇಕು.

**13.ವಿದ್ಯೆ ಕಲಿಸಿದ ಗುರುಗಳನ್ನು ದೇವರೆಂದು ಕಾಣಬೇಕು:**

ಒಂದು ಅಕ್ಷರವನ್ನು ಕಲಿಸಿದಾತನೂ ಗುರು ಎಂದು ಭಾವಿಸಬೇಕೆಂಬುದು ಶಾಸ್ತ್ರ ಸಮ್ಮತ. ನಮ್ಮ ಜೀವಿತ ಅವಧಿಯಲ್ಲಿ ಒಬ್ಬೊಬ್ಬರಿಂದ ಒಂದೊಂದು ವಿಷಯ ಕಲಿತಿರುತ್ತೇವೆ. ಈ ಎಲ್ಲ ಶಿಕ್ಷಾಗುರುಗಳನ್ನೂ ದೇವಸ್ವರೂಪರೆಂದು ತಿಳಿದು ಪೂಜ್ಯ ಭಾವದಿಂದಿರಬೇಕು. ಇದು ಒಂದು ವಿನೀತ ಕೃತಜ್ಞಾತಾಭಾವ.

**14.ಅತಿಥಿಯನ್ನು ದೇವರೆಂದು ಕಾಣಬೇಕು:**

ಹಿಂದೂ ಜೀವನ ಪದ್ಧತಿಯಲ್ಲಿ ಅತಿಥಿಗೆ ಪ್ರಮುಖ ಸ್ಥಾನವಿದೆ. ಆ ಭಗವಂತನೇ ಅತಿಥಿ ರೂಪದಲ್ಲಿ ಬರಬಹುದು. ಅದರಿಂದ ಅತಿಥಿಯನ್ನು ಆದರಿಸಬೇಕು.

ತಿಥಿ, ವಾರ, ನಕ್ಷತ್ರಗಳನ್ನು ನೋಡಿ ಬರುವವರು ಅಭ್ಯಾಗತರು. ಆಕಸ್ಮಿಕವಾಗಿ ನಮ್ಮಲ್ಲಿಗೆ ಬರುವವರು ಅತಿಥಿಗಳು. (ಅತಿಥಿ=ನ+ ತಿಥಿ)

ಭಗವಂತನೇ ಈ ರೀತಿಯಲ್ಲಿ ಬಂದಿದ್ದಾನೆಂದು ಗ್ರಹಿಸಿ ಅವರನ್ನು ಕಾಯಾ, ವಾಚಾ, ಮನಸಾ ಸೇವಿಸಿ ತೃಪ್ತಿಪಡಿಸಬೇಕು.

ಅತಿಥಿಗಳು ಸಂತುಷ್ಟರಾಗಿ ಆಶೀರ್ವದಿಸಿದರೆ ಅದು ನಮ್ಮ ಕುಲಕ್ಕೆ ಮಂಗಳ.

**15. ಶಾಸ್ತ್ರ ವಿಧಿಸಿದ ಸತ್ಕರ್ಮಗಳನ್ನು ಮಾತ್ರ ಮಾಡಬೇಕು. ಅನ್ಯ ಕರ್ಮಗಳನ್ನು ಮಾಡಬಾರದು:**

ಯಾವ ಕರ್ಮಗಳು ಸರ್ವಭೂತಗಳ ಹಿತವೋ ಅವುಗಳನ್ನು ಮಾತ್ರ ಮಾಡಬೇಕು. ಯಾವ ಕೆಲಸಗಳಿಂದ ಬಹು ಜನರ ಹಿತಾಸಕ್ತಿಗೆ ಧಕ್ಕೆಯಾಗುವುದೋ ಅವುಗಳನ್ನು ಮಾಡಬಾರದು. ಯಾವುದು ಶಾಸ್ತ್ರ ಸಮ್ಮತವೋ, ಸಮಷ್ಠಿ ಪ್ರಜ್ಞೆಯಲ್ಲಿ ಪೂಜನೀಯವೋ ಅವುಗಳನ್ನು ಮಾತ್ರ ಮಾಡಬೇಕು. ಸ್ವಾರ್ಥ ಪರತೆಯಿಂದ ಅನ್ಯರಿಗೆ ದುಃಖ ಉಂಟುಮಾಡುವ ಕಾರ್ಯವನ್ನು ಎಂದೂ ಮಾಡಬಾರದು.

**ಮುಂದುವರೆಯುವುದು**

॥ ಶುಭಮಸ್ತು ॥

# ತಿಂಗಳ ರಾಶಿ ಫಲ

–ಜ್ಯೋತಿಷಿ ವಿ॥ ಮುದ್ರಾಡಿ ವಾಸುದೇವ ಭಟ್

**ವಿ.ಸೂ:** ಪ್ರತಿಯೊಬ್ಬರಿಗೂ ಅವರವರ ಜನ್ಮನಕ್ಷತ್ರದಿಂದ 2, 4, 6, 11, 13, 15, 20, 22, 24ನೇ ನಕ್ಷತ್ರಗಳು ಅನುಕೂಲವಾಗಿರುತ್ತವೆ. ಹಾಗೆಯೇ 3, 5, 7, 12, 14, 16, 25 ಮತ್ತು 27ನೇ ನಕ್ಷತ್ರಗಳು ಪ್ರತಿಕೂಲವಾಗಿರುತ್ತವೆ. ಅನುಕೂಲ ನಕ್ಷತ್ರಗಳಂದು ಏನಾದರೂ ಅಗತ್ಯ ಆಗಲೇಬೇಕೆಂಬ ಕಾರ್ಯಗಳನ್ನು ಮಾಡಿದಲ್ಲಿ ಇಷ್ಟಾರ್ಥ ಸಿದ್ಧಿಸುವುದು. ಪ್ರತಿಕೂಲ ನಕ್ಷತ್ರಗಳು ಮಾಡಿದ ಕಾರ್ಯಕಲಾಪಗಳು ಪ್ರತಿಕೂಲ ಫಲವನ್ನು ಉಂಟುಮಾಡುತ್ತವೆ. ಆದ್ದರಿಂದ ಈ ನಕ್ಷತ್ರ ಗಳನ್ನು ಬಿಡುವುದುತ್ತಮ.



**ಮೇಷ ರಾಶಿ** : ಜನ್ಮರಾಶಿಯಲ್ಲಿರುವ ಕುಜ ರಾಹುಗಳಿಂದ, ವ್ಯಯದಲ್ಲಿರುವ ಗುರುವಿನಿಂದ ಆಕಸ್ಮಿಕ ಅನಾರೋಗ್ಯ, ಮಾನಸಿಕ ಹಿಂಸೆ, ಶತ್ರುಗಳ ಕಾಟ, ವ್ಯರ್ಥ ತಿರುಗಾಟ ಉಂಟಾಗಬಹುದು. ಆದರೂ ರವಿ, ಬುಧ, ಶುಕ್ರರು ಅನುಕೂಲ ಸ್ಥಾನದಲ್ಲಿರುವುದರಿಂದ ತಿಂಗಳಾಂತ್ಯದಲ್ಲಿ ಆರೋಗ್ಯ, ಆರ್ಥಿಕಾನುಕೂಲ, ಮಾನಸಿಕ ನೆಮ್ಮದಿ ಉಂಟಾಗಲಿರುವುದು. ಸುಬ್ರಹ್ಮಣ್ಯ ಆರಾಧನೆಯಿಂದ ಇಷ್ಟಾರ್ಥ ಸಿದ್ಧಿಸುವುದು.



**ವೃಷಭ** : ಗುರುಬಲವಿದೆ. ಆದ್ದರಿಂದ ತಾತ್ಕಾಲಿಕ ವಾದಂತಹ ತಾಪತ್ರಯಗಳಿಗೆ ಹೆದರಬೇಕಾಗಿಲ್ಲ. ಆರೋಗ್ಯ, ಖರ್ಚು ವೆಚ್ಚಗಳ ಬಗ್ಗೆ ಜಾಗ್ರತೆ ಇರುವುದುತ್ತಮ. ತಿಂಗಳಾಂತ್ಯ ದವರೆಗೆ ರವಿಯು ಮತ್ತು ಶನಿಗಳು ಅನುಕೂಲ ಸ್ಥಾನವನ್ನು ಹೊಂದಿ ಆಯುರಾರೋಗ್ಯ ಭಾಗ್ಯವನ್ನು ಅನುಗ್ರಹಿಸುವರು.



**ಮಿಥುನ** : ಕಾಲಿಗೆ ಚಕ್ರ ಕಟ್ಟಿಕೊಂಡು ತಿರುಗಾಟ ಮಾಡುವ ಸಂದರ್ಭ ಬಂದೀತು. ತಿರುಗಾಟದಿಂದ ಆಯಾಸ, ಆರ್ಥಿಕ ತೊಂದರೆ, ಮಾನಸಿಕ ಕಿರಿಕಿರಿ, ಇಷ್ಟ ಜನರಿಂದ ದೂರವಾಗಬಹುದು. ಸಮಾಜದಿಂದ ಗೌರವ ಸಿಗಲಿರುವುದು. ವಿಷ್ಣು ಆರಾಧನೆಯಿಂದ ಇಷ್ಟಾರ್ಥ ಸಿದ್ಧಿಸುವುದು.



**ಕರ್ಕಾಟಕ** : 'ಸರ್ವಂ ವಿಹಾಯ ಭಾಗ್ಯಂ ವಿಚಿಂತಯೇತ್' ಆಯುರಾರೋಗ್ಯ ಭಾಗ್ಯ, ಧನಕನಕ ಪುತ್ರ ಪೌತ್ರಾದಿಗಳಿಂದ ಸುಖ ಸಂತೋಷ ಉಂಟಾಗಲಿರುವುದು. ಮನೆಯಲ್ಲಿ ಮಂಗಲ ಕಾರ್ಯಾದಿಗಳು ನಡೆಯಲಿರುವುದು. ಸಮಾಜದಲ್ಲಿ ಸ್ಥಾನ ಮಾನ, ಸರಕಾರದಿಂದ ಸಹಾಯ ವ್ಯವಹಾರದಲ್ಲಿ ಜಯ ಉಂಟಾಗಲಿರುವುದು.



**ಸಿಂಹರಾಶಿ** : ಗುರು ಪ್ರತಿಕೂಲನಾಗಿದ್ದಾನೆ. ಇದರಿಂದಾಗಿ ಎಣಿಸಿದ ಕಾರ್ಯಕಲಾಪಗಳು ಎಣಿಸಿದಂತೆ ನಡೆಯಲಾರದು. ಇದರಿಂದ ಮಾನಸಿಕ ಕಿರಿಕಿರಿ. ಒಟ್ಟಾರೆ ವ್ಯರ್ಥ ತಿರುಗಾಟ. ಆರೋಗ್ಯದಲ್ಲಿ ಏರುಪೇರು, ಆರ್ಥಿಕ ತೊಂದರೆ, ಮನೆಯಲ್ಲಿ ಅಶಾಂತಿಯ ವಾತಾವರಣ. ಧೈರ್ಯಂ ಸರ್ವತ್ರ ಸಾಧನಂ. ಧೈರ್ಯದಿಂದ ಇರಿ. ಸೂರ್ಯಾರಾಧನೆಯನ್ನು ಮಾಡಿರಿ, ಇಷ್ಟಾರ್ಥ ಸಿದ್ಧಿಸುವುದು.



**ಕನ್ಯಾರಾಶಿ** :'ಕನ್ಯಾವರಯತೇ ರೂಪಂ' ಕನ್ಯೆಯರಿದ್ದರೆ ವಿವಾಹಭಾಗ್ಯ ಉಂಟಾಗಲಿರುವುದು. ಮನೆಯಲ್ಲಿ ಮಂಗಲ ವಾದ್ಯ ಮೊಳಗಲಿರುವುದು. ಆ ರೀತಿಯಲ್ಲಿ ನೆಮ್ಮದಿ ಉಂಟಾಗ ಲಿರುವುದು. ಇದರಿಂದಾಗಿ ಓಡಾಟ. ವಿಪರೀತ ಖರ್ಚು ವೆಚ್ಚ ಗಳು. ಆರೋಗ್ಯದ ಬಗ್ಗೆ ಜಾಗ್ರತೆ ಇರುವುದತ್ತಮ. ಹಿಂದಿನಿಂದ ಹಿತಶತ್ರುಗಳ ಬಗ್ಗೆಯೂ ಜಾಗ್ರತೆ ಇರಬೇಕು. ಪಂಚಮ ಶನಿ, ಅಷ್ಟಮದಲ್ಲಿ ಅಂಗಾರಕ. ಹೀಗಾಗಿ ಇದ್ದಕ್ಕಿದ್ದಂತೆ ವ್ಯವಹಾರಗಳು ನಿಂತುಹೋಗುವ ಸಾಧ್ಯತೆ ಗಳಿರುವುದು. ವಿಷ್ಣು ಸಹಸ್ರನಾಮದಿಂದ ಇಷ್ಟಾರ್ಥ ಸಿದ್ಧಿಸುವುದು.



**ತುಲಾ ರಾಶಿ:** ಇದು ನಿಜವೋ. ಅದು ನಿಜವೋ. ಒಂದೆಡೆ ಸುಖ. ಇನ್ನೊಂದೆಡೆ ದುಃಖ. ಎಲ್ಲವೂ ಅಯೋಮಯ. ಸಾಲದಿದ್ದದ್ದಕ್ಕೆ ತಿರುಗಾಟ. ಮನೆಯಲ್ಲಿ ಮನಸ್ತಾಪ. ಮಿತ್ರರೂ ದೂರಾಗಬಹುದು. ಆರೋಗ್ಯ ಸಮಸ್ಯೆ ಉಂಟಾಗಬಹುದು. ಸಮಾಜದಿಂದಲೂ, ರಾಜಕೀಯದಿಂದಲೂ ಪ್ರತಿಕೂಲ ವಾತಾವರಣ. ವಿಪರೀತ ಖರ್ಚು. ವ್ಯವಹಾರದಲ್ಲಿ ಹಿಮ್ಮುಖವಾಗಬಹುದು. ದೇವೀ ಆರಾಧನೆಯಿಂದ ಇಷ್ಟಾರ್ಥ ಸಿದ್ಧಿಸುವುದು.



**ವೃಶ್ಚಿಕ ರಾಶಿ** :ತತ್ಕಾಲ ಎಲ್ಲ ಗ್ರಹವೂ ಅನುಕೂಲ ಸ್ಥಾನದಲ್ಲಿ ಇರುವುದು. ಮನೆಯಲ್ಲಿ ನೆಮ್ಮದಿ, ಶಾಂತಿ, ಸಮೃದ್ಧಿ ಉಂಟಾಗಲಿರುವುದು. ಕೈಗೊಂಡ ಕಾರ್ಯಕಲಾಪಗಳು ಸಮಾಪ್ತ ವಾಗಲಿರುವುದು. ರಾಜಕೀಯದವರಿಗೂ ವ್ಯವಹಾರಿಗಳಿಗೂ, ವಿದ್ಯಾರ್ಥಿಗಳಿಗೂ ಅವರವರ ಇಷ್ಟಾರ್ಥ ನೆರವೇರಲಿರುವುದು.



**ಧನುರಾಶಿ** : ಆರಂಭದಲ್ಲಿ ಸುಖ, ಶಾಂತಿ, ನೆಮ್ಮದಿ ಗಳಿರುವುದು. ಸಕಾಲದಲ್ಲಿ ಮಿತ್ರರಿಂದ ಸಹಾಯ, ವ್ಯವಹಾರ ದಲ್ಲಿ ಅನುಕೂಲ, ಸಮಾಜದಲ್ಲಿ ಗೌರವ, ಆರ್ಥಿಕ ಅನುಕೂಲ ಗಳು ಇರುವುದು. ತಿಂಗಳಾಂತ್ಯದಲ್ಲಿ ರವಿ, ಶನಿಗಳ ಸ್ಥಾನಪಲ್ಲಟ ದಿಂದಾಗಿ ಗಾಡಿ ಹಿಮ್ಮುಕ ತಿರುಗಬಹುದು. ಆರೋಗ್ಯ, ಅಶಾಂತಿ, ಆರ್ಥಿಕ ತೊಂದರೆಗಳಾಗಬಹುದು. ಇದರಿಂದಾಗಿ ಮನೆಯಲ್ಲಿಮನಸ್ತಾಪ ಉಂಟಾಗಬಹುದು. ಈಶ್ವರ ಆರಾಧನೆಯಿಂದ ಇಷ್ಟಾರ್ಥ ಸಿದ್ಧಿಸುವುದು.



**ಮಕರ ರಾಶಿ** ತಿಂಗಳಾರಂಭ ಶುಭಾರಂಭವಾಗಿರುತ್ತದೆ. ಹೀಗಾಗಿ ಆಯುರಾರೋಗ್ಯಭಾಗ್ಯ ಮಾನಸಿಕ ನೆಮ್ಮದಿ, ಇಷ್ಟ ಮಿತ್ರರ ದರ್ಶನ, ಸಹಾಯ, ಸಮಾಜದಲ್ಲಿ ಗೌರವ, ದೇಶ, ವಿದೇಶಗಳಿಂದ ಅನುಕೂಲ, ವಿದ್ಯಾರ್ಥಿಗಳಿಗೂ, ವ್ಯವಹಾರಸ್ಥ ರಿಗೂ ಇಷ್ಟ ಸಿದ್ಧಿ ಉಂಟಾಗಲಿರುವುದು. ತಿಂಗಳಾಂತ್ಯದಲ್ಲಿ ರವಿ ಶನಿಗಳ ಸ್ಥಾನಪಲ್ಲಟವಿದ್ದರೂ ಅದು ಸ್ವಂತ ಮನೆ, ಮಿತ್ರರ ರಾಶಿ ಆದುದರಿಂದ ಅನುಕೂಲೇ ಜಗನ್ನಾಥೇ ಎಂಬಂತೆ ಅನುಕೂಲ ಆಗಲಿರುವುದು.



**ಕುಂಭ ರಾಶಿ:** ಗುರುಬಲ ಚೆನ್ನಾಗಿದೆ. ಆದ್ದರಿಂದ ಭಾಗ್ಯವೃದ್ಧಿ ಯಾಗಲಿರುವುದು. ಅದೃಷ್ಟ ಚೆನ್ನಾಗಿದ್ದರೆ ಉಳಿದದ್ದೆಲಲವೂ ಇಂಜಿನಿನ ಹಿಂದೆ ಬೋಗಿಗಳು ಬರುವಂತೆ ಆಯುರಾರೋಗ್ಯ ಐಶ್ವರ್ಯ, ಸ್ಥಾನ ಮಾನ, ಇಷ್ಟ ಜನರ ದರ್ಶನ, ಅವರಿಂದ ಅನುಕೂಲ, ಸಮಾಜದಲ್ಲಿ ಗೌರವ, ವ್ಯವಹಾರಸ್ಥರಿಗೆ ಇಷ್ಟಾರ್ಥ ಸಿದ್ಧಿಸುವುದು, ವಿದ್ಯಾರ್ಥಿಗಳಿಗೂ ಅನುಕೂಲ, ಉದ್ಯೋಗದಲ್ಲಿ ಬಡ್ತಿ, ಸ್ವಗೃಹದಲ್ಲಿ ಮಂಗಳ ಕಾರ್ಯಗಳು ನೆರವೇರಲಿರುವುದು.



**ಮೀನರಾಶಿ** : ಜನ್ಮ ಗುರು, ಎರಡರಲ್ಲಿ ಕುಜರಾಹುಗಳು. ವ್ಯಯ ದಲ್ಲಿ ಶನಿಮಹಾತ್ಮ. ಅಡಕತ್ತರಿಯಲ್ಲಿ ಸಿಕ್ಕಿದ ಅಡಿಕೆಯಂತಹ ಪರಿಸ್ಥಿತಿ ಉಂಟಾಗಬಹುದು. ಬಂದದ್ದೆಲ್ಲ ಬರಲಿ, ಈಶ್ವರನ ದಯೆ ಒಂದಿರಲಿ. ಆಗ ಎಲ್ಲವನ್ನೂ ಆ ದೇವನೇ ಸರಿ ಮಾಡುತ್ತಾನೆ. ಆರೋಗ್ಯಕ್ಕೆ. ಆರ್ಥಿಕ ವಿಚಾರದಲ್ಲಿ ವ್ಯವಹಾರ ದಲ್ಲಿ ಜಾಗ್ರತೆಯಾಗಿದ್ದು ಮತ್ಸ್ಯಾವತಾರಿ ಭಗವಂತನ ಅಥವಾ ಉಡುಪಿ ಶ್ರೀಕೃಷ್ಣನ ಆರಾಧನೆ ಮಾಡಿದಲ್ಲಿ ಇಷ್ಟಾರ್ಥ ಸಿದ್ಧಿಸುವುದು.

**ಸರ್ವೇಜನಾಃ ಸುಖಿನೋಭವಂತು, ಶುಭಮಸ್ತು.**

## "NICE HOME FOR RENT

## Immediately available for occupation"

We want to "RENT OUT" TO OUR COMMUNITY PEOPLE a 2 bed room flat at GUBBALALA MAIN ROAD (Near Uttarahalli), which is VERY well connected in all aspects,With every small little amenity being next door,right next door. This flat is unique with excellent FAMILY BASED PEOPLE (Majority of them only Brahmins !) as neighbourhood, and very homely environment.

**Interested parties or their references can contact me on priority 9036045819 or 9844079128,**

**Email : tosureshmv @gmail.com;tosureshynk@ gmail.com.Please be informed,**

**HOUSE CAN BE RENTED OUT "ONLY FOR OUR COMMUNITY PEOPLE"**

## ಭಟ್ ಟ್ರಾವೆಲ್ & ಟೂರ್ಸ್

**ರಿಯಾಯಿತಿ ದರದಲ್ಲಿ ವಿದೇಶಿ ಪ್ರವಾಸ**

- 7 ದಿನಗಳ ಸಿಂಗಾಪುರ ಮಲೇಶಿಯಾ
- 5 ದಿನಗಳ ಬಾಲಿ
- 9 ದಿನಗಳ ವಿಯೆಟ್ನಾಂ
- 6 ದಿನಗಳ ಅಂಡಮಾನ್
- 4 ದಿನಗಳ ಮಾಲ್ಡೀವ್ಸ್
- 6 ದಿನಗಳ ದುಬೈ , ಅಬುಧಾಬಿ

**ಪಾಸ್ ಪೋರ್ಟ್ ಮಾಡಿಕೊಡಲಾಗುತ್ತದೆ**

ನಂ. 24 /3 ಮೊದಲನೇ ಮಹಡಿ, 3ನೇ ಕ್ರಾಸ್, 4ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು-560018,
ಮೊಬೈಲ್: 98441 66555, 98440 37295,
ಫೋನ್: 080-2667 2555
E-mail: bhattravelandtours@gmail.com

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)

## ವಧು-ವರ ಮಾಹಿತಿ ಕೇಂದ್ರ, ಬೆಂಗಳೂರು

**ಸ್ಥಳ : ಗಾಯತ್ರಿ ಭವನ**

ನಂ.3070, 14ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ,
ಬನಶಂಕರಿ 2ನೆ ಹಂತ, ಬೆಂಗಳೂರು-70.
ದೂರವಾಣಿ : 080-26770066/26771695
ಸಮಯ : ಸಂಜೆ 5.00 ರಿಂದ 7.00 ರವರೆಗೆ
ಮಂಗಳವಾರ ಮತ್ತು ಶನಿವಾರ

**ನಿಯಮಗಳು :**

1. ವರ/ವಧು ಅಥವಾ ತಾಯಿ ತಂದೆ ಯಾರಾದರು ಒಬ್ಬರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸದಸ್ಯರಾಗಿರಬೇಕು.
2. ವಧು/ವರರ ಪೋಸ್ಟ್ ಕಾರ್ಡ್ ಫೋಟೋ ಮತ್ತು ವಿವರ ತರಬೇಕು.
3. ಶುಲ್ಕ ರೂ. 500/=

**ಸಂಚಾಲಕರು** : ಶ್ರೀಮತಿ ಜಯಲತಾ ಸತ್ಯನಾರಾಯಣ್

**ಸದಸ್ಯರು**

ಶ್ರೀಮತಿ ರಮಾ ಶ್ರೀನಾಥ್, ಶ್ರೀಮತಿ ಪಾರ್ವತಿ ಸ್ವಾಮಿ
ಶ್ರೀಮತಿ ಗಾಯತ್ರಿ ರಾವ್

## ಓದುಗರ ವೇದಿಕೆ

'ವಿಪ್ರನುಡಿ'ಯನ್ನು ಹೆಚ್ಚು ಮೌಲ್ಯಯುತವಾಗಿ ಮೂಡಿಬರಲು ಪತ್ರಿಕೆಯಲ್ಲಿ ಪ್ರಕಟವಾದ ವಿಷಯಗಳನ್ನು ಕುರಿತು ಓದುಗರ ಅಭಿಪ್ರಾಯವು ಅತಿಮಹತ್ವದ್ದಾಗಿದೆ. ಓದುಗರ ತಮ್ಮ ಅಭಿಪ್ರಾಯಗಳನ್ನು ಪತ್ರ / ಈ ಮೇಲ್ ಮೂಲಕವಾಗಿ ಕಳುಹಿಸಬೇಕಾಗಿ ವಿನಂತಿ

–ಸಂಪಾದಕ ಸಮಿತಿ.

ವಿಪ್ರನುಡಿ ಪತ್ರಿಕೆಗೆ ವರದಿ, ಲೇಖನಗಳನ್ನು ಕಳುಹಿಸುವವರು ಬರಹ, ನುಡಿಯಲ್ಲಿ ಟೈಪ್‌ಮಾಡಿ ಈ ಮೇಲ್ ಮುಖಾಂತರವೇ ಕಳುಹಿಸತಕ್ಕದ್ದು.
ಲೇಖನ ವರದಿಗಳನ್ನು ಕಳುಹಿಸಬೇಕಾದ
ಇ-ಮೇಲ್ : e mail : vipranudi@gmail.com

**ವಿಪ್ರನುಡಿ ಮಾಸಪತ್ರಿಕೆಗೆ ರೂ. 500/- ಸಂದಾಯಮಾಡಿ ಚಂದಾದಾರರಾಗಿ**

**ಜಾಹಿರಾತು**

# ಶ್ರೀ ಗುರು ರಾಘವೇಂದ್ರ ಜ್ಯೋತಿಷ್ಯ ಕೇಂದ್ರ



ರಾಷ್ಟ್ರೀಯ ಮಟ್ಟದಲ್ಲಿ ಜನ ಮನ್ನಣೆ ಪಡೆದಿರುವ ತ್ರಿಕಾಲ ಜ್ಞಾನಿಗಳು
ಜ್ಯೋತಿಷ್ಯ ಶಿರೋಮಣಿ ಕೇರಳದ ಸರ್ವಸಿದ್ಧಿ ಸಾಧಕ ವೇದಬ್ರಹ್ಮ

## ಶ್ರೀ ಶ್ರೀ ವಿಜಯೇಂದ್ರ ಗುರೂಜಿ

ಮಂತ್ರಾಲಯ ಶ್ರೀ ಗುರು ರಾಘವೇಂದ್ರ ಸ್ವಾಮಿಗಳ ಮೂಲ ಬೃಂದಾವನದ ಆರಾಧಕರು ಜಾತಕ, ಹಸ್ತ, ಫೋಟೋ, ಮುಖಲಕ್ಷಣ, ಗೋಚಾರಫಲ, ಪಂಚಪಕ್ಷಿ ಶಾಸ್ತ್ರ, ತಾಳೆಗರಿ ಶಾಸ್ತ್ರ, ಅಂಜನ ಶಾಸ್ತ್ರ, ದೈವಪ್ರಶ್ನೆ ನೋಡಿ ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ನಿಖರವಾಗಿತಿಳಿಸುತ್ತಾರೆ. ಶ್ರೀ ಗುರುರಾಯರ ಪಾದಸಾಕ್ಷಿ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಧರ್ಮನಿಷ್ಠೆಯಿಂದ ಪ್ರಾಮಾಣಿಕವಾಗಿ ಕೆಲವೇ ದಿನದಲ್ಲಿ ಶಾಶ್ವತ ಪರಿಹಾರವನ್ನು ಮಾಡಿಕೊಡುತ್ತಾರೆ.

ಮಕ್ಕಳ ಅಸಭ್ಯವರ್ತನೆ, ವಿವಾಹ ವಿಳಂಬ, ಡೈವರ್ಸ್, ಸಂತಾನ ಫಲ, ಉದ್ಯೋಗ, ವ್ಯಾಪಾರದಲ್ಲಿ ನಷ್ಟ ಹಣಕಾಸಿನ ಸಮಸ್ಯೆ, ದಾಂಪತ್ಯ ಕಲಹ, ಆರೋಗ್ಯ ಸಮಸ್ಯೆ, ಪ್ರೇಮಸಂಬಂಧ, ಮಾನಸಿಕ ಕಿರಿಕಿರಿ, ಶತ್ರುಗಳಿಂದ ತೊಂದರೆ, ಅತ್ತೆ-ಸೊಸೆ ಕಿರಿಕಿರಿ, ಜಾಗ-ಜಮೀನು ಸಮಸ್ಯೆ, ಪ್ರೇತ ಬಾಧೆ, ದುಷ್ಟಶಕ್ತಿ ತೊಂದರೆ, ನಿಮ್ಮ ಜೀವನದ ಸರ್ವ ದಾರಿದ್ರ ಸಮಸ್ಯೆಗಳಿಂದ

**ಮುಕ್ತಿ ಹೊಂದಲು ನಿಮಗಿದು ಸುವರ್ಣಾವಕಾಶ**

**ಅತಿ ಶೀಘ್ರ ವಿವಾಹ ಪ್ರಾಪ್ತಿಯಾಗಲು ಶಿವ ಪಾರ್ವತಿ ಸ್ವಯಂವರ ಕವಚವನ್ನು ಸಿದ್ಧಿ ಮಾಡಿಕೊಡುತ್ತಾರೆ. 5 ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ. ದೂರದ ಊರಿನವರಿಗೆ ಫೋನ್ ಮೂಲಕ ಪರಿಹಾರ ತಿಳಿಸುತ್ತಾರೆ**

**ಮೊ. : 9945222228**

ಬರುವ ಮೊದಲು ಭೇಟಿಯ ಸಮಯ ಖಚಿತಪಡಿಸಿಕೊಂಡು ಬನ್ನಿ ನಿಮ್ಮ ಭವಿಷ್ಯದ ಕನಸು ನನಸಾಗಲು ಇಂದೇ ಸಂದರ್ಶಿಸಿ.

ಸಮಯ : ಬೆಳಗ್ಗೆ 10.45 ರಿಂದ 2.30, 3.00 ರಿಂದ 9.00ರವರೆಗೆ

ನಂ.157, ಶ್ರೀರಾಮ ಪ್ಲಾಜಾ, ಸತೀಶ್ ಸ್ಟೋರ್ಸ್ ಎದುರು, ಬಸವನಗುಡಿ, ಬೆಂಗಳೂರು-4.


## ಸೂಚನೆ

ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ಈಗಿರುವ ಸದಸ್ಯರ ಪಟ್ಟಿಯನ್ನು ಪರಿಶೀಲಿಸಿ ಪರಿಷ್ಕರಣೆ ಮಾಡಲು ಶ್ರೀ ವಿ. ಸತ್ಯೇಂದ್ರರವರನ್ನು ಸಂಚಾಲಕರನ್ನಾಗಿ ನೇಮಿಸಿ ಉಪಸಮಿತಿಯನ್ನು ರಚಿಸಿರುತ್ತಾರೆ.

ಸಂಚಾಲಕರು ಮಹಾಸಭಾದ ಕೇಂದ್ರಕಾರಿಣಿ ಸಭೆಯ ಸದಸ್ಯರನ್ನು ಸಂಪರ್ಕಿಸಿ ತಮ್ಮ ವ್ಯಾಪ್ತಿಗೆ ಬರುವ ಮಹಾಸಭಾ ಸದಸ್ಯರ ವಿವರವನ್ನು ಸಲ್ಲಿಸುವಂತೆ ಕೋರುತ್ತೇವೆ. ದಯಮಾಡಿ ಸಹಕರಿಸಬೇಕೆಂದು ವಿನಂತಿಸುತ್ತೇನೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ :
ವಿ. ಸತ್ಯೇಂದ್ರ –9844001238
ಎಸ್. ಶ್ರೀಧರಮೂರ್ತಿ–ಪ್ರಧಾನ ಕಾರ್ಯದರ್ಶಿ

## ಉದಾರ ದೇಣಿಗೆ ನೀಡಲು ಮನವಿ

ಸನ್ಮಾನ್ಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರ ಸಮರ್ಥ ಮಾರ್ಗದರ್ಶನದಲ್ಲಿ ಗಾಯತ್ರೀ ಭವನ ಮತ್ತು ವಿದ್ಯಾವಾಸಿನಿ ಮಹಿಳಾ ವಿದ್ಯಾರ್ಥಿನಿಲಯದ ನವೀಕರಣವನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಕಾಮಗಾರಿಗೆ ಸಾಕಷ್ಟು ಧನ ಸಂಪನ್ಮೂಲದ ಅಗತ್ಯವಿದೆ. ಈ ದಿಶೆಯಲ್ಲಿ ತಮ್ಮ ಸಹಾಯವನ್ನು ನಿರೀಕ್ಷಿಸುತ್ತೇವೆ. ಮಹಾಸಭಾದ ಅಂಗಸಂಸ್ಥೆಯಾದ ಸಪ್ತರ್ಷಿ ಫೌಂಡೇಷನ್ ಹೆಸರಿನಲ್ಲಿ ತಾವು ಚೆಕ್ ಅನ್ನು ನೀಡಬಹುದು. ತಾವು ಉದಾರವಾಗಿ ನೀಡಿದ ಹಣಕ್ಕೆ 80ಜಿ ತೆರಿಗೆ ವಿನಾಯಿತಿ ಇದೆ. ತಾವು ನಮ್ಮೊಂದಿಗೆ ಈ ಕಾರ್ಯದಲ್ಲಿ ಕೈಜೋಡಿಸಬೇಕಾಗಿ ಸವಿನಯ ಕೋರಿಕೆ.

**ಬ್ಯಾಂಕ್ ವಿವರ**

| | | |
|---|---|---|
| ಬ್ಯಾಂಕ್ | : | ಕರ್ನಾಟಕ ಬ್ಯಾಂಕ್ |
| ಖಾತಾ ಹೆಸರು | : | ಸಪ್ತರ್ಷಿ ಫೌಂಡೇಷನ್ |
| ಖಾತಾ ಸಂಖ್ಯೆ | : | 1072500102061001 |
| ಐಎಫ್‌ಎಸ್‌ಸಿ | : | KARB0000107 |
| ಶಾಖೆ | : | ಬನಶಂಕರಿ ಎರಡನೇ ಹಂತ, ಬೆಂಗಳೂರು |

ಜಾಹಿರಾತು

# ಶ್ರೀ ವಾದಿರಾಜ ವಿಜಯ ಧಾರ್ಮಿಕ ಮಂದಿರ

# 124, 2ನೇ ಮುಖ್ಯರಸ್ತೆ, ಶ್ರೀ ಮಂಜುನಾಥ ದೇವಸ್ಥಾನದ ಎದುರು, ಸೀತಾ ಸರ್ಕಲ್,
ಬ್ಯಾಂಕ್ ಕಾಲೋನಿ, ಬೆಂಗಳೂರು–560 050.

**ಸ್ಥಳದ ಬಾಡಿಗೆ ಇರುವುದಿಲ್ಲ**

ಉಪನಯನ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮಹವನ,
ಸತ್ಯನಾರಾಯಣ ಪೂಜೆ, ಇನ್ನಿತರ ದೇವತಾ ಕಾರ್ಯಗಳು,
ವೈಕುಂಠ ಸಮಾರಾಧನೆ ಪ್ರಯುಕ್ತ ಅನ್ನದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು
ಇತರ ಶುಭ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.
ಅಡಿಗೆಯನ್ನು ಮಡಿಯಲ್ಲಿ ಮಾಡಲಾಗುವುದು.

**ವಿವರಗಳಿಗೆ ಕಾರ್ಯಾಲಯವನ್ನು ಸಂಪರ್ಕಿಸಿ :**

**ದೂರವಾಣಿ : 080–26793054 ಮೊಬೈಲ್ 8277433666**

ಜಾಹಿರಾತು

# ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ

## Sri Srinivasa Nilaya Dharmika Sabha Mandira

ಸೀತಾ ಸರ್ಕಲ್‌ನಿಂದ ಗಿರಿನಗರಕ್ಕೆ ಹೋಗುವ ಮಾರ್ಗ
ಶ್ರೀ ವಿವೇಕಾನಂದ ಪಾರ್ಕ್ ಎದುರು, ಬೆಂಗಳೂರು-560085

ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ ಎಂಬ ನೂತನ ಕಟ್ಟಡದಲ್ಲಿ ಉಪನಯನ, ಮದುವೆ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮ-ಹವನ ಸತ್ಯನಾರಾಯಣ ಪೂಜೆ ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ, ಅನ್ನ ದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು ಇತರ ಶುಭ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.

**ಸ್ಥಳದ ಬಾಡಿಗೆ ಇರುವುದಿಲ್ಲ.**

ದಕ್ಷಿಣ ಮತ್ತು ಉತ್ತರ ಭಾರತದ
ಅಡುಗೆಯನ್ನು ಮಡಿಯಲ್ಲಿ ಮಾಡಲಾಗುವುದು

**ವಿವರಗಳಿಗಾಗಿ ಕಾರ್ಯಾಲಯವನ್ನು ಸಂಪರ್ಕಿಸಿ**

**ದೂರವಾಣಿ : 2672 2267, 98866 55755**



# ಉದಾರ ದೇಣಿಗೆ

ಖ್ಯಾತ ವಕೀಲರಾದ ಹಾಗೂ ಅನೇಕ ಸಂಘ ಸಂಸ್ಥೆಗಳಲ್ಲಿ
ಸಕ್ರಿಯವಾಗಿ ತೊಡಗಿಸಿಕೊಂಡಿರುವ, ಬೆಂಗಳೂರಿನಲ್ಲಿ ನೆಲೆಸಿರುವ
**ಶ್ರೀ ವೈ.ಎ. ಸುಧಾಕರ ಬಾಬುರವರು**
ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಗೆ
ಒಂದು ಲಕ್ಷ ರೂ.ಗಳನ್ನು ದೇಣಿಗೆ ನೀಡಿರುತ್ತಾರೆ.
ಶ್ರೀಯುತರಿಗೆ ಮಹಾಸಭೆಯ ಹೃತ್ಪೂರ್ವಕವಾದ ಕೃತಜ್ಞತೆಗಳು.

ಸರ್ವೇಜನಾಃ ಸುಖಿನೋ ಭವಂತು
ಧಿಯೋಯೋನಃ ಪ್ರಚೋದಯಾತ್
ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ(ರಿ)
ಬೆಂಗಳೂರು






# ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)

ಗಾಯತ್ರೀ ಭವನ, 3070, 9ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560 070

## ಸಾಂಸ್ಕೃತಿಕ ವಿಭಾಗದ ಚಟುವಟಿಕೆಗಳ ಉದ್ಘಾಟನಾ ಸಮಾರಂಭ

**ಉದ್ಘಾಟನೆ**
**ಪಂಡಿತ್ ಶ್ರೀ ಡಾ|| ಪ್ರವೀಣ್ ಗೊಡ್ಖಿಂಡಿ**
ಪ್ರಸಿದ್ಧ ವೇಣುವಾದಕರು

**ಮುಖ್ಯ ಅತಿಥಿಗಳು**
**ಸನ್ಮಾನ್ಯ ಶ್ರೀ ರಾಘವನ್**
ಅಧ್ಯಕ್ಷರು, ಭಾರತೀಯ ವಿದ್ಯಾ ಭವನ

**ಸನ್ಮಾನ್ಯ ಶ್ರೀ ಹೆಚ್.ಎನ್. ಸುರೇಶ್**
ನಿರ್ದೇಶಕರು, ಭಾರತೀಯ ವಿದ್ಯಾ ಭವನ

**30-07-2022**
**ಶನಿವಾರ**

**ಎಲ್ಲರಿಗೂ ಆದರದ ಸ್ವಾಗತ**

**ಅಧ್ಯಕ್ಷತೆ**
**ಸನ್ಮಾನ್ಯ ಶ್ರೀ ಅಶೋಕ ಹಾರನಹಳ್ಳಿ**
ಅಧ್ಯಕ್ಷರು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)

ದಿನಾಂಕ 30-07-2022 ಶನಿವಾರ ಸಮಯ : ಸಂಜೆ 5.00 ಘಂಟೆಗೆ

**ಸ್ಥಳ : ಕಿಂಚ ಸಭಾಂಗಣ, ಭಾರತೀಯ ವಿದ್ಯಾಭವನ,**
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 001

PERIODICAL RATE

VIPRANUDI KANNADA MONTHLY.
RNI No. KARKAN/2009/29931. Posted at BG PSO, Mysore Road, Bangalore-560 026,
Permitted to Post on 17-07-2022 Date of Publishing 9-07-2022

ಶುಭಾಶಯಗಳು

ಡಾ|| ಉದಯ್ ಬಿ. ಗರುಡಾಚಾರ್
ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ



Dr. Uday B. Garudachar
MLA, Chickpet Assembly Constituency

/BGUdayBJP www.udaygarudachar.in

If undelivered please return to :

**VIPRANUDI**

Akhila Karnataka Brahmana Mahasabha (R.)
"Gayathri Bhavana", No. 3070, 9th Main Road
Gayathri Bhavana Road, (14th Cross) BSK 2nd Stage
BANGALORE-560 070. Phone : 26771695

VIPRANUDI-Kannada Monthly, Published & Owned by President, On behalf of Akhila Karnataka Brahamana Mahasabha (R)
"Gayathri Bhavana", No. 3070, 9th Main Road, Gaythri Bhavana Road (14th Cross) BSK 2nd Stage, Bangalore-560 070.
And Printed at Parimala Mudranalaya, No. 184, Allama Prabhu Road, 14th Main, Hanumanthanagar, Bangalore-560 050, Editor : Prof. M.K. Sridhar